11	F	೧೧	ಶು	ಕೃಷ್ಣ	೨	೧- ೫	ಭರಣೀ	೨೪-೨೯		೨೭			೧೫
12	S	೧೨	ಶ	ಕೃಷ್ಣ	೩	೩-೩೧	ಕೃತ್ತಿಕಾ	೨೮-೫೮		೨೮			೧೬
13	SUN	೧೩	ಆ	ಕೃಷ್ಣ	೪	೭-೪೦	ರೋಹಿಣೀ	೪೫- ೦		೨೯		ಸಫರ	೧೭
14	M	೧೪	ಚ	ಕೃಷ್ಣ	೫	೧೨-೫೦	ಮೃಗಶಿರಾ	೫೨- ೮		೩೦			೧೮
15	Tu	೧೫	ಮ	ಕೃಷ್ಣ	೬	೧೯- ೭	ಆರ್ದ್ರಾ	೫೯-೫೨		೧			೧೯
16	W	೧೬	ಬು	ಕೃಷ್ಣ	೭	೨೫-೪೫	ಪುನರ್ವಸೂ	೬೦- ೦		೨			೨೦
17	Th	೧೭	ಗು	ಕೃಷ್ಣ	೮	೩೧-೫೯	ಪುನರ್ವಸೂ	೭-೫೫		೩			೨೧
18	F	೧೮	ಶು	ಕೃಷ್ಣ	೯	೩೭-೧೮	ಪುಷ್ಯಾ	೧೪-೨೧		೪			೨೨
19	S	೧೯	ಶ	ಕೃಷ್ಣ	೧೦	೪೩- ೮	ಆಶ್ಲೇಷಾ	೨೦-೨೦		೫			೨೩
20	SUN	೨೦	ಆ	ಕೃಷ್ಣ	೧೧	೪೯-೨೦	ಮಘಾ	೨೪-೨೦		೬			೨೪
21	M	೨೧	ಚ	ಕೃಷ್ಣ	೧೨	೪೯-೩೪	ಹುಬ್ಬಾ	೨೬-೨೨		೭			೨೫
22	Tu	೨೨	ಮ	ಕೃಷ್ಣ	೧೩	೪೩-೪೪	ಉತ್ತರಾ	೨೬-೪೨		೮			೨೬
23	W	೨೩	ಬು	ಕೃಷ್ಣ	೧೪	೪೮- ೨	ಹಸ್ತಾ	೨೫-೨೪		೯			೨೭
24	Th	೨೪	ಗು	ಅಮಾವಾಸ್ಯೆ	☺	೪೪-೨೨	ಚಿತ್ರಾ	೨೨-೪೪		೧೦			೨೮
25	F	೨೫	ಶು	ಶುದ್ಧ	೧	೨೭-೪೪	ಸ್ವಾತೀ	೧೮-೨೫		೧೧			೨೯
26	S	೨೬	ಶ	ಶುದ್ಧ	೨	೨೧-೪೯	ವಿಶಾಖಾ	೧೪-೪೦		೧೨			೩೦
27	SUN	೨೭	ಆ	ಶುದ್ಧ	೩	೧೪-೩೮	ಅನುರಾಧಾ	೯-೩೯		೧೩		ರಬಿಉಲಾಖರ್	೧
28	M	೨೮	ಚ	ಶುದ್ಧ	೪	೮-೨೫	ಜ್ಯೇಷ್ಠಾ	೫-೧೭		೧೪			೨
29	Tu	೨೯	ಮ	ಶುದ್ಧ	೫	೨- ೯	ಮೂಲಾ	೦-೪೯		೧೫			೩
30	W	೩೦	ಬು	ಶುದ್ಧ	೬	೫೬- ೮	ಉತ್ತರಾಷಾಢ	೫೩-೨೪		೧೬			೪
31	Th	೩೧	ಗು	ಶುದ್ಧ	೭	೪೯-೫೫	ಶ್ರವಣಾ	೫೦-೫೭		೧೭			೫

ಭೂಮಿಯು ಇರುವ ಮಟ್ಟಿಗೂ ಬಿತ್ತುವ ಕಾಲವೂ, ಕೊಯ್ಯುವ ಕಾಲವೂ, ತಂಪೂ, ಶಿಖೆಯೂ, ಬೇಸಿಗೇ ಕಾಲವೂ, ಹಿಮ ಕಾಲವೂ, ಹಗಲೂ, ರಾತ್ರಿಯೂ, ನಿಂತು ಹೋಗವು. ಉತ್ಪತ್ತಿ. ೮, ೨೨.

1889 OCTOBER—ಒಕ್ತೋಬರ ೧೮೮೯

ತಾರೀಖು	ಸೂರ್ಯ				ಚಂದ್ರ						ಕುಜಾದಿ ಪಂಚಗ್ರಹರ ಉಪಯೋಜ್ಯಾಸ್ತಮಯಗಳನ್ನು ತೋರಿಸುವ ಪಟ್ಟಿ				
	ಉದಯ		ಅಸ್ತ		ಉದಯ		ಉಚ್ಚ		ಅಸ್ತ		ಗ್ರಹ	ತಾರೀಖು	ಉದಯ	ಉಚ್ಚ	ಅಸ್ತಮಯ
	ಘಂಟೆ	ನಿಮಿಷ	ಘಂಟೆ	ನಿಮಿಷ	ಘಂಟೆ	ನಿಮಿಷ	ಘಂಟೆ	ನಿಮಿಷ	ಘಂಟೆ	ನಿಮಿಷ					
					ಹಗಲು		ಸಾಯಂ.		ರಾತ್ರಿ						
೧	೫	೫೧	೫	೪೯	೧೧	೫೪	೪	೨೪	೧೧	೧೪					
					ಮಧ್ಯಾನ್ನ								ಪ್ರಾತಃ.	ಪ್ರಾತಃ.	ಸುಧ್ಯಾ.
೨	೫	೫೧	೫	೪೮	೧೧	೫೫	೫	೨೪	ಪ್ರಾತಃ.				ಘ. ನಿ.	ಘ. ನಿ.	ಘ. ನಿ.
೩	೫	೫೧	೫	೪೮	೧	೫೫	೫	೨೩	೦	೧೨		೬	೫ ೨೯	೯ ೫೬	೫ ೪೫
೪	೫	೫೧	೫	೪೮	೧	೨೯	೬	೨೨	೧	೧೪		೧೬	೫ ೧೫	೯ ೨೦	೫ ೨೬
೫	೫	೫೧	೫	೪೭	೨	೦೪	೭	೨೧	೨	೧೬		೨೬	೫ ೦	೮ ೪೫	೫ ೦
೬	೫	೫೧	೫	೪೭	೨	೪೦	೮	೨೦	೩	೧೮					
೭	೫	೫೧	೫	೪೭	೩	೧೭	೯	೧೯	೪	೨೦					
೮	೫	೫೧	೫	೪೬	೪	೫೪	೧೦	೧೮	೫	೨೨					
					ಪ್ರಾತಃ.								ಪ್ರಾತಃ.	ಹಗಲು	ಸಾಯಂ
೯	೫	೫೧	೫	೪೬	೫	೫೩	೧೧	೧೭	೬	೨೪			ಘ. ನಿ.	ಘ. ನಿ.	ಘ. ನಿ.
೧೦	೫	೫೧	೫	೪೬	೬	೫೨	೧೨	೧೬	೭	೨೫		೬	೫ ೫೪	೧೧ ೪೦	೫ ೨೬
೧೧	೫	೫೧	೫	೪೬	೭	೫೨	೧೩	೧೬	೮	೨೬		೧೬	೫ ೫೪	೧೧ ೨೬	೫ ೧೯
೧೨	೫	೫೧	೫	೪೬	೮	೫೩	೧೪	೧೬	೯	೨೭		೨೬	೫ ೫೪	೧೧ ೫೨	೫ ೧೨
೧೩	೫	೫೧	೫	೪೬	೯	೫೪	೧೫	೧೬	೧೦	೨೮					
೧೪	೫	೫೧	೫	೪೬	೧೦	೫೬	೧೬	೧೬	೧೧	೨೯					
೧೫	೫	೫೧	೫	೪೬	೧೧	೫೮	೧೭	೧೬	೧೨	೩೦					
					ಮಧ್ಯಾನ್ನ								ಹಗಲು	ಸಾಯಂ	ರಾತ್ರಿ
೧೬	೫	೫೧	೫	೪೬	೧೨	೦೧	೧೮	೧೬	೧೩	೩೧			ಘ. ನಿ.	ಘ. ನಿ.	ಘ. ನಿ.
೧೭	೫	೫೧	೫	೪೬	೧೨	೦೪	೧೯	೧೬	೧೪	೩೨		೬	೧೧ ೨೦	೪ ೫೬	೧೦ ೫೪
೧೮	೫	೫೧	೫	೪೬	೧೨	೦೭	೨೦	೧೬	೧೫	೩೩		೧೬	೧೦ ೪೬	೪ ೪೦	೧೦ ೦
೧೯	೫	೫೧	೫	೪೬	೧೨	೧೦	೨೧	೧೬	೧೬	೩೪		೨೬	೧೦ ೧೫	೪ ೪೦	೯ ೩೯
೨೦	೫	೫೧	೫	೪೬	೧೨	೧೩	೨೨	೧೬	೧೭	೩೫					
೨೧	೫	೫೧	೫	೪೬	೧೨	೧೬	೨೩	೧೬	೧೮	೩೬					
೨೨	೫	೫೧	೫	೪೬	೧೨	೧೯	೨೪	೧೬	೧೯	೩೭					
೨೩	೫	೫೧	೫	೪೬	೧೨	೨೨	೨೫	೧೬	೨೦	೩೮					
೨೪	೫	೫೧	೫	೪೬	೧೨	೨೫	೨೬	೧೬	೨೧	೩೯					
					ಮಧ್ಯಾನ್ನ								ಪ್ರಾತಃ.	ಪ್ರಾತಃ.	ಮಧ್ಯಾ.
೨೫	೫	೫೧	೫	೪೬	೧೨	೨೮	೧	೧೬	೨೨	೪೦			ಘ. ನಿ.	ಘ. ನಿ.	ಘ. ನಿ.
೨೬	೫	೫೧	೫	೪೬	೧೨	೩೧	೧	೧೬	೨೩	೪೧		೬	೫ ೪೯	೮ ೩೨	೫ ೧೫
೨೭	೫	೫೧	೫	೪೬	೧೨	೩೪	೧	೧೬	೨೪	೪೨		೧೬	೫ ೩೫	೮ ೧೬	೪ ೫೯
೨೮	೫	೫೧	೫	೪೬	೧೨	೩೭	೧	೧೬	೨೫	೪೩		೨೬	೫ ೨೦	೮ ೦	೪ ೪೪
೨೯	೫	೫೧	೫	೪೬	೧೨	೪೦	೧	೧೬	೨೬	೪೪					
೩೦	೫	೫೧	೫	೪೬	೧೨	೪೩	೧	೧೬	೨೭	೪೫					
೩೧	೫	೫೧	೫	೪೬	೧೨	೪೬	೧	೧೬	೨೮	೪೬					
					ಪ್ರಾತಃ.										

1889 NOVEMBER
30 DAYS

೧೮೮೯ ನವಂಬರ
೩೦ ದಿವಸಗಳು

ನವಂಬರ ೭ ಕಾರ್ತಿಕ ಪೂರ್ಣಿಮಿ, ಸಾಯಂಕಾಲ ಘಂಟೆ ೫ ನಿಮಿಷ ೫೫
" ೧೬ ಕೃಷ್ಣಾರ್ಧಚಂದ್ರ, ಪ್ರಾತಃಕಾಲ " ೧ " ೫೫
" ೨೩ ಕಾರ್ತಿಕ ಅಮಾವಾಸ್ಯೆ, " " ೬ " ೪೫
" ೨೯ ಶುಕ್ಲಾರ್ಧಚಂದ್ರ, ಸಾಯಂಕಾಲ " ೧೦ " ೨೪

ವಿಲಾಯತಿ ಕ್ರಮದ ಚಂದ್ರಸ್ಥಿತಿಗಳು

ಅಂಗ್ಲ				ಚಾಂದ್ರಮಾನ			ನಕ್ಷತ್ರ		ಸಾರಮಾನ		ಮಹಮ್ಮದಿ	
Date	Day	ತಾರೀಖಿ	ವಾರ	ತಿಂಗಳು	ತಿ	ಘಳಿಗೆ ವೈಘಳಿಗೆ	ಹೆಸರು	ಘಳಿಗೆ ವೈಘಳಿಗೆ	ಸಂವತ್ಸರ	ಸಂಖ್ಯೆ	ತಿಂಗಳು	ಸಂ
1	F	೧	ಶು		೯	೪೨-೦೬	ಧನಿಷ್ಠಾ	೪೮-೫೨		೦೮		೭
2	S	೨	ಶ		೧೦	೫೯-೫೮	ಶತಭಿಷಾ	೪೭-೦೫		೦೯		೮
3	SUN	೩	ಆ		೧೧	೫೭-೧೦	ಪೂರ್ವಾಭಾದ್ರ	೪೭-೫೯		೧೦		೯
4	M	೪	ಚ		೧೨	೫೫-೫೯	ಉತ್ತರಾಭಾದ್ರ	೪೭-೫೮		೧೧		೧೦
5	Tu	೫	ಮ		೧೩	೫೫-೧೯	ರೇವತೀ	೪೮-೦೫		೧೨		೧೧
6	W	೬	ಬು		೧೪	೫೬- ೦	ಅಶ್ವಿನೀ	೫೦-೫೯		೧೩		೧೨
7	Th	೭	ಗು	ಕೃ. ಶು. ಜ.	೧೫	೫೭-೫೯	ಭರಣೀ	೫೪- ೨		೧೪		೧೩
8	F	೮	ಶು		೧	೪೦-೫೨	ಕೃತ್ತಿಕಾ	೫೮-೫೯		೧೫		೧೪
9	S	೯	ಶ		೨	೪೫-೦೦	ರೋಹಿಣೀ	೬೦- ೦		೧೬		೧೫
10	SUN	೧೦	ಆ		೩	೫೦-೫೬	ರೋಹಿಣೀ	೪-೪೦		೧೭		೧೬
11	M	೧೧	ಚ		೪	೫೬-೫೫	ಮೃಗಶಿರಾ	೦೨-೨೦		೧೮		೧೭
12	Tu	೧೨	ಮ		೫	೬೦- ೦	ಆರ್ದ್ರಾ	೨೯-೦೬		೧೯		೧೮
13	W	೧೩	ಬು		೬	೫-೪೫	ಪುನರ್ವಸೂ	೨೬- ೮		೨೦		೧೯
14	Th	೧೪	ಗು	ಕಾರ್ತಿಕ ಕೃಷ್ಣಪಕ್ಷ	೭	೧೦-೨೨	ಪುಷ್ಯಾ	೪೪-೪೦		೦		೨೦
15	F	೧೫	ಶು		೮	೧೬-೧೬	ಆಶ್ಲೇಷಾ	೪೦-೨೨		೨		೨೧
16	S	೧೬	ಶ		೯	೨೦-೫೭	ಮಘಾ	೪೬-೫೬		೩		೨೨
17	SUN	೧೭	ಆ		೧೦	೨೫-೪೪	ಹುಬ್ಬಾ	೫೦- ೫		೪		೨೩
18	M	೧೮	ಚ		೧೧	೨೪-೫೫	ಉತ್ತರಾ	೫೧-೫೧		೫		೨೪
19	Tu	೧೯	ಮ		೧೨	೨೫-೨೨	ಹಸ್ತಾ	೫೦-೫೬		೬		೨೫
20	W	೨೦	ಬು		೧೩	೨೦-೧೦	ಚಿತ್ರಾ	೪೮-೨೮		೭		೨೬
21	Th	೨೧	ಗು		೧೫	೧೫-೧೬	ಸ್ವಾತೀ	೪೪-೫೫		೮		೨೭
22	F	೨೨	ಶು		೧೪	೯- ೨	ವಿಶಾಖಾ	೫೯-೫೧		೯		೨೮
23	S	೨೩	ಶ		●	೧-೪೫	ಅನುರಾಧಾ	೫೫-೫೨		೧೦		೨೯
24	SUN	೨೪	ಆ		೨	೪೫-೫೨	ಜ್ಯೇಷ್ಠಾ	೨೨-೧೪		೧೧		೩೦
25	M	೨೫	ಚ	ಮಾರ್ಗಶಿರ ಶುಕ್ಲಪಕ್ಷ	೩	೫೨-೫೪	ಮೂಲಾ	೨೧- ೫		೧೨		೧
26	Tu	೨೬	ಮ		೪	೫೦- ೯	ಪೂರ್ವಾಷಾಢ	೧೫-೧೫		೧೩		೨
27	W	೨೭	ಬು		೫	೨೫-೨೫	ಉತ್ತರಾಷಾಢ	೧೦- ೧		೧೪		೩
28	Th	೨೮	ಗು		೬	೧೭-೪೦	ಶ್ರವಣಾ	೫-೪೬		೧೫		೪
29	F	೨೯	ಶು		೭	೧೫- ೪	ಧನಿಷ್ಠಾ	೨-೫೬		೧೬		೫
30	S	೩೦	ಶ		೮	೯-೪೭	ಶತಭಿಷಾ	೦-೪೬		೧೭		೬

ದರಿದ್ರನನ್ನು ಪರಾಮರಿಸ ಬುದ್ಧಿಯುಳ್ಳವನು ಭಾಗ್ಯವಂತನು;
ಕೇಡಿನ ದಿವಸದಲ್ಲಿ ಯೆಹೋವನು ಆವನನ್ನು ತಪ್ಪಿಸುವನು. ಕೀರ್ತ. ೪೧, ೧.

1889 NOVEMBER—ನವಂಬರ ೧೮೮೯

ತಾರೀಕು	ಸೂರ್ಯ ಉದಯ ಘಂಟೆ	ಸೂರ್ಯ ಉದಯ ನಿಮಿಷ	ಸೂರ್ಯ ಅಸ್ತ ಘಂಟೆ	ಸೂರ್ಯ ಅಸ್ತ ನಿಮಿಷ	ಚಂದ್ರ ಉದಯ ಘಂಟೆ	ಚಂದ್ರ ಉದಯ ನಿಮಿಷ	ಚಂದ್ರ ಉಚ್ಚ ಘಂಟೆ	ಚಂದ್ರ ಉಚ್ಚ ನಿಮಿಷ	ಚಂದ್ರ ಅಸ್ತ ಘಂಟೆ	ಚಂದ್ರ ಅಸ್ತ ನಿಮಿಷ
೧	೫	೫೫	೫	೫೨	೧೨	೧೬	೬	೨೨	೧೨	೪೧
೨	೫	೫೬	೫	೫೨	೧	೪	೭	೨	೧	೬
೩	೫	೫೬	೫	೫೨	೧	೪೭	೭	೪೨	೧	೪೪
೪	೫	೫೭	೫	೫೧	೨	೩೦	೭	೫೮	೨	೪೮
೫	೫	೫೭	೫	೫೧	೨	೫೩	೮	೩೫	೨	೫೮
೬	೫	೫೭	೫	೫೦	೩	೧೮	೮	೧೨	೩	೩೮
೭	೫	೫೮	೫	೫೦	೪	೪೨	೮	೪೯	೪	೨೦
೮	೫	೫೮	೫	೫೦	೫	೬೭	೯	೨೬	೫	೧೨
೯	೫	೫೮	೫	೫೦	೬	೫೩	೧೦	೨	೬	೦
೧೦	೫	೫೯	೫	೫೦	೭	೪೨	೧೦	೩೮	೬	೫೩
೧೧	೫	೫೯	೫	೪೯	೮	೩೨	೧೧	೧೪	೭	೪೬
೧೨	೫	೫೯	೫	೪೯	೯	೨೨	೧೧	೫೦	೮	೪೦
೧೩	೫	೫೯	೫	೪೯	೧೦	೧೨	ಮಧ್ಯಾನ್ನ	೨೬	೯	೩೪
೧೪	೫	೫೯	೫	೪೯	೧೧	೦	೦	೦	೧೦	೨೭
೧೫	೫	೫೯	೫	೪೯	ಪ್ರಾತಃ.	೪	೦	೩೪	೧೧	೨೦
೧೬	೫	೫೯	೫	೪೯	೦	೫೦	೧	೨೮	ಮಧ್ಯಾನ್ನ	೧೨
೧೭	೫	೫೯	೫	೪೯	೧	೩೬	೨	೨೨	೦	೦
೧೮	೫	೫೯	೫	೪೯	೨	೨೨	೩	೧೬	೧	೫೭
೧೯	೫	೫೯	೫	೪೯	೩	೧೦	೪	೧೦	೨	೫೩
೨೦	೫	೫೯	೫	೪೯	೩	೫೮	೪	೫೮	೩	೪೯
೨೧	೫	೫೯	೫	೪೯	೪	೪೭	೫	೪೫	೪	೪೫
೨೨	೫	೫೯	೫	೪೯	೫	೩೬	೬	೩೩	೫	೪೨
೨೩	೫	೫೯	೫	೪೯	೬	೨೭	೭	೨೨	೬	೪೨
೨೪	೫	೫೯	೫	೪೯	೭	೨೦	೮	೧೨	೭	೪೩
೨೫	೫	೫೯	೫	೪೯	೮	೧೪	೯	೦	೮	೪೬
೨೬	೫	೫೯	೫	೪೯	೯	೧೦	೯	೪೮	೯	೫೦
೨೭	೫	೫೯	೫	೪೯	೧೦	೭	೧೦	೩೭	೧೦	೫೭
೨೮	೫	೫೯	೫	೪೯	೧೧	೦	೧೧	೨೭	ಮಧ್ಯಾನ್ನ	೬
೨೯	೫	೫೯	೫	೪೯	ಮಧ್ಯಾನ್ನ	೪	೧೨	೧೮	೦	೧೪
೩೦	೫	೫೯	೫	೪೯	೦	೩೨	೧	೮	೦	೨೨
೩೧	೫	೫೯	೫	೪೯	೦	೫೯	೧	೫೮	೦	೩೦

ಕುಜಾದಿ ಪಂಚಗ್ರಹರ ಉದಯೋಚ್ಚಾಸ್ತಮಯಗಳನ್ನು ತೋರಿಸುವ ಪಟ್ಟಿ

ಗ್ರಹ	ತಾರೀಕು	ಉದಯ	ಉಚ್ಚ	ಅಸ್ತ
ಕುಜ		ಪ್ರಾತಃ.	ಪ್ರಾತಃ.	ಮಧ್ಯಾ.
		ಘ. ನಿ.	ಘ. ನಿ.	ಘ. ನಿ.
	೧	೬ ೪೬	೯ ೪೯	೧ ೫೦
	೧೬	೬ ೨೧	೯ ೨೧	೧ ೨೧
	೩೨	೬ ೧೫	೯ ೧೩	೧ ೧೧
ಬುಧ		ಪ್ರಾತಃ.	ಪ್ರಾತಃ.	ಸಾಯಂ
		ಘ. ನಿ.	ಘ. ನಿ.	ಘ. ನಿ.
	೧	೪ ೪೭	೧೦ ೪೦	೪ ೫೨
	೧೬	೫ ೧೨	೧೦ ೫೯	೪ ೪೬
	೩೨	೫ ೪೨	೧೧ ೨೩	೫ ೪
ಗುರು		ಪ್ರಾತಃ.	ಪಗಲು	ರಾತ್ರಿ
		ಘ. ನಿ.	ಘ. ನಿ.	ಘ. ನಿ.
	೧	೭ ೧	೬ ೧೯	೬ ೫೬
	೧೬	೭ ೧೦	೬ ೪೯	೬ ೨೯
	೩೨	೬ ೪೦	೭ ೧೯	೬ ೫೬
ಶುಕ್ರ		ಪ್ರಾತಃ.	ಪ್ರಾತಃ.	ಸಾಯಂ
		ಘ. ನಿ.	ಘ. ನಿ.	ಘ. ನಿ.
	೧	೪ ೧೬	೧೦ ೧೧	೪ ೬
	೧೬	೪ ೨೯	೧೦ ೧೯	೪ ೯
	೩೨	೪ ೪೨	೧೦ ೨೯	೪ ೧೫
ಶನಿ		ಪ್ರಾತಃ.	ಪ್ರಾತಃ.	ಮಧ್ಯಾ.
		ಘ. ನಿ.	ಘ. ನಿ.	ಘ. ನಿ.
	೧	೧ ೬	೬ ೧೪	೧ ೨೫
	೧೬	೦ ೨೬	೬ ೬೯	೧ ೨೪
	೩೨	ರಾತ್ರಿ ೧೧ ೪೯	೬ ೦	೧ ೧೧

1889 DECEMBER

31 DAYS

೧೮೮೯ ದಶಂಬರ

೩೧ ದಿವಸಗಳು

ದಶಂಬರ ೭ ಮಾರ್ಗಶಿರ ಪೂರ್ಣಿಮಾ, ಮಧ್ಯಾನ್ಹ ಘಂಟೆ ೨ ನಿಮಿಷ ೫೨
" ೧೫ ಕೃಷ್ಣಾರ್ಧಚಂದ್ರ, ಸಾಯಂಕಾಲ " ೭ " ೫೪ } ವಿಲಾಯತಿ ಕ್ರಮದ
" ೨೨ ಮಾರ್ಗಶಿರ ಅಮಾವಾಸ್ಯೆ, " " ೫ " ೫೨ } ಚಂದ್ರಸ್ಥಿತಿಗಳು
" ೨೯ ಶುಕ್ಲಾರ್ಧಚಂದ್ರ, ಪ್ರಾತಃಕಾಲ " ೧೦ " ೧೬

ಅಂಗ್ಲ				ಚಾಂದ್ರಮಾನ			ನಕ್ಷತ್ರ		ಸೌರಮಾನ		ಮಹಮ್ಮದಿ	
Date	Day	ತಾರೀಖು	ವಾರ	ತಿಂಗಳು	ತಿಥಿ	ಘಂ ನಿ ಸೆ	ಹೆಸರು ಘಂ ನಿ ಸೆ	ಘಂ ನಿ ಸೆ	ಮಾಸ	ದಿನ	ತಿಂಗಳು	ದಿನ
1	SUN	೧	ಆ	ಮಾರ್ಗಶಿರ ಕೃಷ್ಣ	೯	೭-೪೯	ಪೂರ್ವಾಭಾದ್ರ	೦-೧೫		೧೮		೭
2	M	೨	ಚ		೧೦	೭-೧೫	ಉತ್ತರಾಭಾದ್ರ	೦-೫೯		೧೯		೮
3	Tu	೩	ಮ		೧೧	೭-೫೫	ರೇವತೀ	೫- ೧		೨೦		೯
4	W	೪	ಬು		೧೨	೮-೪೨	ಅಶ್ವಿನೀ	೪-೫೦		೨೧		೧೦
5	Th	೫	ಗು		೧೩	೮೨-೫೬	ಭರಣೀ	೧೦-೫೫		೨೨		೧೧
6	F	೬	ಶು		೧೪	೮೭- ೫	ಕೃತ್ತಿಕಾ	೧೫-೫೫		೨೩		೧೨
7	S	೭	ಶ		೧೫	೯೨-೧೩	ರೋಹಿಣೀ	೨೨-೧೦		೨೪		೧೩
8	SUN	೮	ಆ		೧	೨೮- ೭	ಮೃಗಶಿರಾ	೨೯-೧೨		೨೫		೧೪
9	M	೯	ಚ		೨	೯೪-೯೭	ಆರ್ದ್ರಾ	೯೬-೪೬		೨೬		೧೫
10	Tu	೧೦	ಮ		೩	೪೧-೨೬	ಪುನರ್ವಸೂ	೪೪-೯೭		೨೭		೧೬
11	W	೧೧	ಬು		೪	೪೮-೧೧	ಪುಷ್ಯಾ	೫೨-೨೯		೨೮		೧೭
12	Th	೧೨	ಗು		೫	೫೪-೨೭	ಆಶ್ಲೇಷಾ	೫೮-೪೦		೨೯		೧೮
13	F	೧೩	ಶು	ಮಾರ್ಗಶಿರ ಶುಕ್ಲ	೬	೫೮-೪೫	ಮಘಾ	೬೦- ೦		೩೦		೧೯
14	S	೧೪	ಶ		೭	೬೦- ೦	ಮಘಾ	೫-೫೫		೧		೨೦
15	SUN	೧೫	ಆ		೭	೫-೨೨	ಹುಬ್ಬಾ	೧೦-೪೪		೨		೨೧
16	M	೧೬	ಚ		೮	೫-೫೯	ಉತ್ತರಾ	೧೫-೫೧		೩		೨೨
17	Tu	೧೭	ಮ		೯	೫-೫೬	ಹಸ್ತಾ	೨೫- ೨		೪		೨೩
18	W	೧೮	ಬು		೧೦	೫-೫೭	ಚಿತ್ರಾ	೨೪-೧೬		೫		೨೪
19	Th	೧೯	ಗು		೧೧	೫೫-೫೫	ಸ್ವಾತೀ	೧೧-೫೫		೬		೨೫
20	F	೨೦	ಶು		೧೫	೪೬-೪೧	ವಿಶಾಖಾ	೫-೨೦		೭		೨೬
21	S	೨೧	ಶ		೧೪	೫೮-೨೬	ಅನುರಾಧಾ	೧-೪೬		೮		೨೭
22	SUN	೨೨	ಆ		೧೫	೨೯-೫೫	ಮೂಲಾ	೪೭-೪೮		೯		೨೮
23	M	೨೩	ಚ		೧	೨೦-೨೭	ಪೂರ್ವಾಷಾಢ	೪೦-೫೨		೧೦		೨೯
24	Tu	೨೪	ಮ		೨	೧೨-೦೦	ಉತ್ತರಾಷಾಢ	೫೪-೧೫		೧೧		೧
25	W	೨೫	ಬು	ಪುಷ್ಯ ಕೃಷ್ಣ	೩	೨-೫೭	ಶ್ರವಣಾ	೨೭-೨೧		೧೨		೨
26	Th	೨೬	ಗು		೪	೪೮-೪೦	ಧನಿಷ್ಠಾ	೨೦-೪೫		೧೩		೩
27	F	೨೭	ಶು		೫	೪೪-೫೫	ಶತಭಿಷಾ	೨೮- ೮		೧೪		೪
28	S	೨೮	ಶ	ಪುಷ್ಯ	೬	೪೧-೫೯	ಪೂರ್ವಾಭಾದ್ರ	೦೬-೦೭		೧೫		೫
29	SUN	೨೯	ಆ		೭	೪೦-೫೨	ಉತ್ತರಾಭಾದ್ರ	೦೫-೫೫		೧೬		೬
30	M	೩೦	ಚ		೮	೪೧-೫೫	ರೇವತೀ	೦೭-೨೦		೧೭		೭
31	Tu	೩೧	ಮ		೯	೪೩-೫೪	ಅಶ್ವಿನೀ	೨೮-೨೮		೧೮		೮

ಧನುರ್ಮಾಸ (ಪುಷ್ಯ) [ಪುಷ್ಯಾರ್ಕ] ಮಕರ ಸಂಕ್ರಮಣ [ಪರಮಪುಣ್ಯಕಾಲ] ಜಪಾದಿಬಾನಲೆ ರಬಿಲಾಖಿರ್

ಯೆಹೋವನೇ, ನಾನು ಎಷ್ಟು ಅಸ್ಥಿರನೆಂದು ತಿಳಿಯುವ ಹಾಗೆ ನನ್ನ ಅಂತ್ಯವನ್ನೂ, ನನ್ನ ದಿವಸಗಳ ಅಳತೆ ಇಷ್ಟೆಂಬುವದನ್ನೂ, ನನಗೆ ತಿಳಿಸು. ಕೀರ್ತ. ೩೯, ೪.

1889 DECEMBER—ದಶಂಬರ ೧೮೮೯

ತಾರೀಖು	ಸೂರ್ಯ ಉದಯ ಘಂಟೆ	ಸೂರ್ಯ ಉದಯ ನಿಮಿಷ	ಸೂರ್ಯ ಅಸ್ತ ಘಂಟೆ	ಸೂರ್ಯ ಅಸ್ತ ನಿಮಿಷ	ಚಂದ್ರ ಉದಯ ಘಂಟೆ	ಚಂದ್ರ ಉದಯ ನಿಮಿಷ	ಚಂದ್ರ ಉಚ್ಚ ಘಂಟೆ	ಚಂದ್ರ ಉಚ್ಚ ನಿಮಿಷ	ಚಂದ್ರ ಅಸ್ತ ಘಂಟೆ	ಚಂದ್ರ ಅಸ್ತ ನಿಮಿಷ
೧	೬	೮	೫	೫೦	ಮಧ್ಯಾನ್ನ ೧	೫೦	ಸಾಯಂ. ೬	೫೬	ಪ್ರಾತಃ. ೦	೫೫
೨	೬	೮	೫	೫೦	೧	೧೧	೭	೨೨	೧	೪೬
೩	೬	೮	೫	೫೦	೧	೫೦	೭	೪೬	೨	೩೬
೪	೬	೯	೫	೫೦	೨	೨೮	೮	೧೦	೩	೨೪
೫	೬	೧೦	೫	೫೦	೩	೦	೮	೫೩	೪	೧೨
೬	೬	೧೦	೫	೫೧	೩	೩೫	೯	೩೬	೪	೫೯
೭	೬	೧೧	೫	೫೧	೪	೧೦	೧೦	೧೯	೫	೪೭
೮	೬	೧೧	೫	೫೧	೪	೪೫	೧೧	೦	೬	೩೫
೯	೬	೧೧	೫	೫೨	೫	೨೦	ಮಧ್ಯಾನ್ನ ೧೨	೪೨	೭	೨೨
೧೦	೬	೧೨	೫	೫೨	೫	೫೭	೧	೨೩	೮	೦
೧೧	೬	೧೨	೫	೫೨	೬	೩೫	೧	೫೮	೮	೩೭
೧೨	೬	೧೨	೫	೫೩	೭	೧೩	೨	೩೨	೯	೧೨
೧೩	೬	೧೩	೫	೫೩	೭	೫೨	೩	೬	೯	೪೭
೧೪	೬	೧೩	೫	೫೪	೮	೩೨	೩	೪೦	೧೦	೨೨
೧೫	೬	೧೩	೫	೫೪	೯	೧೨	೪	೧೫	೧೦	೫೭
೧೬	೬	೧೩	೫	೫೫	೯	೫೨	೪	೫೦	೧೧	೩೩
೧೭	೬	೧೪	೫	೫೫	೧೦	೩೩	೫	೨೬	೧೨	೯
೧೮	೬	೧೪	೫	೫೬	೧೧	೧೩	೬	೨	೧೨	೪೪
೧೯	೬	೧೪	೫	೫೬	೧೧	೫೩	೬	೩೮	೧	೨೦
೨೦	೬	೧೪	೫	೫೭	ರಾತ್ರಿ ೧೨	೩೩	೭	೧೫	೧	೫೭
೨೧	೬	೧೪	೫	೫೭	೧	೧೩	೭	೫೩	೨	೩೫
೨೨	೬	೧೪	೫	೫೮	೧	೫೩	೮	೩೨	೩	೧೩
೨೩	೬	೧೪	೫	೫೮	೨	೩೩	೯	೧೧	೩	೫೨
೨೪	೬	೧೪	೫	೫೯	೩	೧೩	೯	೫೦	೪	೩೨
೨೫	೬	೧೪	೫	೫೯	೩	೫೩	೧೦	೨೯	೫	೧೨
೨೬	೬	೧೪	೬	೦	೪	೩೩	೧೧	೮	೫	೫೨
೨೭	೬	೧೪	೬	೦	೫	೧೩	೧೧	೪೭	೬	೩೩
೨೮	೬	೧೪	೬	೧	೫	೫೩	ಪ್ರಾತಃ. ೧೨	೨೭	೭	೧೩
೨೯	೬	೧೪	೬	೧	೬	೩೩	೧	೬	೭	೫೩
೩೦	೬	೧೪	೬	೧	೭	೧೩	೧	೪೫	೮	೩೪
೩೧	೬	೧೪	೬	೨	೭	೫೩	೨	೨೪	೯	೧೫

ಕುಜಾದಿ ಪಂಚಗ್ರಹರ ಉದಯೋಚ್ಚಾಸ್ತಮಯಗಳನ್ನು ತೋರಿಸುವ ಪಟ್ಟಿ

ಗ್ರಹ	ತಾರೀಖು	ಉದಯ	ಉಚ್ಚ	ಅಸ್ತ
ಕುಜ		ಪ್ರಾತಃ. ಘ. ನಿ.	ಪ್ರಾತಃ. ಘ. ನಿ.	ಮಧ್ಯಾ. ಘ. ನಿ.
	೧	೨ ೧	೬ ೪೬	೧ ೪೧
	೧೬	೧ ೪೪	೬ ೨೯	೧ ೨೨
	೨೬	೧ ೨೮	೬ ೧೦	೧ ೧೩
	೩೧	೧ ೨೩	೬ ೧೬	೧ ೪
ಬುಧ		ಪ್ರಾತಃ. ಘ. ನಿ.	ಹಗಲು ಘ. ನಿ.	ಸಾಯಂ ಘ. ನಿ.
	೧	೬ ೧೧	೧೧ ೪೪	೪ ೨೬
	೧೬	೬ ೪೬	೧೨ ೧೯	೪ ೪೪
	೨೬	೬ ೧೪	೧೨ ೪೦	೫ ೨೬
	೩೧	೬ ೨೪	೧೩ ೨	೫ ೪೦
ಗುರು		ಪ್ರಾತಃ. ಘ. ನಿ.	ಮಧ್ಯಾ. ಘ. ನಿ.	ಸಾಯಂ ಘ. ನಿ.
	೧	೬ ೧೦	೧ ೪೬	೬ ೨೬
	೧೬	೬ ೪೦	೧ ೧೯	೬ ೪೬
	೨೬	೬ ೧೦	೧೨ ೪೯	೬ ೧೬
	೩೧	೬ ೪೯	೧೨ ೨೬	೫ ೪೬
ಶುಕ್ರ		ಪ್ರಾತಃ. ಘ. ನಿ.	ಪ್ರಾತಃ. ಘ. ನಿ.	ಸಾಯಂ ಘ. ನಿ.
	೧	೪ ೪೪	೧೦ ೨೬	೪ ೨೧
	೧೬	೪ ೧೧	೧೦ ೪೧	೪ ೨೧
	೨೬	೩ ೨೯	೧೧ ೬	೪ ೪೪
	೩೧	೩ ೨೪	೧೧ ೧೩	೪ ೪೦
ಶನಿ		ರಾತ್ರಿ ಘ. ನಿ.	ಪ್ರಾತಃ. ಘ. ನಿ.	ಹಗಲು ಘ. ನಿ.
	೧	೧೧ ೧೩	೪ ೨೬	೧೧ ೨೬
	೧೬	೧೦ ೨೬	೪ ೪೨	೧೧ ೪೩
	೨೬	೯ ೪೦	೪ ೨೬	೧೧ ೧೪
	೩೧	೯ ೧೬	೪ ೧೦	೧೧ ೪೬

೧೮೮೯ನೇ ವರ್ಷದ ಸೂಕ್ಷ್ಮನೂತನ ದೃಕ್ಸಿದ್ಧಾಂತ ಪಂಚಾಂಗವು.

ಈ ೧೮೮೯ನೇ ವರ್ಷದ ಆದಿಯಲ್ಲಿ ಚಿತ್ರಾ ನಕ್ಷತ್ರದ ಅಯನಾಂಶ ಭಾಗ ೨೨ ಕಲೆ ೧೭ ವಿಕಲೆ ೫೩ ಎಂದೂ, ವರ್ಷದ ಅಂತ್ಯದಲ್ಲಿ ಅಯನಾಂಶ ಭಾಗ ೨೨ ಕಲೆ ೧೯ ವಿಕಲೆ ೨೩ ಎಂದೂ ಗಣಿಸಲ್ಪಟ್ಟಿದೆ.

ಮಹಾ ನಕ್ಷತ್ರವೆಂಬ ಸೂರ್ಯನಕ್ಷತ್ರ ಆರಂಭಿಸುವ ಕಾಲ.

ನಕ್ಷತ್ರದ ಹೆಸರು	ತಿಂಗಳು	ತಾ.	ಹೊತ್ತು	ಘಂಟೆ	ನಕ್ಷತ್ರದ ಹೆಸರು	ತಿಂಗಳು	ತಾ.	ಹೊತ್ತು	ಘಂಟೆ
ಉತ್ತರಾಷಾ.	ಜನವರಿ	೯	ಪ್ರಾತಃ.	೨	ಪುಷ್ಯಾ	ಜುಲಾಯಿ	೧೪	ಪ್ರಾತಃ.	೬
ಶ್ರವಣಾ	"	೨೨	"	೪II	ಆಶ್ಲೇಷಾ	ಅಗೊಸ್ತು	೧	"	೪III
ಧನಿಷ್ಠಾ	ಫೆಬ್ರುವರಿ	೪	"	೭II	ಮಘಾ	"	೧೫	"	೩II
ಶತಭಿಷಾ	"	೧೭	ಮಧ್ಯಾನ್ಹ	೧೨	ಹುಬ್ಬಾ	"	೨೮	ರಾತ್ರಿ	೧೦
ಪೂರ್ವಾಭಾ.	ಮಾರ್ಚಿ	೨	ಸಾಯಂ.	೬II	ಉತ್ತರಾ	ಸಪ್ತಂಬರ	೧೧	ಮಧ್ಯಾನ್ಹ	೩II
ಉತ್ತರಾಭಾ.	"	೧೬	ಪ್ರಾತಃ.	೫	ಹಸ್ತಾ	"	೨೫	ಪ್ರಾತಃ.	೭II
ರೇವತೀ	"	೨೯	ಮಧ್ಯಾನ್ಹ	೧II	ಚಿತ್ರಾ	ಒಕ್ತೋಬರ	೮	ರಾತ್ರಿ	೮II
ಅಶ್ವಿನೀ	ಏಪ್ರಿಲ್	೧೨	ಪ್ರಾತಃ.	೫	ಸ್ವಾತೀ	"	೨೨	ಪ್ರಾತಃ	೭
ಭರಣೀ	"	೨೫	ಸಾಯಂ.	೭	ವಿಶಾಖಾ	ನವಂಬರ	೪	ಮಧ್ಯಾನ್ಹ	೫
ಕೃತ್ತಿಕಾ	ಮೇ	೯	ಮಧ್ಯಾನ್ಹ	೧	ಅನುರಾಧಾ	"	೧೬	ರಾತ್ರಿ	೯
ರೋಹಿಣೀ	"	೨೩	ಪ್ರಾತಃ	೯II	ಜ್ಯೇಷ್ಠಾ	ದಶಂಬರ	೧	ಪ್ರಾತಃ.	೧
ಮೃಗಶಿರಾ	ಜೂನ್	೬	ಪ್ರಾತಃ	೭II	ಮೂಲಾ	"	೧೪	"	೪
ಆರ್ದ್ರಾ	"	೨೦	"	೬II	ಪೂರ್ವಾಷಾ.	"	೨೭	"	೬I
ಪುನರ್ವಸೂ	ಜುಲಾಯಿ	೪	"	೬					

ದೃಕ್ಸಿದ್ಧ ಸಂಕ್ರಮಣಕಾಲದ ಘಳಿಗೆ ವಿಘಳಿಗೆಗಳು.

(ಸ್ಫುಟ ಸೂರ್ಯೋದಯಾದಿ.)

ತಿಂಗಳು	ತಾರೀಕು	ವಾರ	ಘಳಿಗೆ ವಿಘಳಿಗೆ	ರಾಶಿ
ಜನವರಿ	೧೫	ಶನಿವಾರ	೫೫-೧೯	ಮಕರ
ಫೆಬ್ರುವರಿ	೧೦	ಆದಿತ್ಯವಾರ	೫೭-೫೮	ಕುಂಭ
ಮಾರ್ಚಿ	೧೨	ಮಂಗಳವಾರ	೫೦-೪೭	ಮೀನ
ಏಪ್ರಿಲ್	೧೧	ಗುರುವಾರ	೫೫-೧೦	ಮೇಷ
ಮೇ	೧೫	ಆದಿತ್ಯವಾರ	೪೬-೨೮	ವೃಷಭ
ಜೂನ್	೧೫	ಗುರುವಾರ	೫-೨೮	ಮಿಥುನ
ಜುಲಾಯಿ	೧೪	ಆದಿತ್ಯವಾರ	೭೦-೫೬	ಕರ್ಕಾಟ
ಅಗೊಸ್ತು	೧೪	ಬುಧವಾರ	೫೧-೨೪	ಸಿಂಹ
ಸಪ್ತಂಬರ	೧೪	ಶನಿವಾರ	೫೦-೫೯	ಕನ್ಯಾ
ಒಕ್ತೋಬರ	೧೫	ಮಂಗಳವಾರ	೨೦-೫೦	ತುಲಾ
ನವಂಬರ	೧೪	ಗುರುವಾರ	೧೯-೧೪	ವೃಶ್ಚಿಕ
ದಶಂಬರ	೧೪	ಶುಕ್ರವಾರ	೫೪-೪೯	ಧನು

ಭೂಸನ್ನಿಕರ್ಷಣ ಭೂವಿಪ್ರಕರ್ಷಣ

ಅಂದರೆ ಚಂದ್ರನು ಭೂಮಿಗೆ ಸಮೀಪ (Perigee) ನುತ್ತು ದೂರ (Apogee) ಇರುವ ಸಮಯ ತಿಳಿಯಲಿಕ್ಕೆ.

ತಿಂಗಳು	ತಾರೀಕು	ಹೊತ್ತು	ಘಂಟೆ	ತಿಂಗಳು	ತಾರೀಕು	ಹೊತ್ತು	ಘಂಟೆ
ಜನವರಿ	೨೯	ಪ್ರಾತಃ	೦	ಜನವರಿ	೧೨	ರಾತ್ರಿ	೧೦
ಫೆಬ್ರುವರಿ	೨೪	ರಾತ್ರಿ	೯	ಫೆಬ್ರುವರಿ	೯	ಸಾಯಂ.	೬
ಮಾರ್ಚಿ	೨೧	ಮಧ್ಯಾನ್ಹ	೫	ಮಾರ್ಚಿ	೯	ಮಧ್ಯಾನ್ಹ	೨
ಏಪ್ರಿಲ್	೧೯	ಪ್ರಾತಃ.	೭	ಏಪ್ರಿಲ್	೬	ಪ್ರಾತಃ.	೧೦
ಮೇ	೧೬	ಹಗಲು	೧೨	ಮೇ	೪	"	೨
ಜೂನ್	೧೩	ಸಾಯಂ.	೯	"	೩೧	ಹಗಲು	೧೧
ಜುಲಾಯಿ	೧೨	ಪ್ರಾತಃ.	೭	ಜೂನ್	೨೭	"	೨
ಅಗೊಸ್ತು	೯	ಹಗಲು	೧೨	ಜುಲಾಯಿ	೨೪	ಸಾಯಂ.	೯
ಸಪ್ತಂಬರ	೬	ಪ್ರಾತಃ.	೭	ಅಗೊಸ್ತು	೨೧	ಹಗಲು	೧೨
ಒಕ್ತೋಬರ	೧	ಸಾಯಂ	೯	ಸಪ್ತಂಬರ	೧೮	ಪ್ರಾತಃ.	೬
"	೨೯	"	೯	ಒಕ್ತೋಬರ	೧೬	"	೨
ನವಂಬರ	೨೪	"	೮	ನವಂಬರ	೧೨	ಸಾಯಂ.	೧೦
ದಶಂಬರ	೨೨	ಪ್ರಾತಃ.	೭	ದಶಂಬರ	೧೦	ಮಧ್ಯಾನ್ಹ	೧
				೯೦ ಜನವರಿ	೬	ಸಾಯಂ.	೪

೧೮೮೯ರಲ್ಲಿ ಕುಜಾದಿ ಗ್ರಹಗಳ ರಾಶಿಪ್ರವೇಶಕಾಲಗಳು.

ಗ್ರಹ	ಯಾವ ಸಮಯದಿಂದ		ಯಾವ ಸಮಯದ ವರೆಗೆ					ಎಲ್ಲಿ
	ತಿಂಗಳು	ತಾ.	ತಿಂಗಳು	ತಾ.	ಹೊತ್ತು	ಘ.	ನಿ.	
Mars ಕುಜಸ್ಥಿತಿ	ಜನವರಿ	೧	ಫೆಬ್ರುವರಿ	೭	ಪ್ರಾತಃಕಾಲ	೮	೪೮	ಕುಂಭ
	ಫೆಬ್ರುವರಿ	೭	ಮಾರ್ಚ್	೧೯	ರಾತ್ರಿ	೯	೩೪	ಮೀನ
	ಮಾರ್ಚ್	೧೯	ಎಪ್ರಿಲ್	೩೯	ಪ್ರಾತಃಕಾಲ	೧	೨೩	ಮೇಷ
	ಎಪ್ರಿಲ್	೩೯	ಜೂನ್	೧೧	"	೪	೨೨	ವೃಷಭ
	ಜೂನು	೧೧	ಜುಲಾಯಿ	೩೬	"	೮	೨	ಮಿಥುನ
	ಜುಲಾಯಿ	೩೬	ಸಪ್ತಂಬರ	೧೧	"	೮	೨೧	ಕರ್ಕಾಟಕ
	ಸಪ್ತಂಬರ	೧೧	ಒಕ್ತೋಬರ	೨೯	"	೭	೪೨	ಸಿಂಹ
	ಒಕ್ತೋಬರ	೨೯	ದಶಂಬರ	೧೪	ಮಧ್ಯಾನ್ಹ	೧	೭	ಕನ್ಯಾ
	ದಶಂಬರ	೧೪	"	೩೧	ರಾತ್ರಿ ವರೆಗೆ			ತುಲಾ
Mercury ಬುಧಸ್ಥಿತಿ	ಜನವರಿ	೧	ಜನವರಿ	೬	ರಾತ್ರಿಕಾಲ	೧೧	೨೬	ಧನುವಿನಲ್ಲಿ
	"	೬	"	೨೫	ಪ್ರಾತಃಕಾಲ	೪	೨೯	ಮಕರ
	"	೨೫	ಫೆಬ್ರುವರಿ	೧೯	"	೬	೪೩	ಕುಂಭ
	ಫೆಬ್ರುವರಿ	೧೯	ಮಾರ್ಚ್	೧೦	"	೦	೬	ಮಕರ ಪ್ರಕ್ರ
	ಮಾರ್ಚ್	೧೦	ಎಪ್ರಿಲ್	೨	ಸಾಯಂಕಾಲ	೪	೨೦	ಕುಂಭ
	ಎಪ್ರಿಲ್	೨	"	೧೯	ಪ್ರಾತಃಕಾಲ	೪	೨೬	ಮೀನ
	"	೧೯	ಮೇ	೫	"	೧೦	೧	ಮೇಷ
	ಮೇ	೫	ಜುಲಾಯಿ	೨೧	"	೧೧	೪೩	ವೃಷಭ
	ಜುಲಾಯಿ	೨೧	"	೨೭	ಸಾಯಂಕಾಲ	೪	೨೧	ಮಿಥುನ
	"	೨೭	ಆಗೊಸ್ತು	೧೧	ಪ್ರಾತಃಕಾಲ	೧೧	೪೪	ಕರ್ಕಾಟಕ
	ಆಗೊಸ್ತು	೧೧	"	೪೮	"	೧೦	೪೧	ಸಿಂಹ
	"	೨೮	ಸಪ್ತಂಬರ	೧೪	ರಾತ್ರಿ	೧೧	೪	ಕನ್ಯಾ
	ಸಪ್ತಂಬರ	೧೪	ಒಕ್ತೋಬರ	೧೬	ಸಾಯಂಕಾಲ	೮	೪	ತುಲಾ
	ಒಕ್ತೋಬರ	೧೬	ನವಂಬರ	೩	ಪ್ರಾತಃಕಾಲ	೦	೧೨	ಕನ್ಯೆಯಲ್ಲಿ ವಕ್ರ
	ನವಂಬರ	೩	"	೨೨	ಪ್ರಾತಃಕಾಲ	೧೦	೦	ತುಲಾ
	"	೨೨	ದಶಂಬರ	೧೨	"	೦	೨೨	ವೃಶ್ಚಿಕ
	ದಶಂಬರ	೧೨	"	೩೦	ಸಾಯಂಕಾಲ	೨	೪೯	ಧನು
	"	೩೦	"	೩೧	ರಾತ್ರಿ ವರೆಗೆ			ಮಕರ
Jupiter ಗುರುಸ್ಥಿತಿ	ಜನವರಿ	೧	ದಶಂಬರ	೩೧ ವರೆಗೆ ಪೂರ್ಣ ವರ್ಷ				ಧನು
Venus ಶುಕ್ರಸ್ಥಿತಿ	ಜನವರಿ	೧	ಜನವರಿ	೨೬	ಸಾಯಂಕಾಲ	೯	೫೦	ಕುಂಭದಲ್ಲಿ
	"	೨೬	ಫೆಬ್ರುವರಿ	೨೪	ಪ್ರಾತಃಕಾಲ	೬	೫೬	ಮೀನ
	ಫೆಬ್ರುವರಿ	೨೪	ಜೂನ್	೨೯	"	೨	೪೨	ಮೇಷ
	ಜೂನ್	೨೯	ಜುಲಾಯಿ	೨೯	ರಾತ್ರಿ	೧೧	೧೧	ವೃಷಭ
	ಜುಲಾಯಿ	೨೯	ಆಗೊಸ್ತು	೨೬	ಪ್ರಾತಃಕಾಲ	೬	೫೯	ಮಿಥುನ
	ಆಗೊಸ್ತು	೨೬	ಸಪ್ತಂಬರ	೨೦	ಸಾಯಂಕಾಲ	೯	೬	ಕರ್ಕಾಟಕ
	ಸಪ್ತಂಬರ	೨೦	ಒಕ್ತೋಬರ	೧೫	ಮಧ್ಯಾನ್ಹ	೩	೪೦	ಸಿಂಹ
	ಒಕ್ತೋಬರ	೧೫	ನವಂಬರ	೯	ರಾತ್ರಿ	೧೦	೨೪	ಕನ್ಯಾ
	ನವಂಬರ	೯	ದಶಂಬರ	೨	ರಾತ್ರಿ	೧೦	೪೮	ತುಲಾ
	ದಶಂಬರ	೨	"	೨೬	"	೯	೯	ವೃಶ್ಚಿಕ
	"	೨೬	ದಶಂಬರ	೩೧	" ವರೆಗೆ			ಧನು
Saturn ಶನಿಸ್ಥಿತಿ	ಜನವರಿ	೧	ಆಗೊಸ್ತು	೫	ರಾತ್ರಿ	೧೦	೧೨	ಕರ್ಕಾಟಕದಲ್ಲಿ
	ಆಗೊಸ್ತು	೫	ದಶಂಬರ	೩೧	" ವರೆಗೆ			ಸಿಂಹ
Moon's ascending node ರಾಹುಸ್ಥಿತಿ	ಜನವರಿ	೧	ದಶಂಬರ	೩೧	ರಾತ್ರಿ ವರೆಗೆ	ಸದಾ		ಮಿಥುನದಲ್ಲಿ

೧೪೪೫ನೇ ಇಸವಿಯಲ್ಲಿ ಸಂಭವಿಸುವ
ಗ್ರಹಣಗಳು.

ಈ ವರ್ಷದಲ್ಲಿ ಸೂರ್ಯನಿಗೆ ಮೂರು ಚಂದ್ರನಿಗೆ ಎರಡು ಇಂತು ಐದು ಗ್ರಹಣಗಳುಂಟು.

I. ಜನವರಿ ೨೯ನೇ ಪ್ರಾತಃಕಾಲ ಮೂರ್ಗತಿರ ಅಮಾವಾಸ್ಯೆಯಲ್ಲಿ ಸೂರ್ಯನಿಗೆ ಪೂರ್ಣಗ್ರಹಣ; ಮಂಗಳೂರಲ್ಲಿ ನೋಡಲಾರೆವು. ಉತ್ತರ ಅಮೇರಿಕದ ಕೆಲವು ಭಾಗಕ್ಕೆ ಮಾತ್ರ ದೃಶ್ಯವಾಗುವದು. ಭೂಮಿಯಲ್ಲಿ ಒಟ್ಟಾರೆ ಜನವರಿ ತಾರೀಕು ೨೯ನೇ ಪ್ರಾತಃಕಾಲ ಮಂಗಳೂರು ಸಮಯ ಘಂಟೆ ೦ ನಿಮಿಷ ೬ಕ್ಕೆ ತೊಡಗಿ, ೨ ಘಂಟೆ ೧೫ ನಿಮಿಷಕ್ಕೆ ಮಧ್ಯವಾಗಿ, ೪ ಘಂಟೆ ೬೦॥ ನಿಮಿಷಕ್ಕೆ ಬಿಡುತ್ತದೆ.

II. ಜನವರಿ ೧೬ ಪುಷ್ಯಪೂರ್ಣಿಮೆಯಲ್ಲಿ ಹಗಲು ಚಂದ್ರಗ್ರಹಣ; ಇಲ್ಲಿ ಕಾಣದು. ಬೆಳಿಗ್ಯೆ ಘಂಟೆ ೯ ನಿಮಿಷ ೫೯ಕ್ಕೆ ಆರಂಭಿಸಿ, ಘಂಟೆ ೧೦ ನಿಮಿಷ ೨೯ಕ್ಕೆ ಮಧ್ಯವಾಗಿ, ೧೨ ಘಂಟೆಗೆ ಬಿಡುವದು. ಅಮೇರಿಕದಲ್ಲಿ ತೋರುವದು.

III. ಜೂನ್ ೨೪ ಜ್ಯೇಷ್ಠ ಅಮಾವಾಸ್ಯೆಯಲ್ಲಿ ಸೂರ್ಯನಿಗೆ ಕಂಕಣಗ್ರಹಣ. ಆಫ್ರಿಕದ ಮಧ್ಯಭಾಗದಲ್ಲಿಯೂ ಹಿಂದುಸಾಗರದಲ್ಲಿಯೂ ಕಂಕಣಾಕಾರವಾಗಿ ತೋರುವದು. ಇದು ಮಂಗಳೂರಿಗೆ ಪಾರ್ಶ್ವ ಗ್ರಹಣವಾಗಿ ಕಾಣುವದು. ಮಧ್ಯಾನ್ನದ ಮೇಲೆ ಘಂಟೆ ೨ ನಿಮಿಷ ೧೪ಕ್ಕೆ ಸ್ಪರ್ಶ; ಘಂಟೆ ೩-೧೫ಕ್ಕೆ ಮಧ್ಯ; ಘಂಟೆ ೪-೭ಕ್ಕೆ ಗ್ರಹಣ ಬಿಡುವದು. ಅದ್ಯಂತ ಗ್ರಹಣಕಾಲ ಘಂಟೆ ೧ ನಿಮಿಷ ೫೪ ಇರುವದು. ಗ್ರಾಸವು $\frac{೧}{೫}$ ಮಾತ್ರವಾಗುತ್ತದೆ; ಸೂರ್ಯದ ದಕ್ಷಿಣಬಿಂದುವಿನಿಂದ ೧೧ ಭಾಗ ವಹ್ನಿಮಂದಲ್ಲಿ ಸ್ಪರ್ಶ; ಬಿಡುವಲ್ಲಿ ದಕ್ಷಿಣಬಿಂದುವಿನಿಂದ ೪೧ ಭಾಗ ಪೂರ್ವದಲ್ಲಿ ಎಂದು ಹೇಳ ಬೇಕು. ಧೋರ ಮಟ್ಟಿಗೆ ಹೇಳುವದಾದರೆ ನೈಋತ್ಯ ಸ್ಪರ್ಶ, ಆಗ್ನೇಯ ಮೋಕ್ಷ. ಗ್ರಹಣ ಮಧ್ಯಕಾಲದ ನಕ್ಷೆಯು. ದಿಗ್ವ್ಯವಸ್ಥೆಯು ಖಗೋಲಾನುಸಾರವಾಗಿ ಆದೆ.



IV. ಜುಲಾಯಿ ೧೩ ಆಷಾಢ ಪೂರ್ಣಿಮಾ ಚಂದ್ರನಿಗೆ ಪಾರ್ಶ್ವಗ್ರಹಣ; ಇಲ್ಲಿ ಕಾಣುವದು. ವಿಲಾಯತೀ ಲೆಖ್ಖದಿಂದ ರಾತ್ರಿ ೧೩ರ ಮೇಲೆ ೧೩ನೇ ತಾರೀಕಿನ ಪ್ರಾತಃಕಾಲದಲ್ಲಿ, ಘಂಟೆ ೦ ನಿಮಿಷ ೪೨ಕ್ಕೆ ಆರಂಭಿಸಿ, ಘಂಟೆ ೧ ನಿಮಿಷ ೫೬ಕ್ಕೆ ಮಧ್ಯವಾಗಿ, ಘಂಟೆ ೩ ನಿಮಿಷ ೪ಕ್ಕೆ ಬಿಡುವದು.

V. ದಶಂಬರ್ ೨೨ ಮೂರ್ಗತಿರ ಅಮಾವಾಸ್ಯೆಯಲ್ಲಿ ಸೂರ್ಯನಿಗೆ ಪೂರ್ಣಗ್ರಹಣ; ಇಲ್ಲಿ ಅದೃಶ್ಯ; ಅರ್ಬಿಸ್ತಾನ, ಆಫ್ರಿಕ, ಮಧ್ಯ ದಕ್ಷಿಣ ಅಮೇರಿಕ ಇವುಗಳಲ್ಲಿ ಮಾತ್ರವೇ ಗೋಚರ. ಒಟ್ಟಾರೆ ಭೂಮಿಯಲ್ಲಿ ಹಗಲು ಘಂಟೆ ೩ ನಿಮಿಷ ೧೬ಕ್ಕೆ ಆರಂಭಿಸಿ, ಘಂಟೆ ೫ ನಿಮಿಷ ೫೦ಕ್ಕೆ ಮಧ್ಯವಾಗಿ, ಸಾಯಂಕಾಲ ಘಂಟೆ ೮ ನಿಮಿಷ ೩೧ಕ್ಕೆ ಬಿಡುವದು.

ಗುರು ಚಂದ್ರ ಸಮಾಗಮವು.

ಈ ೧೮೯೯ನೇ ವರ್ಷದ ಏಪ್ರಿಲ್ ೨೦ನೇ ಶನಿವಾರ ರಾತ್ರಿ ಚಂದ್ರ ಗುರು ಸಮಾಗಮವಾಗುವದು. ಇದಕ್ಕೆ, ಸಿದ್ಧಾಂತದಲ್ಲಿ, ಗ್ರಹಯುದ್ಧವೆಂದೂ ಗ್ರಹಯುತಿ ಎಂದೂ ಹೇಳೋಣಾಗಿದೆ. ನಮ್ಮ ಪಂಚಾಂಗದಲ್ಲಿ ಹಾಕುವ ಗ್ರಹಗಣಿತದ ಸೂಕ್ಷ್ಮತೆಯೂ ಶುದ್ಧತೆಯೂ ಎಷ್ಟೆಂಬದು ಜನರಿಗೆ ದೃಢವಾಗುವಂತೆ ಇದನ್ನು ಕೊಡುತ್ತೇವೆ. ಮಂಗಳೂರು ಕಾಲ ರಾತ್ರಿ ಘಂಟೆ ೧೧ಕ್ಕೆ ಚಂದ್ರನ ಕಡೆಗೆ ನೋಡಿದರೆ ಆಗ್ನೇಯ ಭಾಗದಲ್ಲಿ ಸುಮಾರಾಗಿ ಗುರುಗ್ರಹವು ಶೋಭಿಸುತ್ತಿರುವದು. ಅದಕ್ಕೆ ಐದು ನಿಮಿಷದ ಮೇಲೆ (ಅಂದರೆ ಸರಿಯಾಗಿ ೧೧ ಘಂಟೆ ೧೯ ನಿಮಿಷ ೫೧ ಸೆಕುಂದಿಗೆ) ಚಂದ್ರನ ಅಂಚಿಗೆ ಗುರುಬಿಂಬದ ಅಂಚು ತಾಗುವದು; ನೋಡನೋಡುತ್ತಾ ಇರುವಾಗ ಗುರುಬಿಂಬವು ಚಂದ್ರನಿಂದ ಗ್ರಸ್ತವಾಗಿ ಅಚೆಗೆ ಮರೆಯಾಗುವದು; ಪುನಃ ೧೩ ಘಂಟೆಗೆ ಚಂದ್ರನ ಕಡೆಗೆ ನೋಡುತ್ತಿರಲು ಇನ್ನು ಗುರುಬಿಂಬವು ಕಾಣದಿದ್ದು ಘಂಟೆ ೧೩ ನಿಮಿಷ ೩೧ ಸೆಕುಂದ ೧೩ಕ್ಕೆ ಚಂದ್ರನ ವಾಯವ್ಯ ಭಾಗದಿಂದ ಹೊರಟು ಬರುವದು.

	ಸ್ಪರ್ಶಕಾಲ ಘಂಟೆ	ನಿಮಿಷ	ಸೆಕುಂದ	ಮೋಕ್ಷಕಾಲ ಘಂಟೆ	ನಿಮಿಷ	ಸೆಕುಂದ
ಸೂಕ್ಷ್ಮವಾದ ಕಾಲ	೧೧	೧೯	೫೧	೧೩	೩೧	೧೩
ಧೋರ ಮಟ್ಟಿಗೆ ಕಾಲ	೧೧	೨೦	೦	೧೩	೩೧	೦

ಹೀಗೆ ಗ್ರಸ್ತವಾದ ೬೧ ನಿಮಿಷ ೪೧ ಸೆಕುಂದದ ವರೆಗೆ ಗುರುಬಿಂಬವು ಅದೃಶ್ಯವಾಗುವದು. ಪಂಚಾಂಗವಾಚಕರು ಇದನ್ನು ಪರೀಕ್ಷಿಸಿ, ನೋಡಿ, ನಮ್ಮ ಮತ್ತು ಇತರ ಪಂಚಾಂಗಗಳ ಹೆಚ್ಚುಕಡಿಮೆಯನ್ನು ತಾವೇ ಗ್ರಹಿಸ ಬಹುದು; ಹೆಚ್ಚಿನ ಸಂಗತಿಯನ್ನು ಮುಂದಣ ವರ್ಷದ ಸೂರ್ಯಗ್ರಹಣದ ಚರ್ಚೆಯಲ್ಲಿ, ದೇವಾನುಗ್ರಹದಿಂದ ಅನುಕೂಲಿಸಿದರೆ, ಸೂಚಿಸುವೆವು.

ಸಂವತ್ಸರ ಫಲವು.

ಶಾರ್ದೂಲ ವಿಕ್ರೀಡಿತ ವೃತ್ತ.

ಸರ್ವಾಧಾರಿಯನಂಬಿ ಸದ್ಗುಣ ಗಣೋತ್ಸೇಕೋರ್ವರಾ ಮಾನುಷರ್
ಪರ್ವಾರಂಭ ಯುಗಾದಿಯಾ ಪೊದಲೊಳ್ಳಾಶೀರ್ವಾದಮಂ ಬೇಡುತಾ
ಸರ್ವಪ್ರಾರ್ಥಿಸಿ ದೇವರಂ ಶುಭವಶೈ ಪೂರ್ವಾಬ್ದದಿಂದಿನ್ನೆಗಂ
ತರ್ವಾಯಾನತರಾಗಿ ಕ್ರಿಸ್ತಪದಮಂ ಸೇರ್ದಿನ್ನು ಸಾಖ್ಯಾಯನಂ. ||

ವಾರ್ಧಿಕ.

ಬರುವ ಸಂವತ್ಸರದ ನಾಮಂ ವಿರೋಧಿಯೆಂ-
ಬರು ನಿಜಂ ನಮ್ಮೊಳಗೆ ಬಿಡದೆ ಸಾಧಿಸುವದು-
ರ್ದ್ದರ ವಿರೋಧಂಗಳ್ಗಂ ತೊರೆದು ದೇವರೊಳ್ಳಾದ ವಿದ್ವೇಷಗಳನೆ ಬಿಟ್ಟು ||
ಹರುಷದಿಂ ನಿತ್ಯ ಪ್ರಾರ್ಥಿಸಿ ದೀನಭಾವದಿಂ-
ದಿರವೆಮ್ಮ ಹೃದಯದಂತಸ್ಥಮನರಿಕೆ ಗೈದು
ವರದ ಕ್ರಿಸ್ತೇಸುವಿನೊಳ್ಳಾನಂದಮಂ ಘಳಿಸಿ ಸುಖಿಸಿರೈ ಮರ್ತ್ಯಜನರು ||

M. K. K.

ಪ್ರತಿ ಯುಗಾದಿಯ ಹಬ್ಬದ ದಿವಸದಲ್ಲಿ ದೇವಸ್ಥಾನದಲ್ಲಿಯೋ ಇತರ ವಿಶೇಷ ಸ್ಥಳದಲ್ಲಿಯೋ ಪಂಚಾಂಗಭಟ್ಟನು ಆ ದಿವಸದಿಂದ ಪ್ರಾರಂಭವಾಗುವ ಸಂವತ್ಸರದಲ್ಲಿ ಆಗುವ ಕಾರ್ಯಗಳನ್ನು ಜ್ಯೋತಿಷ್ಯದ ಆಧಾರದಿಂದ ಓದಿ ಹೇಳುವದೂ ಜನರು ಮಹಾ ಶ್ರದ್ಧೆಯಿಂದ ಅದನ್ನು ಲಾಲಿಸಿ ಕೇಳುವದೂ ವಾಡಿಕೆಯಾಗಿದೆ. ಜ್ಯೋತಿಷವು ಸುಳ್ಳಾಗದೆಂದು ಜನರ ವಿಶ್ವಾಸವು. ಜ್ಯೋತಿಷ ಸುಳ್ಳಾದರೆ ಗ್ರಹಣ ನೋಡು, ಗಿಡ ಸುಳ್ಳಾದರೆ ಭಂಗಿ ತಿಂದು ನೋಡು ಎಂಬುವ ಗಾದೆಯುಂಟಾಯಿತು. ಆದರೆ ಪ್ರಾಜ್ಞರಾಗಿರುವವರು ಫಲ ಜ್ಯೋತಿಷ್ಯದ ಮೇಲೆ ಭರವಸವಿಡರು. ಮುಂದಣ ಸಂಭವಗಳನ್ನು ತತ್ಕಾಲದಲ್ಲಿ ತಿಳಿಯ ಬೇಕೆಂದು ಮನುಷ್ಯರಿಗೆ ತುಂಬಾ ಕುತೂಹಲವದೆ, ಖರೆ; ಆದರೆ ಭವಿಷ್ಯ ಜ್ಞಾನವನ್ನು ದೇವರು ಮನುಷ್ಯರಿಗೆ ಕೊಡಲಿಲ್ಲಾ. ದೇವರು ತನ್ನ ಅಧಿಕಾರದಲ್ಲಿಟ್ಟುಕೊಂಡ ಸಮಯಗಳನ್ನೂ ಕಾಲಗಳನ್ನೂ ಮನುಷ್ಯನು ಬುದ್ಧಿಯ ಕಲ್ಪನೆಯಿಂದ ಊಹಿಸುವದಕ್ಕೆ ಪ್ರಯತ್ನ ಮಾಡುವದು ಪಾಪವಾಗಿದೆ. ಹೀಗಿರುವದರಿಂದ ಸಂವತ್ಸರ ಫಲವೆಂದು ನಾವು ಹೇಳಿದ್ದು ನಡಿಯುವ ಸಂವತ್ಸರದಲ್ಲಿ ಸಂಭವಿಸಲಕ್ಕಿರುವ ಕಾರ್ಯಗಳನ್ನು ಮುಂಚಿತವಾಗಿಯೇ ತಿಳಿಯ ಪಡಿಸುತ್ತೇವೆಂಬ ಅರ್ಥದಲ್ಲಿ ಅಲ್ಲಾ; ಇದೇ ಕಳದ ವರ್ಷದಲ್ಲಿ ಲೋಕದೊಳಗೆ ಸಂಭವಿಸಿದ ಅಯಾ ಮುಖ್ಯ ಮುಖ್ಯ ಸಂಗತಿಗಳನ್ನು ವಾಚಕರಿಗೆ ಶ್ರುತ ಪಡಿಸುತ್ತೇವೆಂಬ ಅರ್ಥದಲ್ಲಿಯೇ ಹೇಳಿದ್ದೇವೆ.

ಕೆಲವು ವರ್ಷಗಳ ಹಿಂದೆ ಹಿಂದುಸ್ಥಾನದ ಆಯಾ ದೊಡ್ಡದೊಡ್ಡ ಪಟ್ಟಣಗಳವರು ಏರ್ಪಡಿಸಿದ ಸಾರ್ವಜನಿಕ ಸಭೆಯ ಮೂರನೆ ಸಮಾಗಮವು ಮದ್ರಾಸಿನಲ್ಲಿ ಸಂಭವಿಸಿತು. ಈ ಸಭೆ ಬಲವಾಗುತ್ತಾ ಈ ಸಾರಿ ಅದರಲ್ಲಿ ಏಳುನೂರು ಮಂದಿ ಪ್ರತಿನಿಧಿಗಳು ಇದ್ದರು. ಅವರು ಹೆಚ್ಚಾಗಿ ರಾಜ್ಯಸಂಬಂಧವಾದ ಕಾರ್ಯಗಳನ್ನು ಕುರಿತು ಆಲೋಚಿಸಿ ನಾಲ್ಕನೆ ಸಮಾಗಮವು ಅಲಹಾಬಾದಿನಲ್ಲಿ ಕೂಡಿ ಬರ ಬೇಕೆಂದು ನಿರ್ಣಯಿಸಿದರು.

ಗೋವೆಯಲ್ಲಿ ಮರ್ಮಗಾವಿನಿಂದ ಪೊರ್ತುಗೀಸ ಶೀಮೆಯ ಪ್ರಾಂತದ ವರೆಗೆ ರೈಲು ಮಾರ್ಗ ಸಿದ್ಧವಾಗಿ ದಕ್ಷಿಣ ಮಹಾರಾಷ್ಟ್ರದ ರೈಲಿಗೆ ಕೂಡಿಸಲ್ಪಟ್ಟಿದೆ. ಈಗ ಇಲ್ಲಿಂದ ದಕ್ಷಿಣ ಮಹಾರಾಷ್ಟ್ರದ ಶೀಮೆಗೆ ಪಯಣ ಮಾಡುವದು ಬಹಳ ಸುಲಭವಾಗಿದೆ.—ಪುಣೆಯಲ್ಲಿ ಬ್ರಾಹ್ಮಣಕುಲದ ಬಾಲವಿಧವೆಗಳ ಉಪಕಾರಾರ್ಥವಾಗಿ ವಿಶಾಲವಾದ ಮನೆ ಕಟ್ಟಿಸಿ ಅದರಲ್ಲಿ ಅವರ ಸಂರಕ್ಷಣೆಗಾಗಿ ಎಲ್ಲಾ ಸೌಕರ್ಯವನ್ನು ಅನುಕೂಲ ಮಾಡ ಬೇಕೆಂಬುವ ಹೇತುವಿನಿಂದ ಪ್ರಖ್ಯಾತಿ ಪಟ್ಟ ಪಂಡಿತೆ ರಮಾಬಾಯಿ ಅಮೇರಿಕದಲ್ಲಿದ್ದು ದ್ರವ್ಯಸಂಚಯ ಮಾಡುತ್ತಾಳೆ. ಅನೇಕ ಧನವಂತರಾದ ಗೃಹಸ್ಥರು ಅವಳಿಗೆ ಸಹಾಯ ಮಾಡುತ್ತಾರೆ.

ಹೈದರಾಬಾದಿನ ನಿಜಾಮ ಸಾಹೇಬರು ಪಶ್ಚಿಮೋತ್ತರ ಸರಹದ್ದನ್ನು ಕೋಟೆಕೊತ್ತಲಗಳಿಂದ ಭದ್ರ ಪಡಿಸುವ ಬಗ್ಯೆ ಸರಕಾರಕ್ಕೆ ಅರ್ವತ್ತು ಲಕ್ಷ ರೂಪಾಯಿ ಕೊಡುತ್ತೇನೆಂದು ವಾಚಾದತ್ತ ಮಾಡಿದ್ದರು. ಇದಕ್ಕೆ ಸರಕಾರದವರು ಒಪ್ಪಿದ್ದಾರೆ. ನಿಜಾಮ ಸಾಹೇಬರ ಔದಾರ್ಯವನ್ನು ನೋಡಿ ಉತ್ತರದ ಆಯಾ ದೇಶೀಯ ಮಹಾರಾಜರೂ ಮೇಲೆ ಹೇಳಿದ ಕಾರ್ಯದಲ್ಲಿ ಸರಕಾರಕ್ಕೆ ಸಹಾಯ ಮಾಡುತ್ತೇವೆಂದು ವಾಚಾದತ್ತ ಮಾಡಿದ್ದಾರೆ. ಆಯಾ ಸ್ಥಾನಿಸ್ಥಾನದ ಸರಹದ್ದಿನಲ್ಲಿ ಸರಕಾರದವರು ಬಂದೋಬಸ್ತು ಮಾಡಿದರೆ ಕೇವಲ ಸರಕಾರಕ್ಕೆ ಮಾತ್ರವಲ್ಲಾ ಹಿಂದುಸ್ಥಾನದ ಮಹಾರಾಜರು ಸಂಸ್ಥಾನಿಕರು ಮುಂತಾದ ಸರ್ವರಿಗೂ ಹಿತವಾಗಿದೆ ಎಂಬುವದರಿಂದ ದೇಶೀಯ ಅರಸರೂ ಸರಕಾರಕ್ಕೆ ದ್ರವ್ಯಸಹಾಯ ಮಾಡುತ್ತೇವೆಂದು ಹೇಳಿದ್ದಾಗಿರುತ್ತದೆ.

ಕಾಶಿ ಪಟ್ಟಣದ ಬಳಿಯಲ್ಲಿ ಗಂಗಾನದಿಗೆ ಭಾರೀ ಸೇತು ಕಟ್ಟಿಸೋಣವಾಗಿದೆ. ಅದು ೩,೫೨೩ ಅಡಿ ಉದ್ದವಾಗಿದೆ. ಗಂಗಾನದಿ ೩,೦೦೦ ಅಡಿ ಅಗಲವಾಗಿರುವಂಥಾದ್ದು, ಅದರ ತಳದಲ್ಲಿ ಬರೇ ಉಸುಬು, ಅದರ ನೀರು ೩೨ ಅಡಿಗಳು ಆಳ; ನೆರೆಯ ಕಾಲದಲ್ಲಿ ೪೨ ಅಡಿಗಳ ವರೆಗೆ ಏರುತ್ತದೆ. ಇಂಥಾ ಹೊಳೆಗೆ ಸೇತುಬಂಧನ ಮಾಡುವದು ಸಣ್ಣ ಕಾರ್ಯವಲ್ಲಾ. ಸೇತುವಿನ ಕಮಾನುಗಳು ನೀರಿನ ಪರಾಕಾಷ್ಠೆಯ ಪರಿಮಾಣಕ್ಕಿಂತ ೨೫ ಅಡಿ ಎತ್ತರವಿರುವಹಾಗೆ ದೊಡ್ಡದೊಡ್ಡ ದೋಣಿಗಳು ಸರಾಗವಾಗಿ ಅದರ ಕೆಳಗಿನಿಂದ ಹಾದು ಹೋಗ ಬಹುದು. ಸೇತು ಕಟ್ಟುವದಕ್ಕೆ ೭೫ ಲಕ್ಷ ರೂಪಾಯಿ ಖರ್ಚು ಮುಟ್ಟಿತು.

ವೈಸರಾಯ ಧೊರೆಗಳಾದ ಲಾರ್ಡ ಡಫರಿನ್ ಪ್ರಭುಗಳು ಗಲಲಲನೆ ಇಸವಿ ಮುಗಿಯುವದರೊಳಗೆ ಉದ್ಯೋಗವನ್ನು ಬಿಟ್ಟು ಶೀಮೆಗೆ ತೆರಳುವರು. ಅವರ ದೇಹದ ಕ್ಷೇಮವು ಕಡಿಮೆಯಾಗುತ್ತಾ ಬಂದದರಿಂದ ಅವರು ಉದ್ಯೋಗದ ಅವಧಿಯನ್ನು ಮುಗಿಸದೆ ಒಂದು ವರ್ಷ ಮುಂದಾಗಿ ಹೋಗುತ್ತಾರೆ. ಅವರ ಬದಲಿಗೆ ಸದ್ಯಾ ಉತ್ತರ ಅಮೇರಿಕದ ಕಾನಡಾ ದೇಶದ ಗವರ್ನರ ಜನರಲ್ ಆಗಿರುವ ಲಾರ್ಡ್ ಲಾನ್ಸ್ ಡೌನ್ ಧೊರೆಗಳು ನೇಮಕ ಪಟ್ಟಿದ್ದಾರೆ.—ಅಲಹಾಬಾದಿನಲ್ಲಿ ಸೆಕ್ರೆಟೇರಿಯಟ್ ಎಂಬ ಸರಕಾರಿ ಆಫೀಸಿಗೆ ಬೆಂಕಿ ಹಿಡಿದು ಅನೇಕ ದಫ್ತರಗಳೂ ಅಮೂಲ್ಯವಾದ ಲಿಖಿತಗಳೂ ಭಸ್ಮವಾಗಿ ಹೋದವು.—ಅಯ್ಯೋ

ಧ್ಯೆಯ ಮಾಜಿ ಅರಸನಾದ ನವಾಬ್ ವಜಿದ್ ಅಲಿಷಾ ಎಂಬವರು ಕಲ್ಕತದಲ್ಲಿ ಮೃತ ಪಟ್ಟರು. ಅವರಿಗೆ ೬೮ ವರ್ಷ ಪ್ರಾಯವಿತ್ತು.—ವಾಯವ್ಯ ಮೂಲೆಯಲ್ಲಿರುವ ರಾವಲ್ ಪಿಂಡಿಯಲ್ಲಿ ಅತ್ಯುತ್ತಮ ಕೆರೊಸಿನ್ ಎಣ್ಣೆ ಶಿಕ್ಕುತ್ತದೆಂದು ಭಾವಿಗಳನ್ನು ಅಗಿಸಿದ್ದರಿಂದ ತಿಳಿದು ಬಂದದೆ. ಅಲ್ಲಿಯ ಎಣ್ಣೆಯೂ ಮಾರಾಟಕ್ಕೆ ಬರುವದಾಗಿ ತೋರುತ್ತದೆ.—ಥಿಬೆಟ್ ಅಥವಾ ಭೋಟ ದೇಶದವರು ತಮ್ಮ ಸರಹದ್ದು ಮೀರಿ ಬಂದು ಸ್ವಲ್ಪ ತಂಟೆ ಮಾಡಿದರು. ಗಡಿ ಸ್ಥಳದಲ್ಲಿದ್ದ ಅವರ ಸೈನ್ಯಕ್ಕೂ ಇಂಗ್ಲಿಷ ಸೈನ್ಯಕ್ಕೂ ಯುದ್ಧವಾಯಿತು; ಅದರಲ್ಲಿ ಥಿಬೆಟರು ಪರಾಜಯ ಪಟ್ಟು ಓಡಿ ಹೋದರು.—ಬರ್ಮಿರಾಜ್ಯವು ಸರಕಾರದ ಸ್ವಾಸ್ಥ್ಯವಾಗಿ ಮಾಡಲ್ಪಟ್ಟದ್ದರಿಂದ ಹಿಂದು ಜನರು ಅಲ್ಲಿಗೆ ಹೋಗಿ ವಸ್ತಿ ಮಾಡುವದಕ್ಕೆ ಆರಂಭಿಸಿದ್ದಾರೆ. ಬರ್ಮಿಗೆ ನೆರೆಯಲ್ಲಿರುವ ಶಾನ್ ಎಂಬುವ ಸಂಸ್ಥಾನವನ್ನೂ ಸರಕಾರದವರು ತಮ್ಮ ಸ್ವಾಧೀನಕ್ಕೆ ಶೇರಿಸಿಕೊಳ್ಳುತ್ತಾರಾಗಿ ವದಂತಿಯಿದೆ.

ಆಫ್ರಿಕದ ದಕ್ಷಿಣಪೂರ್ವದಲ್ಲಿರುವ ಅಬಿಸಿನ್ಯ ಶೀಮೆಯ ಹತ್ತರ ಇತಲಿ ಸರಕಾರದವರು ಒಂದು ಊರನ್ನು ಕಟ್ಟಿಕೊಳ್ಳಲು ಯತ್ನಿಸಿದ್ದರಿಂದ ಅಬಿಸಿನ್ಯದ ಅರಸನು ಆ ಊರು ತನ್ನದೆಂದು ಇತಲಿಯವರ ಸಂಗಡ ಕದನಕ್ಕೆ ಬಂದು ಅಲ್ಲಿದ್ದ ಚಿಕ್ಕದ್ದೊಂದು ಇತಲಿಯ ಸೈನ್ಯವನ್ನು ಪರಾಜಯ ಪಡಿಸಿದನು. ಅನಂತರ ಇತಲಿಯವರು ಅಲ್ಲಿಗೆ ಬಲವಾದ ಸೈನ್ಯವನ್ನು ಕಳುಹಿಸಿದರು. ಅಷ್ಟರಲ್ಲಿ ಅಬಿಸಿನ್ಯದ ಅರಸನು ಇಂಗ್ಲಿಷ ಸರಕಾರದವರು ಸಂಧಾನ ಮಾಡಿಸ ಬೇಕೆಂದು ಅಪೇಕ್ಷಿಸಿದ್ದಲ್ಲಿ ವಾಗ್ವಾದದ ಶೀಮೆಯನ್ನು ಬಿಟ್ಟು ಕೊಟ್ಟರೆ ಸಂಧಾನವನ್ನು ಕುರಿತು ಪ್ರಸ್ತಾಪಿಸ ಬಹುದೆಂದು ಇಂಗ್ಲಿಷರು ಹೇಳಿದ್ದನ್ನು ಮನಸ್ಸಿಗೆ ತಾರದೆ ಹೇರಳ ಸೈನ್ಯ ಸಮೇತ ಇತಲ್ಯರೊಂದಿಗೆ ಕಾದಾಡುವದಕ್ಕೆ ಮುಂದರಿಸಿದನು. ಆದರೆ ಇತಾಲ್ಯದ ಬಲವನ್ನು ಕಂಡು ಹೆದರಿ ಯುದ್ಧ ಮಾಡದೆ ಸೈನ್ಯಸಮೇತವಾಗಿ ಹಿಂದಕ್ಕೆ ಸರಿದನು. ಇತಾಲ್ಯದವರು ಸಂಧಾನದ ಶರ್ತಗಳನ್ನು ಕುರಿತು ಅರಸನೊಂದಿಗೆ ಪ್ರಸ್ತಾಪಿಸುತ್ತಾರೆ.—ಆಫ್ರಿಕದ ಪಶ್ಚಿಮ ಭಾಗದಲ್ಲಿರುವ ನೇಟಲ್ ಶೀಮೆಗೆ ಹಿಂದುಸ್ಥಾನದಿಂದ ಹೇರಳ ಮಂದಿ ಕೂಲಿಯವರು ಗೇಯುವದಕ್ಕೆ ಹೋಗುತ್ತಾರೆ. ಈಗ ಸದ್ಯಾ ಅಲ್ಲಿ ಹೊಲಗಳಲ್ಲಿ ಕೆಲಸ ಮಾಡುವವರಿಂದ ಹಿಡಿದು ಮನೆಯ ಚಾಕರರ ವರೆಗೆ ಹೆಚ್ಚುಕಡಿಮೆ ೨೫ ಸಾವಿರ ಜನರಿದ್ದಾರೆ. ಕೆಲವರು ಹಣವಂತರಾಗಿ ವ್ಯಾಪಾರ ಮಾಡುತ್ತಾರೆ. ಹಿಂದು ಕೂಲಿಯವರನ್ನು ಅಲ್ಲಿಂದ ಒಂದೇ ತಿಂಗಳಿಗಾದರೂ ಇತ್ತಲಾಗೆ ಕರಿಸಿದ್ದಾದರೆ ಆ ಶೀಮೆಯಲ್ಲಿ ನಾನಾ ಕೆಲಸಗಳಿಗೂ ಉದ್ದಿಮೆಗೂ ಅಭ್ಯಂತರವಾದೀತಂತೆ. ಮಿಸ್ರದೇಶದಲ್ಲಿ ನೀಲ ಎಂಬ ದೊಡ್ಡ ಹೊಳೆಗೆ ನೆರೆ ಬಂದು ಎಂಟನೂರು ಕುಟುಂಬಗಳು ಮನೆಮಾರು ಯಾವತ್ತು ಕಳಕೊಂಡರು.

ಇಂಗ್ಲಾಂಡು.—ಫೆಬ್ರವರಿ ತಿಂಗಳಲ್ಲಿ ರಾಜಾಜ್ಞೆಯಿಂದ ಪಾರ್ಲಿಮೆಂತ ಸಭೆಯು ನೆರೆದು ಬರುವಂಥಾದ್ದಾಯಿತು. ಮಹಾರಾಜ್ಞಿ ಚಕ್ರವರ್ತಿನಿಯವರ ಆಳಿಕೆಯಲ್ಲಿ ಇದು ಹನ್ನೆರಡನೆ ಪಾರ್ಲಿಮೆಂತ ಸಭೆ.

ಲಂಡನ ಪಟ್ಟಣದಲ್ಲಿ ಏನೊಂದು ವೃತ್ತಿಯಿಲ್ಲದೆ ಕಷ್ಟ ಪಡುವವರು ಹೇರಳ ಮಂದಿ ಇದ್ದಾರೆ. ಇಂಥವರೆಲ್ಲರೂ ಕೂಟ ಕೂಡಿ ತಮಗೆ ಕೆಲಸ ಕೊಡಿಸ ಬೇಕೆಂದು ಪಟ್ಟಣದ ಅಧಿಕಾರಸ್ಥರ ಬಳಿಗೂ ಇತರ ಅಧಿಕಾರಸ್ಥರ ಬಳಿಗೂ ತಮ್ಮ ಕಡೆಯಿಂದ ಜನರನ್ನು ಕಳುಹಿಕೇಳಿಕೊಂಡಲ್ಲಿ ಅವರಿಂದ ಸಮರ್ಪಕವಾದ ಉತ್ತರ ಸಿಕ್ಕದ್ದರಿಂದ ದೊಂಬಿ ಮಾಡಿ ಪಟ್ಟಣದಲ್ಲಿ ಮೆರವಣಿಗೆ ಮಾಡಲೆಸಗಿದರು. ಪೋಲೀಸಿನವರು ಇವರಿಗೆ ಆಟಕು ಮಾಡಿ ಅವರಲ್ಲಿ

ಮುಖ್ಯಮುಖ್ಯರನ್ನು ಹಿಡಿದು ಬಂದೋಬಸ್ತು ಮಾಡಿದರು. ಮತ್ತು ಈ ದೊಂಬಿಗಾರರ ಉಪಟಳದ ದೆಶೆಯಿಂದ ಸರಕಾರದವರು ಕೆಲವು ಕಾಲಕ್ಕೆ ಹೆಚ್ಚಿಗೆ ಪೋಲೀಸ ಪೌಜನ್ನು ಏರ್ಪಡಿಸ ಬೇಕಾಯಿತು. ಐರ್ಲಾಂಡಿನಲ್ಲಿ ರೈತರು ಕಂದಾಯ ವಸೂಲು ಕೊಡದೆ ತಂಟೆ ಮಾಡುವದನ್ನು ನಿಲ್ಲಿಸುವದಕ್ಕೆ ಪಾರ್ಲಿಮೆಂತ ಸಭೆಯವರು ಏರ್ಪಡಿಸಿದ ಹೊಸ ಕಾಯಿದೆಯನ್ನು ಜಾರಿ ಮಾಡಿದ್ದರಿಂದ ಅನೇಕ ತೊಂದರೆಗಳು ಸಂಭವಿಸಿದವು. ಕೆಲವು ಪ್ರಮುಖ ಗೃಹಸ್ಥರು ಸರಕಾರಕ್ಕೆ ವಿರೋಧವಾಗಿ ಭಾಷಣ ಮಾಡಿದರೆಂಬ ಆಪಾದನೆಯ ಮೇಲೆ ನ್ಯಾಯವಾಗಿ ಶಿರೆವುನೆಯ ಶಿಕ್ಷೆಯನ್ನು ಅನುಭವಿಸ ಬೇಕಾಯಿತು.

ಜರ್ಮನಿ ದೇಶದ ಮಹಾರಾಜರಾದ ವಿಲ್ಹೆಲ್ಮ ಕೈಸರವರು ಮಹಾ ವೃದ್ಧಾಪ್ಯದಲ್ಲಿ ಮರಣ ಪಟ್ಟರು. ಅವರು ೧೭೯೭ನೆ ಇಸವಿಯಲ್ಲಿ ಹುಟ್ಟಿದವರು. ಆವರ ತಂದೆಯವರಾದ ಮೂರನೆ ಫ್ರೀದರಿಕ್ ವಿಲ್ಹೆಲ್ಮ ಅರಸರು ೧೮೮೮ರಲ್ಲು ಮರಣ ಪಟ್ಟ ಮೇಲೆ ಅವರ ಹಿರೇ ಮಗನಿಗೆ ಅಂದರೆ ವಿಲ್ಹೆಲ್ಮ ಕೈಸರರ ಅಣ್ಣನಿಗೆ ಪಟ್ಟವಾಯಿತು. ಇವರು ೩ಪುತ್ರರಾಗಿ ೧೮೮೮ರಲ್ಲು ತೀರಿ ಹೋದ ಮೇಲೆ ತಮ್ಮನಿಗೆ ಸಿಂಹಾಸನದ ಬಾಧ್ಯವು ಪ್ರಾಪ್ತವಾಯಿತು. ಇವರು ಬಿಸ್ಮಾರ್ಕ ಪ್ರಭುವನ್ನು ಮಂತ್ರಿತ್ವಕ್ಕೆ ನೇಮಿಸಿ ರಾಜ್ಯವನ್ನು ಉನ್ನತಿಗೆ ತರುವವರಾದರು. ೧೮೬೪ರಲ್ಲು ವಿಲ್ಹೆಲ್ಮ ಕೈಸರವರು ದೆನ್ಮಾರ್ಕ ದೇಶದ ಅರಸನೊಂದಿಗೆ ಯುದ್ಧ ಮಾಡಿ ಶ್ಲೆಸ್ವಿಗ್ ಹೊಲ್‌ಸ್ಟೈನ್ ಶೀಮೆಗಳನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡರು. ಆ ವರೆಗೆ ಜರ್ಮನಿಯ ಬೇರೆಬೇರೆ ಸಂಸ್ಥಾನಗಳು ಐಕಮತ್ಯವಾಗಿ ವ್ಯವಹರಿಸದಿರುವದರಿಂದ ಪರರಾಜ್ಯದವರಾದ ಫ್ರೆಂಚರು ಶೀಮೆಗೆ ದಾಂಡು ಮಾಡಿದರೆ ಮಹಾ ಗೊಂದಳ ಉಂಟಾಗುವದಕ್ಕೆ ಕಾರಣವಿತ್ತು. ಸಂಸ್ಥಾನದ ಸಭೆಯಲ್ಲಿ ಆಸ್ಟ್ರಿಯ ಮಹಾರಾಜನಿಗೆ ಪ್ರಮುಖತ್ವವಿತ್ತು. ಆದರೆ ಎಲ್ಲಾ ಸಂಸ್ಥಾನಗಳನ್ನು ಏಕೀಕರಿಸುವದು ಅವನಿಂದಾಗದ ಕಾರಣ ಪ್ರಮುಖತ್ವವನ್ನು ತಾವೇ ತೆಗೆದುಕೊಳ್ಳ ಬೇಕೆಂದು ನಿಶ್ಚಯ ಮಾಡಿ ಆಸ್ಟ್ರಿಯರ ಸಂಗಡ ಯುದ್ಧಕ್ಕೆ ಹೊರಟರು. ೧೮೬೬ರಲ್ಲಿ ಉಂಟಾದ ಈ ಯುದ್ಧದಲ್ಲಿ ಜರ್ಮನಿಯ ಹಲವು ಸಂಸ್ಥಾನಗಳು ಆಸ್ಟ್ರಿಯರನ್ನು ಕೂಡಿಕೊಂಡರೂ ವಿಲ್ಹೆಲ್ಮ ಕೈಸರರು ಕಂಗೆಡದೆ ತನ್ನ ಪ್ರಶಸ್ತ ಸೈನ್ಯದ ಮುಖಾಂತರ ಆಸ್ಟ್ರಿಯರನ್ನು ಪರಾಜಯ ಪಡಿಸಿದರು. ಕಡೆಗೆ ಸಾದೊವಾ ಎಂಬಲ್ಲಿ ಆದ ತಹಾನಾಮೆಯಲ್ಲಿ ಜರ್ಮನಿ ಸಂಸ್ಥಾನಗಳ ಪ್ರಮುಖತ್ವವು ವಿಲ್ಹೆಲ್ಮ ಕೈಸರರಿಗೆ ಉಂಟಾಯಿತು. ಆದರೆ ಪ್ರಶಿಯ ದೇಶದ ಅಭಿವೃದ್ಧಿಯನ್ನು ಫ್ರೆಂಚರು ಸಹಿಸಲಾರದೆ ಏನಾದರೂ ಒಂದು ಯುದ್ಧದ ಮಾತಿಗೆ ನಿಮಿತ್ತವನ್ನು ಹುಡುಕುತ್ತಿದ್ದರು. ಹೀಗಿರುವಾಗ ೧೮೭೦ರಲ್ಲು ಸ್ಪೇನ ದೇಶದವರು ಪ್ರಶಿಯದ ರಾಜಕುಲದವನೊಬ್ಬನನ್ನು ತಮ್ಮ ಅರಸನಾಗಿ ಆದುಕೊಂಡಲ್ಲಿ ಸ್ಪೇನಿನಲ್ಲಿಯೂ ಜರ್ಮನ ಅರಸನೇ ಆಳುವವನಾದರೆ ತಮಗೆ ಕಚ್ಚಾಟ ಬಂದೀತೆಂಬ ಭಾವನೆಯಿಂದ ನೀವು ಇದಕ್ಕೆ ಒಪ್ಪುವದಿಲ್ಲವೆಂದು ನಮಗೆ ಮಾತು ಕೊಡ ಬೇಕೆಂಬದಾಗಿ ಅಂದು ಫ್ರೆಂಚ ಮಹಾರಾಜನಾಗಿದ್ದ ಮೂರನೆ ನೆಪೊಲಿಯನು ವಿಲ್ಹೆಲ್ಮ ಕೈಸರರನ್ನು ಕೇಳಿಕೊಂಡನು. ವಿಲ್ಹೆಲ್ಮ ಕೈಸರರು ಇದಕ್ಕೆ ಒಪ್ಪದೆ ಹೋಗಲು ಉಭಯ ರಾಜ್ಯಗಳವರಿಗೆ ಖಾಡಾಖಾಡಿ ಯುದ್ಧ ಉಂಟಾಯಿತು. ಈ ಯುದ್ಧದಲ್ಲಿ ಫ್ರೆಂಚ ಸೈನ್ಯವು ಸೋತು ಹೋಯಿತು. ವಿಲ್ಹೆಲ್ಮ ಕೈಸರರ ಸೈನ್ಯವು ಫ್ರೆಂಚ ಸೈನ್ಯವನ್ನು ಕೈ ಶೆರೆ ಹಿಡಿದ ರೀತಿಯಲ್ಲಿ ಪೂರ್ವದಲ್ಲಿ ಯಾವ ದೇಶದ ಯುದ್ಧದಲ್ಲಿಯೂ ಯಾವ ಅರಸನೂ ಹಿಡಿಯಲಿಲ್ಲ. ವಿಲ್ಹೆಲ್ಮ ಕೈಸರರು ಫ್ರೆಂಚರಿಂದ ಆಲ್ಸಾಸ್ ಲೊರೆನ ಎಂಬ ಶೀಮೆಗಳನ್ನೂ ಖಂಡಣೆ ಹಣವಾಗಿ ಇನ್ನೂರು

ಕೋಟಿ ರೂಪಾಯಿಗಳನ್ನೂ ತೆಗೆದುಕೊಂಡರು. ಅಂದಿನಿಂದ ಅವರಿಗೆ ಮಹಾರಾಜರೆಂದು ನಾಮಧೇಯವಾಯಿತು. ರಾಜ್ಯದಲ್ಲಿರುವ ಸೊಶಲಿಷ್ಟರೆಂಬ ದ್ರೋಹಿಗಳು ಒಂದೆರಡಾವರ್ತಿ ಅವರನ್ನು ಕೊಲ್ಲುವದಕ್ಕೆ ಪ್ರಯತ್ನ ಮಾಡಿದ್ದು ಸಾಧ್ಯವಾಗಲಿಲ್ಲಾ. ಒಳ್ಳೇ ವೃದ್ಧಾಪ್ಯಕ್ಕೆ ಮುಟ್ಟಿ ಸಮಾಧಾನದಿಂದ ತೀರಿ ಹೋದರು. ಮರಣಕ್ಕೆ ಮುಂಚೆ ಅವರು ತನ್ನ ಬಂಧು ಬಾಂಧವರ ಸಂಗಡಲೂ ಮುಖ್ಯ ಪ್ರಧಾನಿಗಳಾದ ಬಿಸ್ಮಾರ್ಕ ಮೊಲ್ತ್ಕೆ ಎಂಬವರ ಸಂಗಡಲೂ ಮಾತಾಡಿ ಬುದ್ಧಿ ಹೇಳಿದರು. ಮಹಾರಾಜರ ಮರಣವು ಪ್ರಜೆಗಳಿಗೆ ಮಾತ್ರವಲ್ಲಾ, ಇಂಗ್ಲಿಷರು ರುಸ್ಯರು ಮೊದಲಾದವರಿಗೂ ಸಹಾ ಯಥಾರ್ಥವಾದ ದುಃಖಕ್ಕೆ ಕಾರಣವಾಯಿತು. ಅವರ ಪಟ್ಟದ ಕುಮಾರರು ಮೂರನೆ ಫ್ರೀದರಿಕ್ ಕೈಸರರು ಎಂಬ ಹೆಸರಿನಿಂದ ಗದ್ದಿಗೆಯನ್ನೇರಿದರು. ಆದರೆ ಇವರು ಕೊರಳಿನಲ್ಲಿ ಉಂಟಾದ ವ್ರಣದ ದೆಶೆಯಿಂದ ಅಸ್ವಸ್ಥವಾಗಿರುತ್ತಿದ್ದರು. ಅವರು ಪುನಹಾ ಕ್ಷೇಮವಂತರಾಗುವರೆಂಬ ಕೋರಿಕೆಯು ಇರಲಿಲ್ಲಾ. ತಂದೆಯವರ ಮರಣದ ನಂತರ ಸುಮಾರು ಮೂರು ತಿಂಗಳು ಮಾತ್ರ ಸಾಮ್ರಾಜ್ಯಭಾರವನ್ನು ವಹಿಸಿಕೊಂಡು ಅವರೂ ಮರಣಪಟ್ಟರು. ಈಗ ಇವರ ಕುಮಾರರು ೨ನೆ ವಿಲ್ಹೆಲ್ಮ ಎಂಬ ಹೆಸರು ಧರಿಸಿ ಸಿಂಹಾಸನಾರೂಢರಾಗಿದ್ದಾರೆ.

ಫ್ರಾನ್ಸ್ ದೇಶದಲ್ಲಿ ಪ್ರಜಾಧಿಪತ್ಯಕ್ಕೆ ಅಗ್ರಸ್ಥನಾಗಿದ್ದ ಗ್ರೇವಿ ಎಂಬವನು ರಾಜೀನಾಮೆ ಕೊಟ್ಟದ್ದರಿಂದ ಫ್ರೆಂಚ ಮಹಾಜನ ಸಂಘದವರು ಸಾದಿಕಾರ್ನೊ ಎಂಬವನನ್ನು ಆ ಉದ್ಯೋಗಕ್ಕೆ ಆದುಕೊಂಡರು. ಈ ಹೊಸ ಅಗ್ರಸ್ಥನು ತಾನು ಉದ್ಯೋಗ ನಡಿಸುವ ಕಾಲವೆಲ್ಲಾ ಯುದ್ಧ ಮಾಡ ಬೇಕೆಂಬ ಹೇತುವನ್ನು ಮುಂದಿಟ್ಟುಕೊಂಡು ಯಾವದೊಂದೂ ಕಾರ್ಯವನ್ನೂ ಮಾಡೆನೆಂದು ಜರ್ಮನಿ ಚಕ್ರವರ್ತಿಗೆ ತಿಳಿಯ ಪಡಿಸಿದನು.

ರುಸ್ಯ ಸಾಮ್ರಾಜ್ಯದ ಮಹಾರಾಜರು ಶೀಮೆಯ ಬೇಸಾಯ ವ್ಯಾಪಾರ ಉದ್ದಿಮೆಗಳನ್ನು ಏಳಿಗೆ ಮಾಡಿಸುವ ಪ್ರಯತ್ನ ಮಾಡುವದು ಬಿಟ್ಟು ಕೇವಲ ಯುದ್ಧಸನ್ನಾಹ ಮಾಡುವದರಲ್ಲಿಯೂ ಸೈನ್ಯವನ್ನು ಹೆಚ್ಚುವಳಿ ಮಾಡುವದರಲ್ಲಿಯೂ ರಾಜ್ಯಭಂಡಾರವನ್ನು ವೆಚ್ಚ ಮಾಡುವದಾಗಿ ತೋರುತ್ತದೆ. ಹೇರಳ ರೈತರು ಹೊಟ್ಟೆಗಿಲ್ಲದೆ ಬಳಲುತ್ತಾರೆ, ವರ್ತಕರು ದಿವಾಳಿ ತೆಗಿಯುತ್ತಾರೆ. ಯೆಹೂದ್ಯರು ಶೀಮೆಯನ್ನು ಬಿಟ್ಟು ಹೋಗ ಬೇಕೆಂದು ಕಟ್ಟು ಏರ್ಪಡಿಸಿದ್ದರಿಂದ ಹೇರಳ ಹಣ ನಷ್ಟವಾಗುವದಕ್ಕೆ ಕಾರಣವಾಯಿತು. ವಿದ್ಯಾಮಠಗಳಲ್ಲಿ ಕಲಿಯುವ ವಿದ್ಯಾರ್ಥಿಗಳಲ್ಲಿಯೂ ಮಹಾರಾಜರ ಮೈಗಾವಲಿಯವರಲ್ಲಿಯೂ ಮಹಾರಾಜರನ್ನು ಸಂಹರಿಸಲೆಸಗುವವರಿದ್ದಾರೆ. ಹೀಗಿದ್ದಾಗ್ಯೂ ರುಸ್ಯಮಹಾರಾಜರು ಮಧ್ಯ ಆಸ್ಯದ ಮೆರ್ವ ಎಂಬಲ್ಲಿ ಬೇಸಿಗೆಯಲ್ಲಿ ಆರಾಮಕ್ಕಾಗಿ ವಸ್ತಿ ಮಾಡುವ ಹಾಗ್ಯೆ ಆರಮನೆ ಕಟ್ಟಿಸುತ್ತಾರೆಂದೂ ಮಧ್ಯಾಸ್ಯದ ಮಹಾರಾಜನೆಂದು ಬಿರುದು ಧರಿಸುವ ಯೋಚನೆಯಲ್ಲಿದ್ದಾರೆಂದೂ ವದಂತಿಯದೆ.

ಚೀನ ದೇಶದಲ್ಲಿ ಹೋನಾನ್ ಎಂಬ ಶೀಮೆಯ ದೊಡ್ಡ ಅಂಶವು ಅರಶಿನ ಹೊಳೆಯ ನೆರೆಯಿಂದ ಹಾವಳಿಯಾಯಿತು. ಊರೆಲ್ಲಾ ಸರೋವರವಾಗಿ ಕಾಣುತ್ತದೆ. ಹೊಳೆಯು ಉಭಯ ಪಾರ್ಶ್ವಗಳಲ್ಲಿ ಕಟ್ಟಿದ್ದ ಮಹಾ ಉದ್ದವಾದ ಅಣೆಕಟ್ಟು ನೀರಿನ ಒತ್ತರವನ್ನು ತಾಳಲಾರದೆ ಒಡೆದು ಹೋದದ್ದೇ ಈ ಹಾವಳಿಗೆ ಕಾರಣವಾಯಿತು. ಲಕ್ಷಾನು ಲಕ್ಷ ಜನರು ನೀರಿಗೆ ಆಹುತಿಯಾದದ್ದಲ್ಲದೆ ಲಕ್ಷಾನು ಲಕ್ಷ ಜನರು ನೀರಿನ ಕಂಟಕಕ್ಕೆ ತಪ್ಪಿಸಿಕೊಂಡಾಗ್ಯೂ ಕಂಗೆಟ್ಟು ಅನ್ನಾಹಾರಕ್ಕೆ ಬಳಲುವವರಾದರು. ಚೀನಿ ಸರಕಾರದವರು ಹೇರಳ ದ್ರವ್ಯ

ನಮ್ಮ ರಕ್ಷಣೆಯ ದೇವರೇ, ಭೂಮಿಯನ್ನು ದರ್ಶಿಸಿ, ಅದನ್ನು ತ್ಯಾವಿಸಿ, ಬಹಳ

ವೆಚ್ಚ ಮಾಡಿ ಆ ಆಣೆಕಟ್ಟನ್ನು ಜೀರ್ಣೋದ್ಧಾರ ಮಾಡಿಸುತ್ತಾರೆ. ಮತ್ತು ಆ ಶೀಮೆಯ ಸರಕಾರಿ ಉದ್ಯೋಗಸ್ಥರು ಮೊದಲೇ ಜಾಗ್ರತೆ ಮಾಡದ್ದರಿಂದ ಈ ಹಾವಳಿಯಾಯಿತೆಂದು ಅವರಿಗೆ ಕಠಿಣ ಶಿಕ್ಷೆ ಮಾಡಿಸಿದರು. ನೀರಿನ ಗಂಡಾಂತರವಲ್ಲದೆ ಚೀನದಲ್ಲಿ ಭೂಕಂಪವೂ ಸಂಭವಿಸಿ ಇಪ್ಪತ್ತುಸಾವಿರ ಜನರು ಸತ್ತು ಹೋದರು.

ಔಸ್ತ್ರೇಲಿಯವೆಂಬ ಮಹಾದ್ವೀಪದಲ್ಲಿ ಇಂಗ್ಲಿಷರು ಜನವಸ್ತಿ ಮಾಡಿಸುವದಕ್ಕೆ ಪ್ರಾರಂಭ ಮಾಡಿ ನೂರು ವರ್ಷಗಳಾದವು. ಮೊದಲು ಇಂಗ್ಲಿಷ ಕಪಿತಾನನೊಬ್ಬನು ಇಂಗ್ಲಾಂಡಿ ನಿಂದ ಗಡಿಪಾರು ಮಾಡಲ್ಪಟ್ಟ ಅಪರಾಧಿಗಳನ್ನು ಹಡಗದಲ್ಲಿ ಏರಿಸಿಕೊಂಡು ಅವರನ್ನು ಅಲ್ಲಿ ತಂದು ಬಿಟ್ಟನು. ಅಂದಿನಿಂದ ಇಂಗ್ಲಿಷರು ಅಲ್ಲಿ ನೆಲೆಗೊಳ್ಳುವವರಾಗಿ ಶೀಮೆಯನ್ನು ರೂಪಿತ ಮಾಡಿದರು. ಇದರ ನೆನಪಿಗಾಗಿ ಆ ದ್ವೀಪದ ಪ್ರಜೆಗಳು ಮಹೋತ್ಸವವನ್ನು ಏರ್ಪಡಿಸಿ ಮಹಾರಾಣಿ ಚಕ್ರವರ್ತಿನಿಯವರ ಪುತ್ಥಳಿಯನ್ನೂ ಸ್ಥಾಪಿಸಿ ಸರ್ವೆ ದೇವಾಲಯಗಳಲ್ಲಿ ದೇವರಿಗೆ ಸ್ತೋತ್ರ ಕೃತಜ್ಞತಾಪನೆಯ ಪ್ರಾರ್ಥನೆಗಳು ಮಾಡಲಾದವು.

ಉತ್ತರ ಅಮೇರಿಕದಲ್ಲಿ ಕಾನದಾ ಎಂಬ ಶೀಮೆಯು ಇಂಗ್ಲಿಷ ಸರಕಾರಕ್ಕೆ ಸೇರಿದ್ದು ಇರುತ್ತದೆ. ಈ ಶೀಮೆಗೂ ಸಂಯುಕ್ತ ಸಂಸ್ಥಾನಗಳಿಗೂ ಮಧ್ಯೆ ಇರುವ ಸರೋವರಗಳಲ್ಲಿ ಮೀನು ಹಿಡಿಯುವದನ್ನು ಕುರಿತು ವಿವಾದ ಉಂಟಾಗಿತ್ತು. ಈ ವಿವಾದವನ್ನು ಉಭಯ ಕಡೆಯಿಂದಲೂ ನೇಮಕ ಪಟ್ಟ ಪಂಚಾಯತರಿಂದ ತೀರಿಸಿಕೊಂಡದ್ದಾಯಿತು. ಸಂಯುಕ್ತ ಸಂಸ್ಥಾನಗಳಲ್ಲಿ ಕ್ಲೀವಲಂದನೆಂಬ ಅಧಿಪತಿಯ ಅವಧಿ ಮುಗಿದದರಿಂದ ಹೊಸ ಪ್ರೆಸಿಡೆಂಟನೆಂಬ ಅಧಿಪತಿಯನ್ನು ಆದುಕೊಳ್ಳುವರು.

ನಿಯಾಗರದ ಜಲಪ್ರಪಾತವು.

ಉತ್ತರ ಅಮೇರಿಕದಲ್ಲಿ ಭೂಮಂಡಲದ ಎಲ್ಲಾ ಶೀನೀರಿನ ಸರೋವರಗಳಲ್ಲಿ ದೊಡ್ಡದು ಆಗಿ, ಮೈಸೂರು ಶೀಮೆಯಷ್ಟು ಕ್ಷೇತ್ರ ಫಲವುಳ್ಳದ್ದಾಗಿರುವ **"ಮೇಗಣ ಸರೋವರವು"** ಇರುತ್ತದೆ. ಈ ಮೇಗಣ ಸರೋವರವು "ಮಿಚಿಗನ" ಸರೋವರಕ್ಕೂ "ಹುರೋಣ" ಸರೋವರಕ್ಕೂ ಜೋಡಿಕೆಯಾಗಿದೆ. ಈ ಸರೋವರಗಳ ನೀರು "ಎರೀ" ಸರೋವರಕ್ಕೂ "ಒಂತಾರಿಯೊ" ಸರೋವರಕ್ಕೂ ಹರಿಯುತ್ತದೆ. ಇವೆರಡು ಸರೋವರಗಳನ್ನು "ನಿಯಾಗರ" ನದರಾಜನು ಜೋಡಿಸುವನು. ಆ ನಿಯಾಗರ ನದಿ ಸುಮಾರು ೩ ಗಾವದ ಉದ್ದವಾಗಿ ಸಂಯುಕ್ತ ಸಂಸ್ಥಾನಗಳದೂ ಬ್ರಿತಿಷ ಅಮೇರಿಕದ ಕಾನದ ದೇಶದ್ದೂ ಸರಹದ್ದಾಗಿರುತ್ತದೆ. ಒಂದು ಲೋಕಪ್ರಸಿದ್ಧವಾದ ಮಹಾ ಜಲಪ್ರಪಾತವು (ಅಂದರೆ ಜೋಗು, ಝರ, ಝರಿ) ಆ ನದಿಯ ಪ್ರಖ್ಯಾತಿಗೆ ಕಾರಣವಾಗಿರುತ್ತದೆ. (ಸದರಿ ಝರಿಯ ಚಿತ್ರವು ಈ ಪಂಚಾಂಗದ ಆರಂಭದಲ್ಲಿ ಕೊಟ್ಟಿರುತ್ತದೆ). "ಈರಿಸೈಲಂಡು" (ಅಂದರೆ ಮಳೇ ಬಿಲ್ಲಿನ ದ್ವೀಪವು) ಝರಿಯನ್ನು ಎರಡು ಭಾಗವಾಗಿ ವಿಂಗಡಿಸುತ್ತದೆ. ಸಂಯುಕ್ತ ಸಂಸ್ಥಾನಗಳ ಕಡೆಯಿಂದ ಆ ದ್ವೀಪಕ್ಕೆ ಆ ದ್ವೀಪದಿಂದ ಕಾನದ ದೇಶದ ಕಡೆಗೆ ಝರಿಯ ಮೇಲೆಯೇ ಸೇತುವೆ ಕಟ್ಟಿರುತ್ತದೆ. ಆ ಸೇತುವೇ ಮೇಲೆ ನಿಂತುಕೊಂಡು, ಪ್ರೇಕ್ಷಕರು ಕೇವಲ ಅವರ್ಣನೀಯವಾದ ನೋಟವನ್ನೀಕ್ಷಿಸಿ, ಆಶ್ಚರ್ಯಾತಿಶಯದಿಂದ ಪೂರ್ಣ ವಿಸ್ಮಯನಿಮಗ್ನರೂ

ನೇತ್ರಭ್ರಾಂತರೂ ಆಗುತ್ತಾರೆ. ಸಂಯುಕ್ತಸಂಸ್ಥಾನಗಳ ಕರೆಗೆ ಹೊಂದುವ ಜೋಗು ೮೦೦ ಅಡಿ, ಆಚೆಯ ಜೋಗು ೧,೫೧೦ ಅಡಿ ಆಗಲವಾಗಿರುತ್ತದೆ. ಇಡೀ ಜೋಗಿನ ಅಗಲವು (ಈರಿಸೈಲಂಡೆಂಬ ನಡುಗಡ್ಡೆಯದು ಕೂಡಿ) ೪,೭೫೦ ಅಡಿಯಾಗಿರುತ್ತದೆ. ನಿಯಾಗರದ ನೀರು ಅತ್ಯಂತ ವೇಗವಾಗಿಯೂ ವಿಪುಳವಾಗಿಯೂ ಪ್ರವಾಹಿಸಿ, ೧೬೪ ಅಡಿ ಎತ್ತರದಿಂದ ತುರ್ತಾ ನೀಟಾಗಿ ಕೆಳಗೆ ಬೀಳುವ ಕಾರಣದಿಂದ ಒಂದು ಗಾವದ ದೂರಕ್ಕೆ ಕಾಣುವ ಶುಕ್ಲ ಸೇಚಕವು (ಬಿಳೇ ಮೋಡವು) ಜಲಪ್ರಪಾತದ ಮೇಲೆ ನಿತ್ಯವೇ ಇದ್ದೇ ಇರುತ್ತದೆ. ಮತ್ತು ಅಷ್ಟು ಬಹಳ ನೀರು ಬೀಳುವ ರಭಸದಿಂದ ಮಹಾ ಮೇಘಗರ್ಜನೆಯಂಥಾ ಘೋಷವೂ ಹುಟ್ಟಿ ಬಹು ದೂರಕ್ಕೆ ಕೇಳಿಸುತ್ತಿರುತ್ತದೆ.

ಕೀರ್ತಿಯು ಆಶೆಯಿಂದ ಎರೀ ಸರೋವರದ ದಿಕ್ಕಿನಿಂದ ಒಂಟಾರಿಯೊ ಸರೋವರದ ಕಡೆಗೆ ಜಲಪ್ರಪಾತವನ್ನು ಹಾದು ಹೋಗ ಬೇಕೆಂತ ಬೇರೆಬೇರೆ ಜನ ಸಾಹಸಗಾರರು ದೋಣಿಯಲ್ಲಿ ಕುಳಿತು ಅಥವಾ ಈಜಾಡಿ ಎತ್ತುಗಡೆ ಎತ್ತಿದ್ದಾರೆಯಿತು. ಈ ಬಗೆಯ ಸಾಹಸವು ಕೆಲವು ಸಲ ಮಾತ್ರ ಸಾರ್ಥಕವಾಗಿ, ಹೆಚ್ಚು ಸಲ ಯಮದರ್ಶನಕ್ಕೆ ದಾರಿಯಾಯಿತು. ಸಾಮುವೇಲ್ ಪಚ್ ಎಂಬವನೊಬ್ಬನು ಜಲಪ್ರಪಾತವನ್ನು ಒಮ್ಮೆ ಹಾದನಂತರ ಎರಡನೇ ಸರ್ತಿ ಹಾಯ ಎತ್ತುಗಡೆ ಎತ್ತಿ ಯಮಪುರಕ್ಕೆ ಮುಟ್ಟಿದನು.

ಉತ್ತರ ಕನ್ನಡಾ ಜಿಲ್ಲೆಗೆ "ಜೋಗು" ಎಂಬ ಹೆಸರು ರೂಢಿಯಾದ ಗೆರ್ಸೊಪ್ಪಾ ಜಲಪ್ರಪಾತದ ಶೋಭೆಯಿರುತ್ತದೆ. ಆದರೆ ಇದರ ನೀರು ನಿಯಾಗರದಷ್ಟು ವಿಪುಲವಾಗಿರದ ಕಾರಣದಿಂದ ಇದರ ಘೋಷೆ, ಪ್ರತಾಪ, ಪ್ರಭಾವ ಪ್ರಾಬಲ್ಯವು ಕಡಿಮೆಯಾಗಿದ್ದರೂ, ಆದು ಸುಮಾರು ೧,೦೦೦ ಅಡಿಯಷ್ಟು ಎತ್ತರದಿಂದ (ಸಾಧಾರಣವಾಗಿ ನಾಲ್ಕು ಝರಿಗಳಾಗಿ) ಬೀಳುವಂಥಾದ್ದಾಗಿ, ಮಹದಾಶ್ಚರ್ಯವನ್ನು ಹುಟ್ಟಿಸುವಂಥಾದ್ದೂ ಆಗಿದೆ.

ಪೃಥ್ವಿಯೂ ಅದರಲ್ಲಿಯ ಕೋಟ್ಯಾನುಕೋಟಿ ಜಲಪ್ರವಾಹಾದಿ ಆಶ್ಚರ್ಯಗಳೂ ವಿಶ್ವನಿರ್ಮಾಣಕರ್ತನೂ ವಿಶ್ವರಕ್ಷಾಕರ್ತನೂ ಆಗಿರುವ ಸ್ವಾಮಿ ದೇವರ ಅನಂತ ಬಲ, ಶಕ್ತಿ, ಜ್ಞಾನ, ಮಹಿಮೆಗಳ ನಿದರ್ಶನವಾಗಿರುತ್ತವೆ. ಪತಿತ ಜೀವಾತ್ಮರ ಠಾವು ಆಗಿರುವ ಭೂಮಿಯಲ್ಲಿ ದೇವರ ಮಹಿಮೆಯನ್ನೂ ಐಶ್ವರ್ಯವನ್ನೂ ಕಾಣಿಸುವ ವಿಷಯಗಳು ಕೇವಲ ಅವರ್ಣನೀಯವೂ ಅಸಂಖ್ಯಾತವೂ ಆಗಿರಲಾಗಿ, ಸರ್ವೇಶ್ವರನಾದಾತನ ಸ್ವರ್ಗರಾಜ್ಯವು ಎಷ್ಟೋ ಹೆಚ್ಚಿನ ಬಲ, ದ್ರವ್ಯ, ಮಹಿಮೆಗಳಿಂದ ತುಂಬಿದ್ದೀತಲ್ಲವೇ? ಅಂಥಾ ಸರ್ವೈಶ್ವರ್ಯಭರಿತ ಪರಂಜ್ಯೋತಿ ಪರಮೇಶ್ವರನಿಗೆ ವೈಕ್ಷಾತ್ಮಕ ಮತ್ತು ಪಂಚಲೋಹಾತ್ಮಕ ಬಸವ, ಹನುಮಾದಿ ನಾಮಧೇಯಗಳಿದ್ದ ಮೂರ್ತಿಗಳು ತಕ್ಕ ಪೂಜ್ಯ ಪ್ರತಿಮೆಗಳಾಗಿದ್ದಾವೇನೋ?

ಒಳ್ಳೇದರಿಂದ ಕೆಟ್ಟದ್ದನ್ನು ಜಯಿಸು.

ಪಂಜಾಬಿನಲ್ಲಿ ಒಬ್ಬ ಮುಸಲ್ಮಾನನು ತನ್ನ ಪರಿಚಿತಿಯವನಾದ ಒಬ್ಬ ಮುಸಲ್ಮಾನನು ಕ್ರೈಸ್ತನಾದನೆಂದು ಕೇಳಿ ಬಹಳ ಶಿಟ್ಟಾಗಿ ಅವನನ್ನು ಬೈಯ ಬೇಕೆಂತಲೇ ನಾಲ್ಕು ಮೈಲು ದೂರವಿದ್ದ ಆವನ ಮನೆಗೆ ಹೋದನು. ಆಲ್ಲಿಗೆ ಮುಟ್ಟಿ ಮನಸೋ ಇಚ್ಛೆಯಾಗಿ ಬಾಯಿ

ಬಂದಷ್ಟು ಬೈದನು. ಆ ಕ್ರೈಸ್ತನು ಎಲ್ಲವನ್ನು ಶಾಂತವಾಗಿ ಕೇಳಿ ಕಡೆಗೆ "ನಿಮ್ಮ ಕೆಲಸ ಮುಗಿಯಿತೋ? ಹಾಗಾದರೆ ಬನ್ನಿ, ಒಂದಿಷ್ಟು ಚಾ ಪಾನಕ ಕುಡಿಯಿರಿ" ಎಂದು ಮರ್ಯಾದೆಯಿಂದ ಅವನನ್ನು ಕರೆಯಲು, ನಾನು ನಿನ್ನ ಚಾ ಕುಡಿಯ ಬೇಕೋ? ನೀನು ಕಾಫರನು ನಿನ್ನ ಚಾ ನನಗೆ ಉಸುರು ಕಟ್ಟಿಸುವದು ಅಂದನು. ಆ ದಿವಸದಲ್ಲಿ ಶಿಕೆ ಹೆಚ್ಚಿದ್ದದರಿಂದಲೂ ಅವನು ದೂರದಿಂದ ಬಂದದ್ದಲ್ಲದೆ ಒದರಿ ಒದರಿ ಬಾಯಿ ಒಣಗಿದ್ದದರಿಂದಲೂ ಚಾ ಕುಡಿದರೂ ಆಗುತ್ತಿತ್ತು ಎಂದು ಅವನಿಗೆ ಆಶೆಯಾಯಿತು. ಸ್ವಲ್ಪ ಹೊತ್ತು ಸುಮ್ಮನಿದ್ದ ಮೇಲೆ ನೀನು ಕಾಫರನು, ನಿನ್ನ ಕೈಯ ಚಾ ಕುಡಿಯ ಬಾರದು, ನಿನ್ನ ಹೆಂಡತಿ ಹಿಂದು ಮತದಿಂದ ಕ್ರೈಸ್ತಳಾದವಳು, ಅವಳ ಕೈಯಿಂದ ಕುಡಿಯ ಬಹುದೆಂದು ಹೇಳಿ ಅವಳು ಕೊಟ್ಟಾಗ ತಕ್ಕೊಂಡು ಕುಡಿದನು. "ನಿನ್ನ ಶತ್ರುವಿಗೆ ಹಸಿವೆಯಾದರೆ ಅವನಿಗೆ ಉಣ್ಣ ಕೊಡು, ದಾಹವಾದರೆ ಅವನಿಗೆ ಕುಡಿಯ ಕೊಡು. ಇದನ್ನು ಮಾಡಿದರೆ ಅವನ ತಲೆಯ ಮೇಲೆ ಉರಿಕೆಂಡಗಳನ್ನು ಕುಪ್ಪಿಹಾಕುವಿ".

ಮಾರ್ಗಗಳೆಷ್ಟು?

ಒಂದು ಊರಿಗೆ ಹೋಗುವದಕ್ಕೆ ಹಲವು ದಾರಿಗಳವೆ, ಯಾವ ದಾರಿಯಿಂದ ನಡೆದರೂ ಊರು ಶೇರ ಬಹುದು; ಹಾಗೆಯೇ ಯಾವ ಮತವನ್ನು ಅನುಸರಿಸಿದರೂ ಚಿಂತೆ ಇಲ್ಲಾ, ಕಡೆಗೆ ಮೋಕ್ಷವನ್ನು ಶೇರ ಬಹುದು. ಹೀಗೆ ಅನೇಕರು ತಮ್ಮೊಳಗೆ ಆಲೋಚಿಸಿ ನಿಶ್ಚಿಂತರಾಗಿರುವದನ್ನು ಕಾಣ ಬಹುದು. ಆದರೆ ಮೇಲಿನ ಉದಾಹರಣೆ ಸಲುವಳಿಯಲ್ಲಾ. ಯಾಕಂದರೆ ಒಬ್ಬಾನೊಬ್ಬನು ತನಗೆ ಹೆಸರು ಗೊತ್ತಿದ್ದರೂ ತಾನು ಎಂದೂ ಹೋಗದ ಊರಿಗೆ ಪಯಣ ಮಾಡುವ ಸಂದರ್ಭ ಬಂದರೆ, ಯಾವ ದಾರಿಯಿಂದ ಹೋದರೂ ಸರಿ, ಆ ಊರಿಗೆ ಮುಟ್ಟುವೆನೆಂದು ಹೊರಡುವನೋ? ಇಲ್ಲ, ಇಲ್ಲಾ, ಮೊದಲು ಆ ಊರನ್ನು ಕುರಿತು ಚನ್ನಾಗಿ ವಿಚಾರಿಸಿ ತಿಳಿದು ಬಳಿಕ ಹೊರಡುವನು. ಹಾಗೆಯೇ ಮೋಕ್ಷಸ್ಥಾನವನ್ನು ದೇವರ ರಾಜ್ಯವನ್ನು ಶೇರ ಬೇಕೆಂದು ಸರ್ವರು ಹಾರೈಸುವರು. ಆದರೆ ಮನುಷ್ಯನು ಪಾಪದ ಅಜ್ಞಾನದಿಂದ ಆ ಮಾರ್ಗವನ್ನು ಮರೆತಿದ್ದಾರೆ. ಅಯಾ ಮಾರ್ಗಗಳನ್ನು ಕಲ್ಪಿಸಿದ್ದಾರೆ, ಯಾವದೂ ಅಲ್ಲಿಗೆ ಮುಟ್ಟುವಂಥಾದ್ದಲ್ಲಾ. ಕುರುಡನು ಕುರುಡನಿಗೆ ದಾರಿ ತೋರಿಸಿದ ಸಂಗತಿಯೇ. ಆದದರಿಂದ ದೇವರು ಮನುಷ್ಯರಾದ ನಮ್ಮ ಮೇಲೆ ಪ್ರೇಮವಿಟ್ಟು ಯೇಸು ಕ್ರಿಸ್ತನನ್ನು ನಮಗೆ ಮಾರ್ಗವಾಗಿಯೂ ಸತ್ಯವಾಗಿಯೂ ಜೀವವಾಗಿಯೂ ಕಳುಹಿಸಿದನು. ಅವನು ತೋರಿಸಿದ ಮಾರ್ಗವು ಸುವಾರ್ತೆಯ ಗ್ರಂಥದಲ್ಲಿ ವಿವರಿತವಾಗಿದೆ. ಮನುಷ್ಯಕಲ್ಪಿತ ಮಾರ್ಗಗಳಲ್ಲಿ ಆಲೆದಾಡುತ್ತಾ ಬಳಲುವದು ಯಾಕೆ? ಮರಣವೆಂಬ ಹುಲಿಯು ಬಂದು ಅಬ್ಬರಿಸುವಾಗ ಬಿಡಿಸುವವರು ಯಾರು? ವಾಚಕರೇ, ಅಹಂಕಾರವನ್ನೂ ಪಕ್ಷಪಾತವನ್ನೂ ಉಳಿದು ಯೇಸು ಕ್ರಿಸ್ತನ ಶರಣು ಹೊಗಿರಿ. ಆತನೇ ಮಾರ್ಗವೂ, ಅಭಯದಾಯಕನೂ ರಕ್ಷಕನೂ ತನ್ನನ್ನು ಸ್ಮರಣೆ ಮಾಡುವವರಿಗೆ ಪ್ರಸನ್ನನಾಗುವನೂ ಆಗಿದ್ದಾನೆ.

ಶ್ರೀ ಯೇಶು ಕ್ರಿಸ್ತ ಮಾಹಾತ್ಮ್ಯಂ.

ಯಥೇಶ್ವರಾತ್ಮಜಃ ಸ್ವರ್ಗಾದವತೀರ್ಯ ಮಹೀತಲೇ |
ಪರಿತ್ರಾಣಾಯ ಮರ್ತ್ಯಾನಾಂ ಮಾನುಷಂ ದೇಹಮಾದದೆ || ೧ ||

ಯಥಾ ಚ ಕರ್ಮಭಿರ್ದಿವ್ಯೈರ್ನಾನಾ ದೀನೋಪಕಾರಿಭಿಃ |
ಸ ಕಾರುಣ್ಯಾನ್ವಿತಾಂ ಸ್ವೀಯಾಂ ಮಹಾಶಕ್ತಿಮದರ್ಶಯತ್ || ೨ ||

ಯಥಾ ಚ ಸೋಘಹೀನೋಪಿ ಶೂಲ ವೇಧೇನ ದಂಡಿತಃ |
ನಿಷ್ಕ್ರಿಯಾಯ ಮನುಷ್ಯಾಣಾಂ ನಿಜ ಪ್ರಾಣಾನ್ಸಮಾರ್ಪಯತ್ || ೩ ||

ಯಥಾ ಪಶ್ಚಾತ್ತೃತೀಯೇಹ್ನಿ ಸ್ಮಶಾನಾತ್ಪುನರುತ್ಥಿತಃ |
ಪುನಃ ಪುನಃ ಸ್ವ ಶಿಷ್ಯೇಭ್ಯೋ ದರ್ಶನಂ ಭುವಿ ಸೋದದಾತ್ || ೪ ||

ಯಥಾ ಶೇಷೇ ಚ ತತ್ಸಾಕ್ಷಾಚ್ಚತ್ವಾರಿಂಶದ್ದಿನಾನ್ಯನು |
ಸ ಸ್ವರ್ಗಲೋಕಮಾರೋಹನ್ ಮೇಘಚ್ಛನ್ನಸ್ತಿರೋದಧೆ || ೫ ||

ಇತ್ಯೇತತ್ಸರ್ವಮಾಖ್ಯಾನಂ ಪೂರ್ಣ ವಿಸ್ತರಸಂಯುತಂ |
ಪೂರ್ವಸ್ಮಿನ್ ಪೂರ್ವ ನಿರ್ಧಾರೇ ಉತ್ತರೇ ಚಾಪಿ ವರ್ಣಿತಂ || ೬ ||

ತಂ ಯೇಶುಮಂತರಾ ಕೋಪಿ ಪರಿತ್ರಾತಾ ನ ವಿದ್ಯತೆ |
ಅನ್ಯನ್ನಿಸ್ತಾರಕಂ ನಾಮ ನಾಸ್ತಿ ಕುತ್ರಾಪಿ ಭೂತಲೆ || ೭ ||

ತಸ್ಮಾತ್ ಹೇ ಭ್ರಾತರೋ ವಾರ್ತಾ ಮಂಗಲಾ ಶ್ರೂಯತಾಮಿಯಂ |
ತಸ್ಯೈವ ಸತ್ ಪ್ರಭೋರ್ದ್ವಾರಾ ಪಾಪ ಮುಕ್ತಿರವಾಪ್ಯತೆ || ೮ ||

ಯದ್ದೋಷ ಶುದ್ಧಿರಾಚಾರಾದನುಷ್ಠಾನಾನ್ನ ಸಿದ್ಧ್ಯತಿ |
ತತ್ಸರ್ವದೋಷ ಸಂಶುದ್ಧಿರ್ಲಭ್ಯತೆ ಕ್ರಿಸ್ತ ವಾತ್ರಿತೈಃ || ೯ ||

ಪಾಪಾದ್ಯೇನೋದ್ಧರೇದಸ್ಮಾನ್ ಸಮುದ್ಯುಕ್ತಾನ್ ಸುಕರ್ಮಸು |
ಸಲ್ಲೋಕಾನ್ ನಃ ಪುನೀಯಾಚ್ಚ ತದರ್ಥಂ ಸೋಭವೇದ್ಬಲಿಃ || ೧೦ ||

ಪುಣ್ಯಾಂಭೋಜವಿಕಾಸಾಯ ಪಾಪಧ್ವಾಂತಕ್ಷಯಾಯ ಚ |
ಶ್ರೀಮಾನಾವಿರಭೂದ್ಭೂಮೌ ಯೇಶುಕ್ರಿಸ್ತದಿವಾಕರಃ || ೧೧ ||

ದಕ್ಷಿಣ ಹಿಂದುಸ್ಥಾನದಲ್ಲಿ ರೂಢಿಯಾಗಿ ಎಣಿಸುವ

ಶಕಗಳ ಮೊಕಾಬಿಲೆ ಪಟ್ಟಿ.

ಕ್ರೈಸ್ತಶಕ A. D.		ಹಿಂದು ಶಕಗಳು				ಫಸಲಿ		ಮಹಮ್ಮದಿ ಹಿಜರಿ	
		ಚಾಂದ್ರಮಾನ		ಸೌರಮಾನ					
		ಸಂವತ್ಸರಗಳು	ಶಾಲಿವಾಹನ ಶಕ	ಮಲಯಾಳ ಕೊಲ್ಲಮ್					
1807	1867	ಪ್ರಭವ	1729	1789	982	1042	1216	1276	1222	1284
1808	1868	ವಿಭವ	1730	1790	983	1043	1217	1277	1223	1285
1809	1869	ಶುಕ್ಲ	1731	1791	984	1044	1218	1278	1224	1286
1810	1870	ಪ್ರಮೋದೂತ	1732	1792	985	1045	1219	1279	1225	1287
1811	1871	ಪ್ರಜೋತ್ಪತ್ತಿ	1733	1793	986	1046	1220	1280	1226	1288
1812	1872	ಆಂಗೀರಸ	1734	1794	987	1047	1221	1281	1227	1289
1813	1873	ಶ್ರೀಮುಖ	1735	1795	988	1048	1222	1282	1228-29	1290
1814	1874	ಭಾವ	1736	1796	989	1049	1223	1283	1230	1291
1815	1875	ಯುವ	1737	1797	990	1050	1224	1284	1231	1292
1816	1876	ಧಾತು	1738	1798	991	1051	1225	1285	1232	1293
1817	1877	ಈಶ್ವರ	1739	1799	992	1052	1226	1286	1233	1294-95
1818	1878	ಬಹುಧಾನ್ಯ	1740	1800	993	1053	1227	1287	1234	1296
1819	1879	ಪ್ರಮಾಥಿ	1741	1801	994	1054	1228	1288	1235	1297
1820	1880	ವಿಕ್ರಮ	1742	1802	995	1055	1229	1289	1236	1298
1821	1881	ವಿಷು	1743	1803	996	1056	1230	1290	1237	1299
1822	1882	ಚಿತ್ರಭಾನು	1744	1804	997	1057	1231	1291	1238	1300
1823	1883	ಸ್ವಭಾನು	1745	1805	998	1058	1232	1292	1239	1301
1824	1884	ತಾರಣ	1746	1806	999	1059	1233	1293	1240	1302
1825	1885	ಪಾರ್ಥಿವ	1747	1807	1000	1060	1234	1294	1241	1303
1826	1886	ವ್ಯಯ	1748	1808	1001	1061	1235	1295	1242	1304
1827	1887	ಸರ್ವಜಿತು	1749	1809	1002	1062	1236	1296	1243	1305
1828	1888	ಸರ್ವಧಾರಿ	1750	1810	1003	1063	1237	1297	1244	1306
1829	1889	ವಿರೋಧಿ	1751	1811	1004	1064	1238	1298	1245	1307
1830	1890	ವಿಕೃತಿ	1752	1812	1005	1065	1239	1299	1246	1308
1831	1891	ಖರ	1753	1813	1006	1066	1240	1300	1247	1309
1832	1892	ನಂದನ	1754	1814	1007	1067	1241	1301	1248	1310
1833	1893	ವಿಜಯ	1755	1815	1008	1068	1242	1302	1249	1311
1834	1894	ಜಯ	1756	1816	1009	1069	1243	1303	1250	1312

ಕ್ರಿಸ್ತಶಕ		ಸಂವತ್ಸರಗಳು	ಶಾಲಿವಾಹನ ಶಕ		ಮಲಯಾಳ ಕೊಲ್ಲಮ್		ಫಸಲಿ		ಮಹಮ್ಮದಿ ಹಿಜರಿ	
1835	1895	ಮನ್ಮಥ	1757	1817	1010	1070	1244	1304	1251	1313
1836	1896	ದುರ್ಮುಖಿ	1758	1818	1011	1071	1245	1305	1252	1314
1837	1897	ಹೇವಿಳಂಬಿ	1759	1819	1012	1072	1246	1306	1253	1315
1838	1898	ವಿಳಂಬಿ	1760	1820	1013	1073	1247	1307	1254	1316
1839	1899	ವಿಕಾರಿ	1761	1821	1014	1074	1248	1308	1255	1317
1840	1900	ಶಾರ್ವರಿ	1762	1822	1015	1075	1249	1309	1256	1318
1841	1901	ಪ್ಲವ	1763	1823	1016	1076	1250	1310	1257	1319
1842	1902	ಶುಭಕೃತು	1764	1824	1017	1077	1251	1311	1258	1320
1843	1903	ಶೋಭಕೃತು	1765	1825	1018	1078	1252	1312	1259	1321
1844	1904	ಕ್ರೋಧಿ	1766	1826	1019	1079	1253	1313	1260	1322
1845	1905	ವಿಶ್ವಾವಸು	1767	1827	1020	1080	1254	1314	1261-62	1323
1846	1906	ಪರಾಭವ	1768	1828	1021	1081	1255	1315	1263	1324
1847	1907	ಪ್ಲವಂಗ	1769	1829	1022	1082	1256	1316	1264	1325
1848	1908	ಕೀಲಕ	1770	1830	1023	1083	1257	1317	1265	1326
1849	1909	ಸೌಮ್ಯ	1771	1831	1024	1084	1258	1318	1266	1327-28
1850	1910	ಸಾಧಾರಣ	1772	1832	1025	1085	1259	1319	1267	1329
1851	1911	ವಿರೋಧಿಕೃತು	1773	1833	1026	1086	1260	1320	1268	1330
1852	1912	ಪರಿಧಾವಿ	1774	1834	1027	1087	1261	1321	1269	1331
1853	1913	ಪ್ರಮಾದೀಚ	1775	1835	1028	1088	1262	1322	1270	1332
1854	1914	ಆನಂದ	1776	1836	1029	1089	1263	1323	1271	1333
1855	1915	ರಾಕ್ಷಸ	1777	1837	1030	1090	1264	1324	1272	1334
1856	1916	ನಳ	1778	1838	1031	1091	1265	1325	1273	1335
1857	1917	ಪಿಂಗಳ	1779	1839	1032	1092	1266	1326	1274	1336
1858	1918	ಕಾಳಯುಕ್ತಿ	1780	1840	1033	1093	1267	1327	1275	1337
1859	1919	ಸಿದ್ಧಾರ್ಥಿ	1781	1841	1034	1094	1268	1328	1276	1338
1860	1920	ರೌದ್ರಿ	1782	1842	1035	1095	1269	1329	1277	1339
1861	1921	ದುರ್ಮತಿ	1783	1843	1036	1096	1270	1330	1278	1340
1862	1922	ದುಂದುಭಿ	1784	1844	1037	1097	1271	1331	1279	1341
1863	1923	ರುಧಿರೋದ್ಗಾರಿ	1785	1845	1038	1098	1272	1332	1280	1342
1864	1924	ರಕ್ತಾಕ್ಷಿ	1786	1846	1039	1099	1273	1333	1281	1343
1865	1925	ಕ್ರೋಧನ	1787	1847	1040	1100	1274	1334	1282	1344
1866	1926	ಕ್ಷಯ	1788	1848	1041	1101	1275	1335	1283	1345

ಸೂಚನೆ: 1. ಕ್ರಿಸ್ತಶಕವೆಂಬ ಇಸವಿ ಜನವರಿ 1ನೇ ತಾರೀಕಿಗೆ ಪ್ರಾರಂಭವಾಗುವದು.
2. ಸಂವತ್ಸರವೂ ಶಾಲಿವಾಹನ ಶಕವೂ (ಒಂದೇ ದಿವಸ) ಮಾರ್ಚ್-ಎಪ್ರಿಲಲ್ಲಿ ಪ್ರಾರಂಭವಾಗುವದು
3. ಮಲಯಾಳ ಕೊಲ್ಲಮ್ ಎಂಬ ಕೇರಳ ಶಕವು ಸಪಟಂಬರ ತಿಂಗಳಲ್ಲಿ "
4. ಫಸಲಿ ಜುಲಾಯಿ 1ನೇ ತಾರೀಕಿಗೆ "
5. ಮಹಮ್ಮದಿ ಹಿಜರಿ ಸಾಮಾನ್ಯವಾಗಿ ವರ್ಷ ವರ್ಷ ೧೫ ದಿವಸಕ್ಕೆ ಮುಂದಾಗಿ "

ಭಗವದ್ಗೀತೆ ಅನುಗೀತೆ.

ಕೃಷ್ಣನು ಅರ್ಜುನನಿಗೆ ಯುದ್ಧದ ಸಮಯದಲ್ಲಿ ಗೀತೆಯನ್ನು ಉಪದೇಶಿಸಿದನೆಂಬುವದು ಪ್ರಸಿದ್ಧವಾಗಿದೆ. ಈ ಬೋಧನೆಯಿಂದ ಅರ್ಜುನನ ಆತ್ಮವಿಷಯಕ ಅಜ್ಞಾನವು ನಷ್ಟವಾಗಿ ಯುದ್ಧ ಮಾಡುವದಕ್ಕೆ ಸಿದ್ಧವಾದನು. (ಗೀತೆ. ೧೮. ೭೩.) ಆದರೆ ಈ ವಿಷಯದಲ್ಲಿ ಮುಂದೆ ಸಂಭವಿಸಿದ ಚಮತ್ಕಾರವನ್ನು ವಿಚಾರಿಸ ಬೇಕು. ಪಾಂಡವರಿಗೆ ಕೌರವರ ರಾಜ್ಯವು ಪ್ರಾಪ್ತವಾದನಂತರ ಕೃಷ್ಣನು ದ್ವಾರಕೆಗೆ ಹೋಗುವದಕ್ಕೆ ಹೊರಟನು. ಆಗ ಏನಾಯಿತಂದರೆ—ಅರ್ಜುನನು ಕೃಷ್ಣನ ಉಪದೇಶವನ್ನು ಮರೆತು ಹೋದದ್ದಲ್ಲದೆ ಅವನ ಮನಸ್ಸು ಭ್ರಷ್ಟವಾಯಿತು. ಕೃಷ್ಣನು ತನ್ನ ಬಳಿಯಿಂದ ಹೋಗುತ್ತಾನೆಂದು ಅರ್ಜುನನು ನೋಡಿ ತನಗೆ ಗೀತೆಯನ್ನು ಇನ್ನೊಮ್ಮೆ ಉಪದೇಶ ಮಾಡ ಬೇಕು ಎಂದು ಬೇಡಿಕೊಂಡನು. ಕೃಷ್ಣನು ಅವನನ್ನು ಗದರಿಸಿ ನಾನು ನಿನಗೆ ಗುಹ್ಯಜ್ಞಾನ ಬೋಧಿಸಿದೆ, ನಿನಗೆ ಬುದ್ಧಿ ಇಲ್ಲದ್ದರಿಂದ ನೀನು ಅದನ್ನು ಗ್ರಹಿಸದೆ ಹೋದಿ, ನೀನು ದುರ್ಬುದ್ಧಿಯಾಗಿದ್ದೀ ಎಂದು ತಿಳಿಯುತ್ತೇನೆಂದು ಹೇಳಿದನು. ಬಳಿಕ ಕೃಷ್ಣನು ಅರ್ಜುನನಿಗೆ ಹೇಳಿದ್ದು: ನಾನು ನಿನಗೆ ಪೂರ್ವದಲ್ಲಿ ಬೋಧಿಸಿದ ಜ್ಞಾನವು ಈಗ ತಿರಿಗಿ ಹೇಳುವದಕ್ಕೆ ಅಶಕ್ಯವಾಗಿದೆ. ನಾನು ನಿನಗೆ ಹೇಳಿದ್ದು ಬ್ರಹ್ಮಪದವನ್ನು ಪಡಿಯುವದಕ್ಕೆ ಮಾತ್ರ ಆಗಿದೆ; ಆದರೆ ಮೊದಲಿನಂತೆ ಅದನ್ನು ಈಗ ಸವಿಸ್ತಾರವಾಗಿ ಹೇಳಲಾರೆ. (ಸಹಿ ಧರ್ಮಃ ಸುಪರ್ಯಾಪ್ತೋ ಬ್ರಹ್ಮಣಃ ಪದವೇದನೇ । ನ ಶಕ್ಯಂ ತನ್ಮಯಾ ಭೂಯಸ್ತಥಾ ವಕ್ತುಮಶೇಷತಃ ॥ ಅನುಗೀತೆ. ಅಶ್ವಮೇಧಿಕ ಪರ್ವ. ಅ. ೧೬.) ಇದು ಗುರುವಿಗೆ ಯೋಗ್ಯ ಮನಸ್ಸೋ? ತಾನು ಮಾಡಿದ ಬೋಧನೆ ಅರ್ಜುನನಿಗೆ ನೆನಪದೆಯೋ ಮರತನೋ? ಆದರಿಂದ ಅವನಿಗೆ ಉದ್ಧಾರಣೆಯಾಯಿತೋ ಇಲ್ಲವೋ ಎಂಬುವದನ್ನು ತಾನು ಹೊರಡುವ ಮೊದಲು ವಿಚಾರಿಸಿ ತಿಳಿಯುವದು ಗುರುವಾದ ಕೃಷ್ಣನ ಧರ್ಮವಾಗಿತ್ತು. ಹೀಗೆ ಅವನು ಮಾಡಲಿಲ್ಲಾ.

ಕಡೆಗೆ ಅರ್ಜುನನ ಕೌತುಕವನ್ನು ತೃಪ್ತಿ ಮಾಡುವದಕ್ಕೆ ಕೃಷ್ಣನು ಅವನಿಗೆ ಮೋಕ್ಷಧರ್ಮವನ್ನು ವಿವರಿಸುವದಕ್ಕೆ ಉದ್ಯುಕ್ತನಾದನು. ಆದರೆ ಆ ಮೋಕ್ಷಧರ್ಮವು ಯಾವದು? ಸರ್ವ ಧರ್ಮಗಳನ್ನು ಬಿಟ್ಟು ನನ್ನನ್ನೇ ಶರಣಾಗತನಾಗು, ನಾನು ನಿನ್ನನ್ನು ಸರ್ವ ಪಾಪಗಳಿಂದ ವಿಮೋಚನೆ ಮಾಡುತ್ತೇನೆಂದು ಭಗವದ್ಗೀತೆಯ ತುದಿಯಲ್ಲಿ ಹೇಳಿದ್ದೋ? ಅಲ್ಲಾ. ಮೊದಲಿನ ಉಪದೇಶವನ್ನೇ ಪುನಹಾ ಹೇಳುವದು ಬಿಟ್ಟು ಅನುಗೀತೆ ಎಂಬುವ ಹೊಸ ಶಾಸ್ತ್ರವನ್ನೇ ಉಪದೇಶ ಮಾಡಿದನು. ಅದು ಭಗವದ್ಗೀತೆಗಿಂತ ಇಮ್ಮಡಿ ದೊಡ್ಡದು. ಇಷ್ಟು ಉದ್ದ ಶಾಸ್ತ್ರವನ್ನು ಬೋಧಿಸುವದಕ್ಕೆ ಕೃಷ್ಣನಿಗೆ ಜ್ಞಾನವಿತ್ತು, ಮೊದಲಿನ ಭಗವದ್ಗೀತೆಯನ್ನೇ ಎರಡನೆ ಸಾರಿ ಹೇಳುವದಕ್ಕೆ ಬುದ್ಧಿ ಸಾಲದೆ ಹೋಯಿತೋ? ಭಗವದ್ಗೀತೆಯಲ್ಲಿ ಉಪದೇಶಕನು ಕೃಷ್ಣನು ಎಂತಲೂ ಅರ್ಜುನನೇ ಶಿಷ್ಯನೆಂತಲೂ ರಚನೆ ಮಾಡಿಯದೆ. ಅನುಗೀತೆಯಲ್ಲಿ ಹಾಗಲ್ಲಾ. ಕೃಷ್ಣನೇ ಶಿಷ್ಯನೂ ಕೇಳುವವನೂ ಆಗಿ ಯಾವನೋ ಒಬ್ಬ ಸ್ವರ್ಗದಿಂದ ಬಂದ ಬ್ರಾಹ್ಮಣನು ಉಪದೇಶಕನೂ ಕೃಷ್ಣನ ಗುರುವೂ ಆಗಿದ್ದಾನೆ. ಅರ್ಜುನನಿಗೆ ಕೃಷ್ಣನು ಹೇಳುತ್ತಾನೆ—ಯಾವನೋ ಒಬ್ಬ ಬ್ರಾಹ್ಮಣನು ಬ್ರಹ್ಮಲೋಕದಿಂದ ಬಂದನು, ಅವನನ್ನು ನಾವು

ಪೂಜಿಸಿ ಪ್ರಶ್ನೆ ಮಾಡಿದೆವು. ಆವನು ನಮಗೆ ಹೇಳಿದ್ದನ್ನು ನೀನು ಶ್ರವಣ ಮಾಡು. ಬ್ರಾಹ್ಮಣನು ಹೇಳಿದ್ದು: ಹೇ ಕೃಷ್ಣನೇ ಪ್ರಾಣಿ ಮಾತ್ರದ ಮೇಲೆ ದಯೆ ಮಾಡಿ ಮೋಕ್ಷ ಪಡಕೊಳ್ಳ ಬೇಕೆಂದು ಯಾವ ಧರ್ಮವನ್ನು ಕುರಿತು ನನ್ನನ್ನು ಕೇಳಿದಿಯೋ ಆ ಜ್ಞಾನವನ್ನು ನಿನಗೆ ಹೇಳುತ್ತೇನೆ". (ಮೋಕ್ಷಧರ್ಮ ಸಮಾಶ್ರಿತ್ಯ ಕೃಷ್ಣ ಯನ್ಮಾಮೃಚ್ಛಥಾ: | ಭೂತಾನಾ ಮನುಕಂಪಾರ್ಥಂ ಯನ್ಮೋಹಚ್ಛೇದನಂ ವಿಭೋ ||) ಇದರಿಂದ ಕೃಷ್ಣನಿಗೆ ಮೋಕ್ಷ ಧರ್ಮ ತಿಳಿದಿರಲಿಲ್ಲಾ, ಅದನ್ನು ಬ್ರಾಹ್ಮಣನಿಂದ ಕಲಿತನೆಂಬುವದು ಸಿದ್ಧಾಂತವಾಗುತ್ತದೆ. ಈ ಅನುಗೀತೆಯಲ್ಲಿ ಅನೇಕ ಸಂವಾದಗಳು, ಕಥೆಗಳು ಅವೆ. ಒಟ್ಟಾರೆ ಅನುಗೀತೆಯನ್ನು ಭಗವದ್ಗೀತೆಯನ್ನೂ ವಿಚಾರಿಸಿದರೆ ಉಭಯ ಗ್ರಂಥಗಳು ಬೇರೆ ಬೇರೆ ಕಾಲಗಳಲ್ಲಿ ತರ್ಕವಂತರಾದ ಬ್ರಾಹ್ಮಣರು ರಚಿಸಿದರೆಂಬುವದು ಸ್ಪಷ್ಟವಾಗುತ್ತದೆ. ಭಗವದ್ಗೀತೆ ರಚಿಸಿದವನು ಕೃಷ್ಣನ ಮಹತ್ವವನ್ನು ಬೆಳಿಸ ಬೇಕೆಂದು ಭಗವಂತನು, ಪರಮೇಶ್ವರನು, ಜಗನ್ನಿವಾಸ ಮೊದಲಾದ ನಾಮಧೇಯಗಳನ್ನು ಅರ್ಜುನನಿಂದ ಹೇಳಿಸಿದನು. ಅನುಗೀತೆಯ ಕಾಲದಲ್ಲಿ ಇದೆಲ್ಲಾ ಬೇರೆಯಾಯಿತು. ಅರ್ಜುನನು ಕೃಷ್ಣನೊಂದಿಗೆ ಮಾತಾಡುವಾಗ ದೇವಕಿಪುತ್ರನು, ಮಹಾಬಾಹು ಮೊದಲಾದ ಸಾಧಾರಣ ನಾಮಗಳನ್ನು ಹೇಳುತ್ತಾನೆ. ಮತ್ತು ಅನುಗೀತೆಯಲ್ಲಿ ಕೃಷ್ಣ ಉವಾಚ, ವಾಸುದೇವ ಉವಾಚ ಎಂತ ಎರಡಾವರ್ತಿ ಮಾತ್ರ ಬರುತ್ತದೆ. ಮತ್ತೆಲ್ಲೆಲ್ಲಿಯೂ ಬ್ರಾಹ್ಮಣ ಉವಾಚ, ಬ್ರಹ್ಮೋವಾಚ ಎಂಬುವದೇ ತುಂಬಿಯದೆ. ಭಗವದ್ಗೀತೆಯಲ್ಲಿ ಶ್ರೀಭಗವಾನುವಾಚ ಎಂಬುವದೇ ಪದೇ ಪದೇ ಕಾಣುವದು.

ಅನುಗೀತೆಯು ಭಾರತದೊಳಗೆ ಶೇರಿಸಲ್ಪಟ್ಟ ಕಾಲದಲ್ಲಿ ಜನರಲ್ಲಿ ಕೃಷ್ಣನ ಮಾಹಾತ್ಮ್ಯವು ಕಡಿಮೆಯಾಗಿತ್ತೆಂದು ನೆನಸ ಬೇಕು. ಇದು ಆಶ್ಚರ್ಯವಲ್ಲಾ. ಇಂದ್ರಾದಿ ವೈದಿಕ ದೇವತೆಗಳೂ, ವೇದಾಂತಿಗಳ ಬ್ರಹ್ಮನೂ, ಪುರಾಣಗಳ ಬ್ರಹ್ಮ ವಿಷ್ಣು ಮೊದಲಾದ ತ್ರಿಮೂರ್ತಿಗಳೂ ಸೂತ್ರದ ಗೊಂಬೆಗಳಂತಿದ್ದು ಸೂತ್ರಧಾರಿಗಳಾದ ಬ್ರಾಹ್ಮಣರು ಕುಣಿಸುವಂತೆ ಕುಣಿಯುತ್ತಾರೆ. ಗೀತೆಯಲ್ಲಿ ಕೃಷ್ಣನು ಅರ್ಜುನನಿಗೆ ಮೋಕ್ಷ ಪ್ರಾಪ್ತಿಗೋಸ್ಕರ ಕರ್ಮ ತ್ಯಾಗ ಮಾಡ ಬೇಕೆಂದು ಹೇಳಿದನು. ಆದರೆ ಧರ್ಮರಾಯನಿಗೆ ಭೀಷ್ಮಾಚಾರ್ಯನು ಕರ್ಮಗಳನ್ನೇ ಮಾಡ ಬೇಕೆಂದು ಬೋಧಿಸಿದನು. "ಕರ್ಮಗಳನ್ನು ಮಾಡಿದರೆ ನೀನು ನಿಷ್ಪಾಪಿಯಾಗುವಿ". ಯಜ್ಞರೂಪಕ್ರಿಯೆಗಳನ್ನೂ ದಾನವನ್ನೂ ಆವಶ್ಯವಾಗಿ ಮಾಡ ಬೇಕು. ಯಾಕಂದರೆ ಈ ಕೃತ್ಯಗಳು ಇಹದಲ್ಲಿಯೂ ಪಾವನೆಕರವಾಗಿವೆ. (ಅನುಶಾಸನ ಪರ್ವ. ಅಧ್ಯಾ. ೫೭.) ಕೃಷ್ಣನಿಗೆ ಪಾಂಡವರೆಲ್ಲರೂ ಮುಕ್ತಿ ಪಡಿಯ ಬೇಕೆಂದು ಚಿಂತೆ ಇದ್ದದ್ದಾದರೆ ಎಲ್ಲವರನ್ನೂ ಹತ್ತರ ಕರಿಸಿ ಭಗವದ್ಗೀತೆಯನ್ನೋ ಅನುಗೀತೆಯನ್ನೋ ಯಾಕೆ ಉಪದೇಶಿಸಲಿಲ್ಲಾ? ಧರ್ಮರಾಯನು ಭೀಷ್ಮನ ಹತ್ತರವೂ ಬೃಹಸ್ಪತಿಯ ಹತ್ತರವೂ ಪ್ರಶ್ನೆ ಮಾಡುತ್ತಾ ಕೂತಿದ್ದಾನೆ. "ಹೇ ಬೃಹಸ್ಪತಿಯೇ, ಅಹಿಂಸೆ, ವೈದಿಕ ಕರ್ಮಗಳು, ಧ್ಯಾನ, ಇಂದ್ರಿಯದಮನ, ತಪಸ್ಸು, ಗುರುಶುಶ್ರೂಷೆ ಇವುಗಳಲ್ಲಿ ಶ್ರೇಯಸ್ಕರವಾದದ್ದು ಯಾವದು? (ಅನು. ಪ. ಅ. ೧೧೩.) ಹೇ ಭೀಷ್ಮನೇ, ಒಳ್ಳೇ ಸ್ವಭಾವ, ಆಚಾರ, ಜ್ಞಾನ, ನಿಷ್ಠೆಗಳು ಇವುಗಳಲ್ಲಿ ಯಾವದು ಮಾಡಿದರೆ ಮನುಷ್ಯನು ಬ್ರಹ್ಮ ಪದವನ್ನು ಹೊಂದುವನು? ಇದನ್ನು ಹೇಳು". (ಮೋಕ್ಷಧರ್ಮ. ಅಧ್ಯಾ. ೧೦೫.) ಈ ಪ್ರಕಾರ ಅವನು ಮಾಡಿದ ನೂರಾರು ಪ್ರಶ್ನೆಗಳವೆ. ಇವುಗಳಿಗೆಲ್ಲಾ "ಮಾಮೇಕಂ ಶರಣಂ ವ್ರಜ" ನನ್ನ ಒಬ್ಬನನ್ನೇ ಶರಣ ಹೋಗು ಎಂಬುವ ವಾಕ್ಯದಿಂದ ಯಾಕೆ ಸಮಾಧಾನ ಮಾಡಲಿಲ್ಲಾ? ಅಥವಾ ಭೀಷ್ಮನು ಮೊದಲಾ

ದವರು ಕೃಷ್ಣ ಪರಮಾತ್ಮನನ್ನು ಶರಣು ಹೋಗು ಎಂದು ಅವನಿಗೆ ಯಾಕೆ ಬೋಧಿಸಲಿಲ್ಲಾ? ಅನೇಕ ಯಜ್ಞಯಾಗ ಮೊದಲಾದ ಕರ್ಮಗಳನ್ನೂ ದಾನಗಳನ್ನೂ ಮಾಡು ಎಂದು ಹೇಳಿದ್ದು ಯಾಕೆ?

ಇಲ್ಲಿ ಎರಡು ಪ್ರಶ್ನೆಗಳನ್ನು ಮಾಡುತ್ತೇವೆ: (೧) ಬ್ರಾಹ್ಮಣರೂ ಸರ್ವೇ ಬ್ರಹ್ಮಜ್ಞಾನಿಗಳೂ ಆನುಗೀತೆಗಿಂತಲೂ ಭಗವದ್ಗೀತೆಯನ್ನು ಸನ್ಮಾನ ಪಡಿಸುವದೂ ಪ್ರಮಾಣಾರ್ಥವಾಗಿ ಭಗವದ್ಗೀತೆಯ ವಾಕ್ಯಗಳನ್ನು ಎತ್ತಿ ಹೇಳುವದೂ ಮಹಾ ಭಕ್ತಿಯಿಂದ ಅದನ್ನೇ ಓದುವದೂ ಯಾತಕ್ಕೆ? ಆನುಗೀತೆಯೂ ಭಗವದ್ವಾಕ್ಯವಾಗಿದ್ದರೆ ಅದನ್ನು ಉಪೇಕ್ಷೆ ಮಾಡುವದು ಯಾಕೆ? (೨) ಅರ್ಜುನನು ಭಗವದ್ಗೀತೆಯನ್ನು ಮರೆತವನಾದರೆ ಮತ್ತು ಕೃಷ್ಣನು ಅದನ್ನು ಅವನಿಗೆ ಪುನಹಾ ಹೇಳಲಾರದವನಾದರೆ ಆ ಭಗವದ್ಗೀತೆಯು ಭಾರತದೊಳಗೆ ಶೇರಿದ್ದು ಎಲ್ಲಿಂದ?

ನ್ಯಾಯವೈಶೇಷಿಕ ಮತಗಳಲ್ಲಿ ಪ್ರತಿಪಾದಿಸಿದ

ಮುಕ್ತಿದಶೆಯ ಪರೀಕ್ಷೆ

ನ್ಯಾಯವೈಶೇಷಿಕ ಮತಗಳಿಗೆ ದೇವರ ವಿಷಯವಾಗಿ ಸರಿಯಾದ ಜ್ಞಾನವು ಇಲ್ಲದಿರುವದರಿಂದ ಅವರು ಒಂದು ದರಿದ್ರ ದಶೆಯನ್ನು ನಿಃಶ್ರೇಯಸವೆಂದು ಹೇಳುತ್ತಾರೆ. ಜ್ಞಾನ ಇಚ್ಛೆ ಮೊದಲಾದ ಎಲ್ಲಾ ಚೇತನ ಧರ್ಮಗಳಿಂದ ರಹಿತನಾಗಿ ಪಾಷಾಣಕ್ಕೆ ಸಮಾನವಾಗುವದು ಇದೇ ಪರಮ ಪುರುಷಾರ್ಥವೋ? ಇಂಥಾ ದಶೆಗೂ ನಾಶನಕ್ಕೂ ಭೇದವೇನು? ಪಂಡಿತರಿಗೆ ಈ ವಿಷಯದಲ್ಲಿ ಎರಡು ಶಂಕೆಗಳು ಹುಟ್ಟುತ್ತವೆ: ನಿಸ್ತಾರದ ದಶೆಯಲ್ಲಿ ಜ್ಞಾನ ಇಚ್ಛಾದಿಗಳು ಉಂಟಿಂದು ಹೇಳಿದರೆ ಮತ್ತೂ ಲಂಡ ಇಚ್ಛೆ ಹುಟ್ಟಿ ಪಾಪದಲ್ಲಿ ಬೀಳುವ ಭಯವಿದೆ; ಇದು ಒಂದು. ಇನ್ನೊಂದು—ಒಬ್ಬನು ಇನ್ನೊಬ್ಬನನ್ನು ನೋಡಿದರೆ ಈರ್ಷ್ಯೆ ಉಂಟಾದೀತು. ಇದಕ್ಕೆ ನನ್ನ ಉತ್ತರ: ದೇವರ ಸಾಮರ್ಥ್ಯವನ್ನೂ ಅತನ ಅನುಗ್ರಹದ ಮಹತ್ವವನ್ನೂ ಅರಿಯದವರಿಗೆ ಇಂಥಾ ಶಂಕೆಗಳು ಬರುವವು. ನನ್ನ ಕೈಯಲ್ಲಿ ದೇವರ ಸತ್ಯಶಾಸ್ತ್ರವದೆ. ಅದರಲ್ಲಿ ಹೇಳಿರುವದೇನಂದರೆ: ದೇವರು ಏರ್ಪಡಿಸಿದ ನಿಸ್ತಾರದ ಮಾರ್ಗವನ್ನು ಸ್ವೀಕರಿಸಿ ದೇವರ ಅನುಗ್ರಹವನ್ನು ಪಡೆದವರು ಮರಣಾಂತರ ದಿವ್ಯಲೋಕವನ್ನು ಐದುವರು. ದೇವರು ಅವರ ಸ್ವಭಾವವನ್ನು ಶುದ್ಧ ಮಾಡಿದ ಕಾರಣ ಅವರಿಗೆ ಎಂದೂ ದುಷ್ಟ ಇಚ್ಛೆ ಈರ್ಷ್ಯೆವೈರ ಅಹಂಕಾರ ಮೊದಲಾದ ದುಷ್ಟವಿಕಾರಗಳ ಭಯವು ಇಲ್ಲಾ. ಅವರು ದಿವ್ಯಲೋಕದಲ್ಲಿ ದಿವ್ಯವಾದ ವಿಕಾರರಹಿತ ಶರೀರವನ್ನು ಹೊಂದಿ ಜ್ಞಾನ ಇಚ್ಛೆ ಮೊದಲಾದ ಎಲ್ಲಾ ಚೇತನದ ಧರ್ಮಗಳನ್ನು ಕಾಪಾಡಿಕೊಂಡು ಅನಂತ ಕಾಲವೂ ದೇವರ ಸಾಕ್ಷಾತ್ಕಾರದಲ್ಲಿ ಅತನ ಸಮಾಗಮದಲ್ಲಿ ಭಕ್ತಿಯಲ್ಲಿ ನಿರುಪಮ ಅನಿರ್ವಾಚ್ಯ ದಿವ್ಯ ಆನಂದವನ್ನು ಪಡುತ್ತಿರುವರು. ಅವರ ಸ್ವಭಾವವು ನಿರ್ಮಲವಾಗಿರುವದರಿಂದ ಮನಸ್ಸಿನ ಪ್ರಸನ್ನತೆಯಲ್ಲಿ ಶಾಂತಿಯಲ್ಲಿ ಅಧಿಕಾಧಿಕ ಅಖಂಡಿತ ಭಾಗ್ಯವನ್ನು ಹೊಂದುತ್ತಿರುವರು. ಇಂಥಾ ದಶೆಗೆ ಪರಮಪುರು

ಷಾರ್ಥವೆಂದೆನ್ನುವದು ಯೋಗ್ಯವೋ ಜಡತ್ವದ ದಶೆಗೋ ಹೇಳಿರಿ! ಜಡತ್ವವು ಪರಮ ಪುರು ಷಾರ್ಥವಲ್ಲಾ, ಅದು ಮಹಾ ಅಧಃಪಾತವಾಗಿದೆ. ಜೀವಗಳು ಅನಾದಿಕಾಲದಿಂದ ಇವೆ, ಅವು ಅಸಂಖ್ಯಾತ ಜನನಗಳನ್ನೂ ಮರಣಗಳನ್ನೂ ಪಟ್ಟಿದ್ದಾವೆ, ಅವಧಿ ಇಲ್ಲದಂಥಾ ಅನಾದಿ ಕಾಲದಿಂದ ಈ ಸಂಸಾರದ ಘೋರದುಃಖಿಗಳನ್ನು ಅನುಭೋಗಿಸುತ್ತಾ ಬಂದಿದ್ದಾವೆ ಎಂದು ಅನ್ನುತ್ತೀರಿ. ಇರಲಿ, ಅವುಗಳಲ್ಲಿ ಒಂದಾನೊಂದು ಜೀವವು ಕಣ್ಣು ತೆರೆದು ನಾನು ಈ ದುರ್ದ ಶೆಯಿಂದ ಬಿಡುಗಡೆಯಾದೇನು ಎಂದು ಅಪೇಕ್ಷಿಸಿ ಅನೇಕ ಜನ್ಮಗಳಲ್ಲಿ ಜಪ ತಪ ಧ್ಯಾನ ಧಾರಣೆ ಮಾಡಿತಾದರೆ ಅದು ಕಬ್ಬಕಡೆಯಲ್ಲಿ ಯಾವಫಲ ಹೊಂದಿತು, ಪಾಷಾಣಕ್ಕೆ ಸಮ ವಾದ ಜಡ ಪದಾರ್ಥವಾಯಿತು. ಈ ದಶೆ ನಾಶನವಾಗಿದೆ. ಹಾಗಾದರೆ ಜೀವಗಳಂತೆ ದೌರ್ಭಾಗ್ಯವುಳ್ಳದ್ದು ಯಾವದೂ ಇಲ್ಲಾ. ಯಾವ ವರೆಗೆ ಬದುಕಿ ಇತ್ತೋ ಆ ವರೆಗೆ ದುರ್ದಶೆಗೆ ಅಧೀನವಾಗಿತ್ತು. ಇದರಿಂದ ಬಿಡುಗಡೆ ಯಾಗಬೇಕೆಂದು ಅದು ಆಶೆ ಮಾಡು ವದು ಅಂದರೇನು—ಕೇವಲ ನಷ್ಟವಾಗುವದು. ನಾವು ನಾಸ್ತಿಕರಾಗಿ ದೇವರನ್ನು ನಂಬದೆ ಇದ್ದು ನಮ್ಮ ಪ್ರಯತ್ನಗಳಿಂದಲೇ ಬಿಡುಗಡೆಯನ್ನು ದುಡಿಯ ಬೇಕಾಗಿದ್ದ ಪಕ್ಷದಲ್ಲಿ ಇಂಥಾ ನಿಃಶ್ರೇಯಸ್ಸನ್ನು ಆಶೆ ಮಾಡುವದು ನಮಗೆ ಯೋಗ್ಯವಾಗಿರುವದು. ಆದರೆ ನಾವು ಅಚಿಂ ತ್ಯಶಕ್ತಿವಂತನಾದ ಸರ್ವ ಒಳ್ಳೇತನದಿಂದ ಪರಿಪೂರ್ಣನಾದ ಅತಿ ಉದಾರನಾದ ಪರಮ ದಯಾಳುವಾದ ಸರ್ವಭಾಗ್ಯದಾತನಾದ ದೇವರನ್ನು ನಂಬುವವರೂ, ಆತನಿಂದಲೇ ಉದ್ಧಾರ ವನ್ನು ಪಡಿಯ ಬೇಕೆಂದು ಆಶೆ ಮಾಡುವವರೂ ಆಗಿ ಇಂಥಾ ದರಿದ್ರದಶೆಗಿಂತ ಉತ್ತಮ ವಾದ ನಿಃಶ್ರೇಯಸ್ಸನ್ನು ಅಪೇಕ್ಷಿಸುವದು ಹೆಚ್ಚು ಸಯುಕ್ತಿಕವಾಗಿ ತೋರುತ್ತದೆ.

ದೇವರ ಸತ್ಯಶಾಸ್ತ್ರದಲ್ಲಿ ಪರಮ ಪುರುಷಾರ್ಥವನ್ನು ಪಡಕೊಳ್ಳುವದಕ್ಕೆ ಕಾರಣವು ದೇವರ ಅನುಗ್ರಹವೇ ಎಂದು ಹೇಳಿಯದೆ. ಮನುಷ್ಯರು ಪಾಪಿಗಳಾಗಿ ತಮ್ಮ ಪಾಪಗಳ ದೆಶೆಯಿಂದ ನರಕದಂಡನೆಗೆ ಯೋಗ್ಯರಾದಾಗ್ಯೂ 'ದೇವರು ಏರ್ಪಡಿಸಿದ ಉಪಾಯವನ್ನು ಅವರು ಸ್ವೀಕರಿಸಿದರೆ, ದೇವರ ಅನುಗ್ರಹದಿಂದ ಅವರು ಪಾಪಗಳ ಕ್ಷಮೆ ಪಡೆದು, ದೇವ ಅಜ್ಞೆಗಳನ್ನು ಕೈಕೊಳ್ಳುವದಕ್ಕೆ ಬಲ ಹೊಂದಿ ಮರಣಾನಂತರ ಅನಂತಾನಂದವನ್ನು ಅನು ಭವಿಸುವರು. ಈ ಅನುಗ್ರಹಪ್ರಾಪ್ತಿಗಾಗಿ ಆತನು ಅದ್ಭುತವಾದ ಉಪಾಯವನ್ನು ಮಾಡಿ ದ್ದರಲ್ಲಿ ಆತನ ಅಪಾರವಾದ ಅನಿರ್ವಚನೀಯವಾದ ದಯೆಯೂ ಪ್ರಕಟವಾಗುತ್ತದೆ, ಆತನ ನೀತಿ ಪವಿತ್ರತ್ವಗಳಿಗೆ ಕಳಂಕವೂ ತಾಗುವದಿಲ್ಲಾ. ನಮ್ಮನ್ನು ಕೃತಾರ್ಥರನ್ನು ಮಾಡುವ ಬಗ್ಯೆ ತನ್ನ ಅಪಾರ ದಯೆಯ ಭಂಡಾರವನ್ನೇ ತೆರೆದ ಮೇಲೆ ನಮಗೆ ಕೇವಲ ಪಾಷಾಣದ ದಶೆಯನ್ನೇ ಕೊಟ್ಟು ಕೃತಾರ್ಥರನ್ನು ಮಾಡುವನೋ? ಇಲ್ಲವೇ ಇಲ್ಲಾ. ..ನೇ ಪರಮ ಪುರುಷಾರ್ಥವನ್ನು ಕೊಡುವವನಾದ ಮೇಲೆ ಅನಂತಾನಂದ ಪ್ರಾಪ್ತಿಯೇ ಪರಮ ಪುರು ಷಾರ್ಥವೆಂದು ಅನ್ನುವದು ಯೋಗ್ಯವಾಗಿದೆ. ಆದರೆ ಈ ಸಂಗತಿಯು ಕೇವಲ ದೇವರು ಪ್ರಕಟಿತ ಮಾಡಿದ ಶಾಸ್ತ್ರದ ಪ್ರಕಾಶದಿಂದಲೇ ತಿಳಿದು ಬರುವಂಥಾದ್ದಾಗಿದೆ. ಮನುಷ್ಯನು ತನ್ನ ಬುದ್ಧಿಯಿಂದ ಅದನ್ನು ತರ್ಕಮಾಡುವದಕ್ಕೆ ಹೋದರೆ ದರ್ಶನ ಕರ್ತರು ಏರ್ಪಡಿಸಿದಂ ತೆ ಅಜೇತನವಾಗುವದೇ ನಿಃಶ್ರೇಯಸವಾಗಿದೆ ಎಂಬುವ ಪ್ರಕಾರದ ಸಿದ್ಧಾಂತಗಳನ್ನು ಸ್ಥಾಪಿ ಸುವನು. ತಮ್ಮ ಉಪಾಯದಿಂದಲೂ ಪ್ರಯತ್ನದಿಂದಲೂ ತಮಗೆ ಮುಕ್ತಿ ದೊರಕಿಸಿಕೊಳ್ಳ ಬೇಕು ಎಂದು ಅವರು ನೆನಸುತ್ತಾರೆ. ಆದರೆ ಆ ಬಡವರು ಅನಂತಾನಂದವನ್ನು ಎಲ್ಲಿಂದ ಬೇಕು ಎಂದು ಅವರು ನೆನಸುತ್ತಾರೆ. ಆದರೆ ಆ ಬಡವರು ಅನಂತಾನಂದವನ್ನು ಎಲ್ಲಿಂದ ತಂದಾರು? ಆದದರಿಂದ ತಮ್ಮನ್ನು ಅಜೇತನವಾಗಿ ಮಾಡಿ ಸಂಸಾರದ ತಾಪದಿಂದ ಬಿಡುಗಡೆ

ಳಲ ನಿನ್ನ ದೇವರಾದ ಯೆಹೋವನನ್ನು ಮರೆತು, ನನ್ನ ಬಲವೇ ನನಗೆ ಈ ಆಸ್ತಿಯನ್ನು ಮಾಡಿಕೊಂಡರೆ ಎಲ್ಲಾ ಶಿಕ್ಕಿದ ಹಾಗಾಯಿತು, ಇಷ್ಟಾದರೂ ತಾವು ಮಾಡ ಬೇಕು ಅನ್ನು ತ್ತಾರೆ. ಆದರೆ ಇಷ್ಟಾದರೂ ಅವರು ಮಾಡಲಾರರು. ಜೀವನನ್ನು ದೇವರು ಚೇತನವಾಗಿ ಮಾಡಿದ್ದಾನೆ. ಅದನ್ನು ಅಚೇತನವಾಗಿ ಮಾಡುವವನು ಯಾರು? ದೇವರು ಜೀವನಲ್ಲಿಟ್ಟ ಸ್ವಭಾವವನ್ನು "ನಾನು ಮನಸ್ಸಲ್ಲಾ, ನಾನು ಶರೀರವಲ್ಲಾ", ಎಂಬುವ ಭಾವನೆ ಮಾಡುತ್ತಾ ದೂರಮಾಡ ಕೂಡದು. ನನ್ನ ನಿಮ್ಮ ಜೀವವು ಅನಂತಕಾಲವೂ ಚೇತನವಾಗಿಯೇ ಇರು ವದು.

ಆದರೆ ಎರಡು ಸಂಗತಿಗಳು ನಮ್ಮ ಕೈಯಲ್ಲಿ ಆವೆ. ದೇವರು ತನ್ನ ಸತ್ಯಶಾಸ್ತ್ರದಲ್ಲಿ ತೋರಿಸಿದ ಉದ್ಧಾರಮಾರ್ಗವನ್ನು ನಾವು ಅಂಗೀಕಾರ ಮಾಡಿದರೆ ನಮ್ಮ ಈ ಚೇತನತ್ವ ವನ್ನು ಅನಂತಾನಂದವನ್ನು ಅನುಭವಿಸುವದಕ್ಕೆ ಕರಣವಾಗಿ ಮಾಡುವೆವು. ಅದನ್ನು ಅಂಗೀ ಕಾರ ಮಾಡದೆ ಹೋದರೆ ಅದೇ ಚೇತನತ್ವವನ್ನು ಸದಾಕಾಲವೂ ಅಖಂಡ ಕ್ಲೇಶವ್ಯಾಕು ಲತ್ವವನ್ನೂ ಘೋರತಾಪವನ್ನೂ ಅನುಭವಿಸುವದಕ್ಕೆ ಕರಣವಾಗಿ ಮಾಡುವೆವು. ಹೀಗಿರು ವದರಿಂದ ನಿಮ್ಮ ಕಲ್ಯಾಣವನ್ನು ಇಚ್ಛೈಸುತ್ತೀರಾದರೆ ದೇವರ ಸತ್ಯಶಾಸ್ತ್ರವನ್ನು ಅಂಗೀಕಾರ ಮಾಡಿರಿ.

ನಾನು ಈ ಪ್ರಕರಣದಲ್ಲಿ ದರ್ಶನಗಳ ದೋಷಗಳನ್ನು ತೋರಿಸಿದ್ದು ದರ್ಶನ ಕರ್ತರು ತಪ್ಪುಮಾಡುವವರೆಂದು ತೀರಿಸಿ ಅವರ ಮೇಲೆ ನಗ ಬೇಕೆಂಬುವದರಿಂದಲ್ಲಾ. ಅವರಾಗಲಿ ನಾನಾಗಲಿ ಇನ್ನೊಬ್ಬರಾಗಲಿ ಕೇವಲ ಸ್ವಂತ ಬುದ್ಧಿಯಿಂದ ಪಾರಮಾರ್ಥಿಕ ಸಂಗತಿಗಳನ್ನು ವಿಚಾರ ಮಾಡಲಿಕ್ಕೆ ಹೋದರೆ ಸರ್ವದಾ ಭ್ರಮೆಯಲ್ಲಿ ಬೀಳುವೆವು, ಈ ಸಂಗತಿಗಳ ವಾಸ್ತ ವ ಜ್ಞಾನವನ್ನು ಪಡೆಯುವದು ಮನುಷ್ಯ ಬುದ್ಧಿಗೆ ಅಶಕ್ಯವಾಗಿದೆ, ಎಂದು ತೋರಿಸುವದೇ ನನ್ನ ಮುಖ್ಯ ತಾತ್ಪರ್ಯವು. ಕ್ರಿಸ್ತೀಯ ಶಾಸ್ತ್ರದಲ್ಲಿ ಈ ಸಂಗತಿಗಳು ಯಥಾರ್ಥವಾಗಿ ಯೋಗ್ಯವಾಗಿ ವಿವರಿತವಾಗಿವೆ ಎಂದು ನೀವು ನೋಡುವಿರಾದರೆ ಅದೇ ಸತ್ಯವಾಗಿ ದೇವರು ಪ್ರಕಟ ಮಾಡಿದ ಮತವೆಂಬುವದು ನಿಮಗೆ ಮಂದಟ್ಟಾಗುವದು. ಆದದರಿಂದ ನೀವು ಸರಳ ಮನಸ್ಸಿನಿಂದ ಕ್ರಿಸ್ತೀಯ ಶಾಸ್ತ್ರವನ್ನು ವಿಚಾರಮಾಡಿರಿ. ಇದಕ್ಕೆ ಸ್ಥಿರತ್ವವು, ನಮ್ರ ತ್ವವು, ದೀರ್ಘವಿಚಾರವು ಅವಶ್ಯವಾಗಿದೆ. ಯಾಕಂದರೆ ಮನುಷ್ಯನು ಯಾವ ಸಂಗತಿಗ ಳನ್ನು ಬಹುಕಾಲದಿಂದ ನಂಬುತ್ತಾ ಬಂದನೋ ಅವುಗಳ ದೋಷವೂ ಅವುಗಳಿಗೆ ವಿಪರೀತ ವಾದ ಸಂಗತಿಗಳ ಉತ್ತಮತ್ವವೂ ಶೀಘ್ರವಾಗಿ ಮನಸ್ಸಿಗೆ ನಾಟದು. ಆದರೆ ನಮ್ರಭಾವ ದಿಂದ ದೇವರಿಗೆ ಪ್ರಾರ್ಥನೆ ಮಾಡುತ್ತಾ ಯೋಗ್ಯವಾಗಿ ವಿಚಾರ ಮಾಡಿದ್ದಾದರೆ ಸತ್ಯವನ್ನು ಗ್ರಹಿಸುವಿರಿ.

ಕಾಲಮಾನನಿರ್ಣಯ.

ದಿನವನ್ನು ವಿಭಾಗಿಸುವ ರೀತಿ ಹಿಂದು ಜನರಲ್ಲಿ ಬೇರೆ, ವಿಲಾಯತಿಯವರಲ್ಲಿ ಬೇರೆ; ಹ್ಯಾಗಂತರೆ:

ಹಿಂದು ರೀತಿ:	ವಿಲಾಯತಿ ರೀತಿ:
೧ ದಿನಕ್ಕೆ ೬೦ ಘಳಿಗೆ	೧ ದಿನಕ್ಕೆ ೨೪ ತಾಸು (ಹೋರ)
೧ ಘಳಿಗೆಗೆ ೬೦ ವಿಘಳಿಗೆ	೧ ತಾಸಿಗೆ ೬೦ ನಿಮಿಷ (ನಿಮಿಷ)
೧ ವಿಘಳಿಗೆಗೆ ೬ ಪ್ರಾಣ	೧ ನಿಮಿಷಕ್ಕೆ ೬೦ ಸೆಕೆಂಡ (ಕ್ಷಣ)

ರ ಸೀತೀವೆ.

(೧೮೮೯ನೇ ಇಸವಿ 1ನೇ ಆಕ್ಟಿನಲ್ಲಿರುವ ಪಟ್ಟಿಯಿಂದ ಎತ್ತಿ ತೆಗದು ಸಂಕ್ಷೇಪಿಸಿದ್ದು.)

ದಸ್ತಾವೇಜಿನ ವಿವರಣೆ:	ಸ್ಟ್ಯಾಂಪ್ ಪಾಸಲು:

೬	೫	೫೭	೫	೨೧	೦	೪೫	೮	೧೧	ಮಧ್ಯಾನ್ನ ೧	೪೫
೭	೫	೫೭	೫	೨೦	೧	೧೭	೯	೫೬	೧	೫೨
೮	೫	೫೮	೫	೨೦	೨	೪೯	೧೦	೪೨	೧	೫೯
೯	೫	೫೮	೫	೨೦	೩	೨೨	೧೧	೨೭	೨	೬೫
೧೦	೫	೫೮	೫	೨೦	೪	೫೩	೧೨	೧೩	೩	೩೨
೧೧	೫	೫೯	೫	೨೦	೫	೨೩	೧೩	೫೮	೩	೫೮
೧೨	೫	೫೯	೫	೧೯	೫	೫೪	೧೪	೪೩	೪	೨೪
೧೩	೬	೦	೫	೧೯	೬	೨೦	೧೫	೨೪	೪	೫೦
೧೪	೬	೦	೫	೧೯	೭	೪೫	ಮಧ್ಯಾನ್ನ ೧	೦	೫	೧೬
೧೫	೬	೦	೫	೧೯	೮	೧೯	೧	೩೫	೫	೪೨
೧೬	೬	೧	೫	೧೯	೯	೫೩	೨	೩೮	೬	೭
೧೭	೬	೧	೫	೧೯	೧೦	೨೭	೩	೪೧	೭	೩೩
೧೮	೬	೧	೫	೧೯	೧೧	೦	೪	೪೫	೮	೦
೧೯	೬	೨	೫	೧೯	ಮಧ್ಯಾನ್ನ ೧೨	೩೩	೫	೫೦	೮	೨೭
೨೦	೬	೨	೫	೧೯	೧	೬	೬	೫೬	೯	೫೫
೨೧	೬	೨	೫	೧೯	೧	೪೦	೭	೫೯	೧೦	೨೩
೨೨	೬	೩	೫	೧೯	೨	೧೩	೯	೨	೧೦	೫೦
೨೩	೬	೩	೫	೧೯	೨	೪೭	೧೦	೫	೧೧	೧೭
೨೪	೬	೩	೫	೧೯	೩	೨೨	೧೦	೫೮	೧೧	೪೩
೨೫	೬	೪	೫	೧೯	೩	೫೭	೧೧	೪೯	೧೨	೧೦
೨೬	೬	೪	೫	೧೯	೪	೩೨	೧೨	೩೮	ಪ್ರಾತಃ. ೧	೩೬
೨೭	೬	೪	೫	೧೯	೫	೭	೧೩	೨೭	೨	೩
೨೮	೬	೫	೫	೧೯	೫	೪೨	೧೪	೧೬	೨	೩೦
೨೯	೬	೫	೫	೨೦	೬	೧೮	೧೪	೫೭	೨	೫೭
೩೦	೬	೫	೫	೨೦	೬	೫೬	೧೫	೩೭	೩	೨೫

ಕುಜಾದಿ ಪಂಚಗ್ರಹರ ಉದಯೋಚ್ಚಾಸ್ತಮಯಗಳನ್ನು ತೋರಿಸುವ ಪಟ್ಟಿ

ಗ್ರಹ	ತಾರೀಕು	ಉದಯ	ಉಚ್ಚ	ಅಸ್ತಮಯ
ಕುಜ		ಹಗಲು	ಸಾಯಂ	ರಾತ್ರಿ
		ಘ. ನಿ.	ಘ. ನಿ.	ಘ. ನಿ.
	೧	೧೧ ೨೯	೫ ೬	೧೦ ೪೬
	೧೬	೧೧ ೧೬	೪ ೫೮	೧೦ ೨೯
	೩೧	೧೧ ೫	೪ ೪೯	೧೦ ೧೧
ಬುಧ		ಪ್ರಾತಃ.	ಹಗಲು	ಸಾಯಂ
		ಘ. ನಿ.	ಘ. ನಿ.	ಘ. ನಿ.
	೧	೫ ೨೨	೧೧ ೨೧	೫ ೯
	೧೬	೬ ೨	೧೧ ೪೫	೫ ೨೨
	೩೧	೬ ೨೨	೧೨ ೧೧	೫ ೪೯
ಗುರು		ಹಗಲು	ಸಾಯಂ	ರಾತ್ರಿ
		ಘ. ನಿ.	ಘ. ನಿ.	ಘ. ನಿ.
	೧	೧೧ ೪೨	೫ ೨೩	೧೧ ೪
	೧೬	೧೧ ೨	೪ ೪೯	೧೦ ೨೧
	೩೧	೧೦ ೨೦	೪ ೧೬	೯ ೫೮
ಶುಕ್ರ		ಪ್ರಾತಃ.	ಮಧ್ಯಾ.	ಸಾಯಂ
		ಘ. ನಿ.	ಘ. ನಿ.	ಘ. ನಿ.
	೧	೮ ೨೨	೨ ೬	೬ ೨೯
	೧೬	೭ ೨೨	೧ ೨೨	೬ ೧
	೩೧	೬ ೨೨	೧ ೨೨	೬ ೮
ಶನಿ		ಪ್ರಾತಃ.	ಪ್ರಾತಃ.	ಮಧ್ಯಾ
		ಘ. ನಿ.	ಘ. ನಿ.	ಘ. ನಿ.
	೧	೧ ೫೫	೮ ೨	೨ ೯
	೧೬	೧ ೨೦	೬ ೨೬	೧ ೨೨
	೩೧	೦ ೪೬	೬ ೪೯	೧೨ ೫೫

1890 DECEMBER

31 DAYS

೧೮೯೦ ದಶಂಬರ

೩೧ ದಿವಸಗಳು

ದಶಂಬರ ೪ ◗ ಕೃಷ್ಣಾರ್ಧಚಂದ್ರ, ಸಾಯಂಕಾಲ ಘಂಟೆ ೬ ನಿಮಿಷ ೨೬
" ೧೨ ● ಕಾರ್ತಿಕ ಅಮಾವಾಸ್ಯೆ, ಪ್ರಾತಃಕಾಲ " ೪ " ೧೦
" ೧೯ ◖ ಶುಕ್ಲಾರ್ಧಚಂದ್ರ, " ೧ " ೪೬
" ೨೬ ○ ಮಾರ್ಗಶಿರ ಪೂರ್ಣಮಿ, " ೧೦ " ೫೬

ವಿಲಾಯತಿ ಕ್ರಮದ ಚಂದ್ರಸ್ಥಿತಿಗಳು

ಅಂಗ್ಲ				ಚಾಂದ್ರಮಾನ			ನಕ್ಷತ್ರ		ಸೌರಮಾನ		ಮಹಮ್ಮದಿ	
DATE	DAY	ತಾರೀಕು	ವಾರ	ತಿಂಗಳು	ತಿಥಿ	ಘ॥ನಿ॥ಪ॥	ಹೆಸರು	ಘ॥ನಿ॥ಪ॥	ದಿನಾಂಕ	ಘಣ	ತಿಂಗಳು	ಘಣ
1	M	೧	ಚ		೫	೪೫-೨೦	ಪುಷ್ಯಾ	೪೧-೩೮		೧೭		೧೮
2	Tu	೨	ಮ		೬	೫೧-೨೮	ಆಶ್ಲೇಷಾ	೪೮-೪೯		೧೮		೧೯
3	W	೩	ಬು		೭	೫೭-೫೯	ಮಘಾ	೫೬-೫೩		೧೯		೨೦
4	Th	೪	ಗು		೮	೬೦- ೦	ಹುಬ್ಬಾ	೬೦- ೦		೨೦		೨೧
5	F	೫	ಶು	ಕೃಷ್ಣ	೯	೪-೫೬	ಹುಬ್ಬಾ	೪-೧೬		೨೧		೨೨
6	S	೬	ಶ	ಪಕ್ಷ	೧೦	೧೦-೫೪	ಉತ್ತರಾ	೧೭-೨೪		೨೨		೨೩
7	SUN	೭	ಆ	ಕಾರ್ತಿಕ	೧೧	೧೭-೫೦	ಹಸ್ತಾ	೨೪-೩೩	[ಜಿಪ್ಸಿ ಯಾರ್]	೨೩	ರಬಿಲಾಖರ್	೨೪
8	M	೮	ಚ		೧೨	೨೪-೨೬	ಚಿತ್ರಾ	೩೩-೨೫	(ಜಾರ್ದೆ)	೨೪		೨೫
9	Tu	೯	ಮ		೧೩	೨೪-೫೫	ಸ್ವಾತೀ	೨೯-೩೨		೨೫		೨೬
10	W	೧೦	ಬು		೧೪	೨೫- ೦	ವಿಶಾಖಾ	೩೮-೪೪	ನವೆಂಬರ್	೨೬		೨೭
11	Th	೧೧	ಗು		೧೫	೨೫-೫೩	ಅನುರಾಧಾ	೪೩- ೨		೨೭		೨೮
12	F	೧೨	ಶು		●	೨೬-೨೦	ಜ್ಯೇಷ್ಠಾ	೮-೨೫		೨೮		೨೯
13	S	೧೩	ಶ		೧	೨೬-೨೨	ಮೂಲಾ	೮-೨೯		೨೯		೩೦
14	SUN	೧೪	ಆ		೨	೪೬-೨೯	ಪೂರ್ವಾಷಾಢ	೨೬-೨೨		೧		೧
15	M	೧೫	ಚ		೪	೨೯-೪೯	ಉತ್ತರಾಷಾಢ	೦-೨೧		೨		೨
16	Tu	೧೬	ಮ		೫	೩೩-೩೨	ಧನಿಷ್ಠಾ	೨೦-೩೩		೩		೩
17	W	೧೭	ಬು	ಮಾರ್ಗಶಿರ	೬	೩೭- ೨	ಶತಭಿಷಾ	೪೬-೨೧		೪		೪
18	Th	೧೮	ಗು	ಕೃಷ್ಣ	೭	೪೧-೪೨	ಪೂರ್ವಾಭಾದ್ರ	೪೨-೪೨		೫		೫
19	F	೧೯	ಶು	ಪಕ್ಷ	೮	೪೬-೪೦	ಉತ್ತರಾಭಾದ್ರ	೪೦-೩೩		೬		೬
20	S	೨೦	ಶ		೯	೪೩- ೪	ರೇವತೀ	೩೮-೩೯		೭		೭
21	SUN	೨೧	ಆ		೧೦	೪೦-೪೭	ಅಶ್ವಿನೀ	೩೭-೪೯	[ಪರುಪೆಯಾರ್]	೮		೮
22	M	೨೨	ಚ		೧೧	೪೫-೪೭	ಭರಣೀ	೪೫- ೬		೯		೯
23	Tu	೨೩	ಮ		೧೨	೪೯-೫೪	ಕೃತ್ತಿಕಾ	೫೯-೨೯	(ಡಿಸೆಂಬರ್)	೧೦	ಜಮಾಡಿಉಲ್	೧೦
24	W	೨೪	ಬು		೧೩	೫೪-೨೦	ರೋಹಿಣೀ	೪೩-೪೩		೧೧		೧೧
25	Th	೨೫	ಗು		೧೪	೫-೪೭	ಮೃಗಶಿರಾ	೪೫-೪೫		೧೨		೧೨
26	F	೨೬	ಶು		○	೧೨-೨೫	ಆರ್ದ್ರಾ	೪೯-೪೦		೧೩		೧೩
27	S	೨೭	ಶ		೧	೧೫- ೨	ಪುನರ್ವಸೂ	೪೫- ೪		೧೪		೧೪
28	SUN	೨೮	ಆ	ಪುಷ್ಯ	೨	೨೦-೫೮	ಪುಷ್ಯಾ	೪೦- ೦		೧೫		೧೫
29	M	೨೯	ಚ	ಶುದ್ಧ	೩	೨೬- ೨	ಪುಷ್ಯಾ	೦- ೮		೧೬		೧೬
30	Tu	೩೦	ಮ	ಪಕ್ಷ	೪	೩೨-೦೫	ಆಶ್ಲೇಷಾ	೮-೨೦		೧೭		೧೭
31	W	೩೧	ಬು	ಪೂರ್ಣ	೫	೩೮-೩೫	ಮಘಾ	೧೫-೪೫		೧೮		೧೮

ಮಹೋನ್ನತವಾದವುಗಳಲ್ಲಿ ದೇವರಿಗೆ ಮಹಿಮೆಯು! ಭೂಮಿಯ ಮೇಲೆ
ಸಮಾಧಾನವು! ಮನುಷ್ಯರಲ್ಲಿ ದಯವು!
ಲೂಕ. ೨, ೧೪.

1890 DECEMBER—ದಶಂಬರ ೧೮೯೦

ತಾರೀಕು	ಸೂರ್ಯ ಉದಯ ಘಂಟೆ	ಸೂರ್ಯ ಉದಯ ನಿಮಿಷ	ಸೂರ್ಯ ಅಸ್ತ ಘಂಟೆ	ಸೂರ್ಯ ಅಸ್ತ ನಿಮಿಷ	ಚಂದ್ರ ಉದಯ ಘಂಟೆ	ಚಂದ್ರ ಉದಯ ನಿಮಿಷ	ಚಂದ್ರ ಉಚ್ಚ ಘಂಟೆ	ಚಂದ್ರ ಉಚ್ಚ ನಿಮಿಷ	ಚಂದ್ರ ಅಸ್ತ ಘಂಟೆ	ಚಂದ್ರ ಅಸ್ತ ನಿಮಿಷ
೧	೬	೮	೫	೫೦	ರಾತ್ರಿ ೮	೪೬	ಪ್ರಾತಃ. ೪	೫೦	ಹಗಲು ೧೦	೪
೨	೬	೮	೫	೫೦	೧೦	೫೫	೪	೫೮	೧೦	೪೮
೩	೬	೮	೫	೫೦	೧೧	೨೬	೫	೪	೧೧	೫೧
೪	೬	೧೦	೫	೫೧	ಪ್ರಾತಃ. ೦	೮	೫	೪೮	೧೧	೧೧
೫	೬	೧೧	೫	೫೧	೦	೫೬	೬	೫೦	೧೧	೪೮
೬	೬	೧೧	೫	೫೧	೦	೪೪	೨	೧೧	ಮಧ್ಯಾನ್ನ ೧	೨೬
೭	೬	೧೧	೫	೫೨	೧	೪೩	೨	೫೪	೧	೪
೮	೬	೧೨	೫	೫೨	೧	೫೮	೭	೫೬	೧	೪೧
೯	೬	೧೨	೫	೫೨	೨	೧೧	೮	೧೧	೧	೧೧
೧೦	೬	೧೨	೫	೫೨	೪	೨೬	೧೦	೧೧	೨	೬
೧೧	೬	೧೨	೫	೫೨	೫	೪೧	೧೧	೫೬	೨	೫೫
೧೨	೬	೧೨	೫	೫೨	೬	೫೮	ಮಧ್ಯಾನ್ನ ೧	೪೨	೩	೫೦
೧೩	೬	೧೨	೫	೫೨	೮	೧೬	೨	೩೦	೪	೪೬
೧೪	೬	೧೨	೫	೫೨	೯	೩೪	೩	೨೬	೫	೪೩
೧೫	೬	೧೨	೫	೫೨	೧೦	೫೩	೪	೨೨	೬	೪೦
೧೬	೬	೧೨	೫	೫೨	೧೨	೧೩	೫	೧೮	೭	೩೭
೧೭	೬	೧೨	೫	೫೨	೧೩	೩೨	೬	೧೫	೮	೩೪
೧೮	೬	೧೨	೫	೫೨	೧೪	೫೦	ಪ್ರಾತಃ. ೭	೧೩	೯	೩೨
೧೯	೬	೧೨	೫	೫೨	ಮಧ್ಯಾನ್ನ ೧	೭	೮	೧೨	೧೦	೩೧
೨೦	೬	೧೨	೫	೫೨	೧	೨೪	೯	೧೨	೧೧	೩೧
೨೧	೬	೧೨	೫	೫೨	೧	೪೧	೧೦	೧೩	೧೨	೩೨
೨೨	೬	೧೨	೫	೫೨	೨	೫೯	೧೧	೧೫	೧೩	೩೩
೨೩	೬	೧೨	೫	೫೨	೩	೧೭	೧೨	೧೮	೧೪	೩೪
೨೪	೬	೧೨	೫	೫೨	೩	೩೬	೧೩	೨೨	೧೫	೩೬
೨೫	೬	೧೨	೫	೫೨	೩	೫೬	೧೪	೨೭	೧೬	೩೮
೨೬	೬	೧೨	೫	೫೩	೪	೧೭	೧೫	೩೩	೧೭	೪೦
೨೭	೬	೧೨	೫	೫೩	೪	೩೮	೧೬	೩೯	೧೮	೪೩
೨೮	೬	೧೨	೫	೫೪	೪	೫೯	೧೭	೪೫	೧೯	೪೭
೨೯	೬	೧೨	೫	೫೪	೫	೨೦	೧೮	೫೧	೨೦	೫೧
೩೦	೬	೧೨	೫	೫೫	೫	೪೧	೧೯	೫೭	೨೧	೫೬
೩೧	೬	೧೨	೫	೫೫	೬	೦	೨೧	೦	೨೨	೦

ಕುಜಾದಿ ಪಂಚಗ್ರಹರ ಉದಯೋಚ್ಚಾಸ್ತಮಯಗಳನ್ನು ತೋರಿಸುವ ಪಟ್ಟಿ

ಗ್ರಹ	ತಾರೀಕು	ಉದಯ	ಉಚ್ಚ	ಅಸ್ತ
ಕುಜ		ಪ್ರಾತಃ. ಘ. ನಿ.	ಹಗಲು ಘ. ನಿ.	ಸಾಯಂ ಘ. ನಿ.
	೧	೧೦ ೫೨	೪ ೫೮	೧೦ ೨೪
	೧೬	೧೦ ೩೯	೪ ೨೬	೧೦ ೧೬
	೨೬	೧೦ ೨೪	೪ ೧೮	೧೦ ೧೦
	೩೧	೧೦ ೧೯	೪ ೧೧	೧೦ ೪
ಬುಧ		ಪ್ರಾತಃ. ಘ. ನಿ.	ಮಧ್ಯಾ. ಘ. ನಿ.	ಸಾಯಂ ಘ. ನಿ.
	೧	೭ ೫	೧೨ ೫೯	೬ ೧೫
	೧೬	೭ ೨೦	೧೨ ೪	೫ ೪೬
	೨೬	೭ ೪೬	೧೨ ೧೬	೫ ೫
	೩೧	೭ ೪೫	೧೨ ೧೫	೫ ೫
ಗುರು		ಪ್ರಾತಃ. ಘ. ನಿ.	ಮಧ್ಯಾ. ಘ. ನಿ.	ರಾತ್ರಿ ಘ. ನಿ.
	೧	೧೦ ೨	೫ ೪೪	೯ ೨೬
	೧೬	೯ ೨೯	೫ ೧೩	೮ ೪೫
	೨೬	೮ ೪೬	೪ ೪೧	೮ ೧೫
	೩೧	೮ ೪೪	೪ ೧೯	೮ ೧೩
ಶುಕ್ರ		ಪ್ರಾತಃ. ಘ. ನಿ.	ಹಗಲು ಘ. ನಿ.	ಸಾಯಂ ಘ. ನಿ.
	೧	೫ ೫೧	೧೧ ೫೦	೫ ೯
	೧೬	೫ ೪೧	೧೧ ೨೬	೫ ೧೫
	೨೬	೫ ೨	೧೦ ೫೧	೪ ೫೫
	೩೧	೪ ೫೪	೧೦ ೨೯	೪ ೩೨
ಶನಿ		ಪ್ರಾತಃ. ಘ. ನಿ.	ಪ್ರಾತಃ. ಘ. ನಿ.	ಮಧ್ಯಾ. ಘ. ನಿ.
	೧	೦ ೫	೬ ೧೧	೧೨ ೧೭
	೧೬	ರಾತ್ರಿ ೧೧ ೨೭	೬ ೫೬	೧೧ ೫೯
	೨೬	೧೦ ೪೯	೬ ೪೪	೧೧ ೦
	೩೧	೧೦ ೨೩	೬ ೨೯	೧೦ ೪೫

೧೮೯೦ನೇ ವರ್ಷದ ಸೂಕ್ಷ್ಮನೂತನ ದೃಕ್ಸಿದ್ಧಾಂತ ಪಂಚಾಂಗವು.

ಈ ೧೮೯೦ನೇ ವರ್ಷದ ಆದಿಯಲ್ಲಿ ಚಿತ್ರಾ ನಕ್ಷತ್ರದ ಆಯನಾಂಶವು ಸೂರ್ಯಸಿದ್ಧಾಂತ ಪ್ರಕಾರ ಭಾಗ ೨೨ ಕಲೆ ೧೪ ವಿಕಲೆ ೩೩ ಎಂದೂ, ವರ್ಷದ ಅಂತ್ಯದಲ್ಲಿ ಭಾಗ ೨೨ ಕಲೆ ೧೯ ವಿಕಲೆ ೨೩ ಎಂದೂ ಗಣಿಸಲ್ಪಟ್ಟಿದೆ.

ಮಹಾ ನಕ್ಷತ್ರವೆಂಬ ಸೂರ್ಯನಕ್ಷತ್ರ ಆರಂಭಿಸುವ ಕಾಲ.

ನಕ್ಷತ್ರದ ಹೆಸರು	ತಿಂಗಳು	ತಾ.	ಹೊತ್ತು	ಘಂಟೆ	ನಕ್ಷತ್ರದ ಹೆಸರು	ತಿಂಗಳು	ತಾ.	ಹೊತ್ತು	ಘಂಟೆ
ಉತ್ತರಾಷಾ.	ಜನವರಿ	೯	ಪ್ರಾತಃ.	೭	ಪುಷ್ಯಾ	ಜುಲಾಯಿ	೧೪	ಹಗಲು	೧೦I
ಶ್ರವಣಾ	"	೨೨	"	೯	ಆಶ್ಲೇಷಾ	ಅಗೊಸ್ತು	೧	"	೯
ಧನಿಷ್ಠಾ	ಫೆಬ್ರುವರಿ	೪	ಮಧ್ಯಾನ್ಹ	೧೨	ಮಘಾ	"	೧೫	ಪ್ರಾತಃ.	೭
ಶತಭಿಷಾ	"	೧೭	ಸಾಯಂ.	೫	ಹುಬ್ಬಾ	"	೨೯	"	೨II
ಪೂರ್ವಾಭಾ.	ಮಾರ್ಚಿ	೨	ರಾತ್ರಿ	೧೧	ಉತ್ತರಾ	ಸಪ್ತಂಬರ	೧೧	ಸಾಯಂ.	೮II
ಉತ್ತರಾಭಾ.	"	೧೭	ಪ್ರಾತಃ.	೮	ಹಸ್ತಾ	"	೨೫	ಮಧ್ಯಾನ್ಹ	೧೨I
ರೇವತೀ	"	೨೯	ಸಾಯಂ.	೭	ಚಿತ್ರಾ	ಒಕ್ತೋಬರ	೯	ಪ್ರಾತಃ.	೧
ಅಶ್ವಿನೀ	ಏಪ್ರಿಲ್	೧೨	ಪ್ರಾತಃ	೮	ಸ್ವಾತೀ	"	೨೨	ಮಧ್ಯಾನ್ಹ	೧೨
ಭರಣೀ	"	೨೫	ಸಾಯಂ.	೪	ವಿಶಾಖಾ	ನವಂಬರ	೪	ಸಾಯಂ.	೬
ಕೃತ್ತಿಕಾ	ಮೇ	೯	"	೫II	ಅನುರಾಧಾ	"	೧೮	ಪ್ರಾತಃ	೧II
ರೋಹಿಣೀ	"	೨೩	ಮಧ್ಯಾನ್ಹ	೧II	ಜ್ಯೇಷ್ಠಾ	ದಶಂಬರ	೧	"	೬
ಮೃಗಶಿರಾ	ಜೂನ್	೬	ಹಗಲು	೧೧II	ಮೂಲಾ	"	೧೪	"	೮II
ಆರ್ದ್ರಾ	"	೨೦	ಸಾಯಂ.	೭II	ಪೂರ್ವಾಷಾ.	"	೨೭	ಹಗಲು	೧೧
ಪುನರ್ವಸೂ	ಜುಲಾಯಿ	೪	ಹಗಲು	೧೧					

ದೃಕ್ಸಿದ್ಧ ಸಂಕ್ರಮಣಕಾಲದ ಫಳಿಗೆ ವಿಫಳಿಗೆಗಳು.

(ಸ್ಫುಟ ಸೂರ್ಯೋದಯಾದಿ.)

ತಿಂಗಳು	ತಾರೀಕು	ವಾರ	ಫಳಿಗೆ ವಿಫಳಿಗೆ	ರಾಶಿ
ಜನವರಿ	೧೨	ಆದಿತ್ಯವಾರ	೧೭- ೩	ಮಕರ
ಫೆಬ್ರುವರಿ	೧೦	ಚಂದ್ರವಾರ	೪೯-೨೬	ಕುಂಭ
ಮಾರ್ಚಿ	೧೨	ಬುಧವಾರ	೪೪-೨೨	ಮೀನ
ಏಪ್ರಿಲ್	೧೨	ಶನಿವಾರ	೪-೪೯	ಮೇಷ
ಮೇ	೧೨	ಚಂದ್ರವಾರ	೫೭-೫೦	ವೃಷಭ
ಜೂನ್	೧೭	ಶುಕ್ರವಾರ	೧೪-೪೫	ಮಿಥುನ
ಜುಲಾಯಿ	೧೪	ಚಂದ್ರವಾರ	೪೧-೫೨	ಕರ್ಕಾಟ
ಅಗೊಸ್ತು	೧೫	ಶುಕ್ರವಾರ	೨-೨೦	ಸಿಂಹ
ಸಪ್ತಂಬರ	೧೫	ಚಂದ್ರವಾರ	೩- ೩	ಕನ್ಯಾ
ಒಕ್ತೋಬರ	೧೫	ಬುಧವಾರ	೩೧-೪೫	ತುಲಾ
ನವಂಬರ	೧೪	ಶುಕ್ರವಾರ	೩೦-೩೩	ವೃಶ್ಚಿಕ
ದಶಂಬರ	೧೪	ಆದಿತ್ಯವಾರ	೬-೨೪	ಧನು

ಭೂಸನ್ನಿಕರ್ಷಣ ಭೂವಿಪ್ರಕರ್ಷಣ

ಅಂದರೆ ಚಂದ್ರನು ಭೂಮಿಗೆ ಸಮೀಪ (Perigee) ಮತ್ತು ದೂರ (Apogee) ಇರುವ ಸಮಯ ತಿಳಿಯಲಿಕ್ಕೆ.

ತಿಂಗಳು	ತಾರೀಕು	ಹೊತ್ತು	ಘಂಟೆ	ತಿಂಗಳು	ತಾರೀಕು	ಹೊತ್ತು	ಘಂಟೆ
ಜನವರಿ	೨೦	ಸಾಯಂ.	೮	ಜನವರಿ	೬	ಸಾಯಂ.	೪
ಫೆಬ್ರುವರಿ	೧೪	ಪ್ರಾತಃ.	೭	ಫೆಬ್ರುವರಿ	೨	"	೭
ಮಾರ್ಚಿ	೧೪	"	೮	ಮಾರ್ಚಿ	೨	ಪ್ರಾತಃ.	೮
ಏಪ್ರಿಲ್	೧೩	ರಾತ್ರಿ	೧೧	"	೩೦	"	೫
ಮೇ	೯	ಪ್ರಾತಃ.	೫	ಏಪ್ರಿಲ್	೨೬	ರಾತ್ರಿ	೧೧
ಜೂನ್	೪	ಮಧ್ಯಾನ್ಹ	೫	ಮೇ	೨೪	ಸಾಯಂ.	೪
ಜುಲಾಯಿ	೫	ಸಾಯಂ	೮	ಜೂನ್	೨೧	ಪ್ರಾತಃ.	೭
ಅಗೊಸ್ತು	೧	ಪ್ರಾತಃ.	೪	ಜುಲಾಯಿ	೧೮	ಸಾಯಂ.	೭
"	೨೯	ಮಧ್ಯಾನ್ಹ	೨	ಅಗೊಸ್ತು	೧೪	ರಾತ್ರಿ	೯
ಸಪ್ತಂಬರ	೨೬	ರಾತ್ರಿ	೯	ಸಪ್ತಂಬರ	೧೧	ಪ್ರಾತಃ.	೪
ಒಕ್ತೋಬರ	೨೪	ಮಧ್ಯಾನ್ಹ	೨	ಒಕ್ತೋಬರ	೯	ಸಾಯಂ.	೭
ನವಂಬರ	೧೮	ರಾತ್ರಿ	೧೦	ನವಂಬರ	೫	ಮಧ್ಯಾನ್ಹ	೨
ದಶಂಬರ	೧೫	ಪ್ರಾತಃ.	೫	ದಶಂಬರ	೨	ಹಗಲು	೧೧
				"	೩೧	ಪ್ರಾತಃ.	೭

೧೮೯೦ರಲ್ಲಿ ಕುಜಾದಿ ಗ್ರಹಗಳ ರಾತ್ರಿಪ್ರವೇಶಕಾಲಗಳು.

ಗ್ರಹ	ಯಾವ ಸಮಯದಿಂದ		ಯಾವ ಸಮಯದ ವರೆಗೆ					ಯಾವ ರಾತ್ರಿಯಲ್ಲಿ
	ತಿಂಗಳು	ತಾ.	ತಿಂಗಳು	ತಾ.	ಹೊತ್ತು	ಘ.	ನಿ.	
Mars ಕುಜನಿಗೆ	ಜನವರಿ	೧	ಫೆಬ್ರುವರಿ	೧೨	ಪ್ರಾತಃಕಾಲ	೩	೧	ತುಲಾ
	ಫೆಬ್ರುವರಿ	೧೨	ಸಪ್ತಂಬರ	೧೧	"	೨	೩೫	ವೃಶ್ಚಿಕ
	ಸಪ್ತಂಬರ	೧೧	ಒಕ್ತೋಬರ	೩೭	ಸಾಯಂಕಾಲ	೫	೨೪	ಧನು
	ಒಕ್ತೋಬರ	೩೭	ದಶಂಬರ	೬	"	೫	೪೮	ಮಕರ
	ದಶಂಬರ	೬	"	೩೧	ರಾತ್ರಿ	೧೨	೦	ಕುಂಭ
Mercury ಬುಧನಿಗೆ	ಜನವರಿ	೧	ಮಾರ್ಚಿ	೭	ಹಗಲು	೧೧	೩೬	ಮಕರದಲ್ಲಿ
	ಮಾರ್ಚಿ	೭	"	೩೬	"	೧೧	೨೯	ಕುಂಭ
	"	೩೬	ಎಪ್ರಿಲ್	೧೦	ಸಾಯಂಕಾಲ	೬	೨೯	ಮೀನ
	ಎಪ್ರಿಲ್	೧೦	"	೨೪	"	೭	೩೦	ಮೇಷ
	"	೨೪	ಜುಲಾಯಿ	೩	"	೪	೫೯	ವೃಷಭ
	ಜುಲಾಯಿ	೩	"	೧೯	ಪ್ರಾತಃಕಾಲ	೧೦	೫೬	ಮಿಥುನ
	"	೧೯	ಅಗೊಸ್ತು	೩	"	೪	೫೩	ಕರ್ಕಾಟಕ
	ಅಗೊಸ್ತು	೩	"	೨೧	ಮಧ್ಯಾನ್ಹ	೩	೫೨	ಸಿಂಹ
	"	೨೧	ಒಕ್ತೋಬರ	೩೨	ಪ್ರಾತಃಕಾಲ	೩	೫೩	ಕನ್ಯಾ
	ಒಕ್ತೋಬರ	೩೨	ನವಂಬರ	೫	ಸಾಯಂಕಾಲ	೪	೫೨	ತುಲಾ
	ನವಂಬರ	೫	ದಶಂಬರ	೪	"	೬	೪೫	ವೃಶ್ಚಿಕ
	ದಶಂಬರ	೪	"	೨೫	ಪ್ರಾತಃಕಾಲ	೧	೫೫	ಧನು
	"	೨೫	,	೩೧	ರಾತ್ರಿ	೧೨	೦	ಮಕರ
Jupiter ಗುರುನಿಗೆ	ಜನವರಿ	೧	ಜನವರಿ	೧೯	ಮಧ್ಯಾನ್ಹ	೨	೪೭	ಧನು
	"	೧೯	ದಶಂಬರ	೩೧	ರಾತ್ರಿ	೧೨	೦	ಮಕರ
Venus ಭಕ್ರನಿಗೆ	ಜನವರಿ	೧	ಜನವರಿ	೧೯	ಮಧ್ಯಾನ್ಹ	೩	೪೩	ಧನುಸ್ಸಿನಲ್ಲಿ
	"	೧೯	ಫೆಬ್ರುವರಿ	೧೨	"	೧	೨೫	ಮಕರ
	ಫೆಬ್ರುವರಿ	೧೨	ಮಾರ್ಚಿ	೯	"	೧	೧೧	ಕುಂಭ
	ಮಾರ್ಚಿ	೯	ಎಪ್ರಿಲ್	೧	ಸಾಯಂಕಾಲ	೪	೩	ಮೀನ
	ಎಪ್ರಿಲ್	೧	"	೨೬	ಪ್ರಾತಃಕಾಲ	೦	೯	ಮೇಷ
	"	೨೬	ಮೇ	೨೦	ಮಧ್ಯಾನ್ಹ	೧	೧೧	ವೃಷಭ
	ಮೇ	೨೦	ಜೂನ್	೧೩	ಪ್ರಾತಃಕಾಲ	೯	೨೧	ಮಿಥುನ
	ಜೂನ್	೧೩	ಜುಲಾಯಿ	೯	ಮಧ್ಯಾನ್ಹ	೧೨	೨೪	ಕರ್ಕಾಟಕ
	ಜುಲಾಯಿ	೯	ಅಗೊಸ್ತು	೪	ಪ್ರಾತಃಕಾಲ	೫	೪೦	ಸಿಂಹ
	ಅಗೊಸ್ತು	೪	"	೩೦	ರಾತ್ರಿ	೧೧	೪೯	ಕನ್ಯಾ
	"	೩೦	ಸಪ್ತಂಬರ	೨೯	ಪ್ರಾತಃಕಾಲ	೪	೧	ತುಲಾ
	ಸಪ್ತಂಬರ	೨೯	ದಶಂಬರ	೩೧	ರಾತ್ರಿ	೧೨	೦	ವೃಶ್ಚಿಕ
Saturn ಶನಿನಿಗೆ	ಜನವರಿ	೧	ದಶಂಬರ	೩೧	ರಾತ್ರಿ	೧೨	೦	ಸಿಂಹದಲ್ಲಿ
Moon's ascending node ರಾಹುನಿಗೆ	ಜನವರಿ	೧	ಜುಲಾಯಿ	೧೬	ಹಗಲು	೧೧	೩೯	ಮಿಥುನದಲ್ಲಿ
	ಜುಲಾಯಿ	೧೬	ದಶಂಬರ	೩೧	ರಾತ್ರಿ	೧೨	೦	ವೃಷಭ

ನೂತನದೃಕ್ಸಿದ್ಧಾಂತ ಸೂಕ್ಷ್ಮಪಂಚಾಂಗವು.

ಈ ಭರತ ಖಂಡದಲ್ಲಿ ಮೊದಲು ಬ್ರಾಹ್ಮ, ಸೌರ, ಪಾಸಿಷ್ಠ, ಲೌಮಷ, ಪೌಲಿಶಂಗಳೆಂದು ಪಂಚ ಸಿದ್ಧಾಂತಗಳಿದ್ದವೆಂತಲೂ ಅವುಗಳೆಲ್ಲವೂ ಕಲಿ ಶಕ ೩೬೨೬ರಲ್ಲಿ (ಕ್ರಿ. ಶ. ೫೭೪) ದೃಕ್ಸಾಮ್ಯವಿಲ್ಲದೆ ಹೋದ ಕಾರಣ ಆರ್ಯಭಟ್ಟಾಚಾರ್ಯನೆಂಬ ಗಣಿತಜ್ಞನು ಆರ್ಯಾವೃತ್ತ ರೂಪವಾಗಿ ದಶಗೀತಿ ಸೂತ್ರಗಳನ್ನೂ ಗಣಿತ, ಕಾಲಕ್ರಿಯಾ, ಗೋಲವೆಂಬ ಮೂರು ಅಧ್ಯಾಯಗಳನ್ನೂ ರಚಿಸಿ ಈ ಕೃತಿಯಂ ಆರ್ಯಸಿದ್ಧಾಂತ ವೆಂದು ಪ್ರಕಟಿಸಿದನೆಂತಲೂ ತಿಳಿದು ಬರುತ್ತದೆ. ಅದು ಕೂಡ ಸ್ವಲ್ಪ ಮಟ್ಟಿಗೆ ವ್ಯಭಿಚರಿಸಿದರಿಂದ ಭಾಸ್ಕರಾಚಾರ್ಯನೆಂಬವನು ಕಲಿ ವರ್ಷ ೪೩೫೧ರಲ್ಲಿ (ಕ್ರಿ. ಶ. ೧೧೫೦) ಸಿದ್ಧಾಂತ ಶಿರೋಮಣಿ (ಲೀಲಾವತೀ, ಬೀಜ, ಗೋಲ, ಗಣಿತವೆಂಬ) ಗಣಿತ ಗ್ರಂಥವಂ ರಚಿಸಿ ಆರ್ಯಭಟ್ಟೀಯವಂ ಗುಣದಿಂದ ಕೀಳ್ಪಡಿಸಿದನು. ಈ ಭಾಸ್ಕರನಂಥಾ ಸಿದ್ಧಾಂತಿ ಯಾರಾದರೂ ಈ ವರೆಗೆ ಈ ದೇಶೀಯರಲ್ಲಿ ಆಗಿರಲಿಲ್ಲ. ಆ ಮೇಲೆ ಇನ್ನೂ ವಿಶದವಾಗಿ ಕಮಲಾಕರಭಟ್ಟನಿಂದ ಸಿದ್ಧಾಂತತತ್ವವಿವೇಕವೆಂಬ ಗ್ರಂಥವು ರಚಿಸಲ್ಪಟ್ಟದರಿಂದ ಭಾಸ್ಕರೀಯವು ಬಲಗೊಂಡು ಬೆಳೆಯಿತು. ಈ ಭಾಸ್ಕರೀಯದಲ್ಲಿ ಸ್ಥೂಲಮಾರ್ಗದಿಂದ ಗಣಿಸುವ ರೀತಿಯನ್ನೇ ಉದಾಹರಣದಲ್ಲಿ ತೆಕ್ಕೊಂಡು ಸೂಕ್ಷ್ಮಮಾರ್ಗವು ಸೂತ್ರಪ್ರಾಯವಾಗಿ ಹೇಳಲಾದ ಕಾರಣ ಸೂರ್ಯಗ್ರಹಣಾದಿಗಳ ಸ್ಪರ್ಶ ಮೋಕ್ಷಾದಿಗಳು ವ್ಯತ್ಯಸ್ತವಾಗಿ ತೋರಿದದರಿಂದ ಮುಲಯಾಳದಲ್ಲಿ ದೃಕ್ಕೆಂಬ ಗಣಿತವು ನಾರಾಯಣಭರ್ ರಚಿತ ಹೊಸ ಪದಕಗಳಿಂದ ಪ್ರಕಟವಾಯಿತು. ಅಂದಿನಿಂದ (ಅಂದರೆ ಕಲಿ ವರ್ಷ ೪೭೦೯ರಲ್ಲಿ ಕ್ರಿ. ಶ. ೧೬೦೭) ಹಿಂದಣ ಆರ್ಯಭಟ್ಟೀಯಕ್ಕೆ ಪರಹಿತವೆಂದೂ ಇದಕ್ಕೆ ದೃಕ್ಕೆಂದೂ ಹೆಸರಾಗಿ ಎರಡು ಶಾಖೆಗಳುಳಿದಿವೆ.

ಈ ದೃಕ್ಕೆಂಬದು ಕೂಡ ಸೂರ್ಯಗ್ರಹಣದ ವಿಷಯದಲ್ಲಿ ಸರಿ ಬರುವ ಹಾಗಿಲ್ಲ; ಇದಕ್ಕೆ ಉದಾಹರಣವಾಗಿ ನಮ್ಮ ದೇಶಕ್ಕೆ ಪೂರ್ಣವಾಗಿ ತೋರಿದ (೧೯೬೧ ದಶಂಬರದ) ಸೂರ್ಯಗ್ರಹಣವನ್ನು ಈಗಲಿನ್ನೊಮ್ಮೆ ಆ ದೃಕ್ಕಿನಿಂದಲೇ ಗಣಿಸಿದರೆ ಸರಿ ಬರುವದಿಲ್ಲವೆಂಬದೂ ಭಾಸ್ಕರೀಯ ಬೀಜೋಕ್ತ ಸಂಸ್ಕಾರವು ಅದಕ್ಕೆ ಆಗತ್ಯವೆಂಬದು ತಿಳಿಯದೆ ಹೋಗದು. ಈ ಊರ ಪ್ರತ್ಯಕ್ಷದ ಜ್ಯೋತಿಷ್ಕರೆಲ್ಲರೂ ಬರೇ ವಾಕ್ಯಗಳನ್ನಿಟ್ಟು ಚಂದ್ರಸ್ಫುಟ ಮಾಡುವವರಾದ ಮೇಲೆ ಆ ದೃಕ್ಕಿನ ಅಥವಾ ಪರಹಿತದ ಮುಖ್ಯ ಸಂಸ್ಕಾರಗಳೆಲ್ಲಾ ತಪ್ಪಿ ಹೋಗಿ ದಿನದ ಹೋಗುತ್ತಾ ಗ್ರಹಗಣಿತದ ಸೂಕ್ಷ್ಮತೆಯು ಕಡಿಮೆಯಾಗುತ್ತಾ ಬಂತು.

ನಾವು ನೂತನ ದೃಕ್ಸಿದ್ಧಾಂತವೆಂಬ ಸೂಕ್ಷ್ಮಗಣಿತದ ಈ ನಮ್ಮ ಪಂಚಾಂಗದಲ್ಲಿ ಸರ್ವ ಸಂಸ್ಕಾರಯುಕ್ತ ಚಂದ್ರನನ್ನೇ ಪ್ರತಿ ದಿನದ ಪ್ರಾತಃಕಾಲಕ್ಕೆ ಸ್ಫುಟ ಮಾಡಿ ಅದರ ಆಧಾರದಿಂದ ಘಳಿಗೆ ಮುಂತಾದ್ದು ಕಸರು ಬಿಡದೆ ಬರಿಸುತ್ತೇವೆ. ಪ್ರತಿ ವರ್ಷದ ಅಯನಾಂಶ ಮುಂತಾದ್ದು ಶೋಧಿಸಿ ನೋಡುತ್ತಿರುತ್ತೇವೆ. ಇಷ್ಟು ಪ್ರಯಾಸ ತೆಕ್ಕೊಂಡು ಮಾಡುವ ಈ ಪಂಚಾಂಗವನ್ನು ಸಿದ್ಧಾಂತಾನಭಿಜರಾದ ಕೆಲವರು "ಪಾದ್ರಿ ಪಂಚಾಂಗ"ವೆಂತಲೂ ಇದರಲ್ಲಿ ತಮ್ಮದರಂತೆ ಘಟಿಕಾದಿಗಳು ಸರಿ ಇಲ್ಲವಾಗಿ ಇದು ಅಶ್ರದ್ಧೇಯವೆಂತಲೂ ಅಪಲಾಪಿಸುತ್ತಾರೆಂದೂ ಕೂಡ, ಕೇಳಿ, ವ್ಯಸನ ಪಡುತ್ತೇವೆ. ಅಂಥವರಿಗೆ ನಾವು ಹೇಳುವದೇನಂದರೆ:—

ಕಳದ ವರ್ಷದ ಏಪ್ರಿಲ್ ೩೦ರಲ್ಲಿ ಸಂಭವಿಸಿದ ಗುರು ಚಂದ್ರ ಸಮಾಗಮ ಮತ್ತು ಜೂನ್ ತಿಂಗಳಲ್ಲಾದ ಸೂರ್ಯ ಗ್ರಹಣ ಸಹ ಪರೀಕ್ಷಿಸಿ ನೋಡಿದವರು ಈ ಗಣಿತದ ಸೂಕ್ಷ್ಮತೆಯನ್ನು ಅರಿಯದೆ ಇರರು. ಹಾಗೆ ನೋಡದಿರುವವರು ಈ ವರ್ಷದ ಜೂನು ೧೭ನೇ ಸೂರ್ಯ ಗ್ರಹಣದ ಸ್ಪರ್ಶಾದಿ ಕಾಲಗಳನ್ನು ಘಡಿಯಾಲಿನಿಂದ (ಜಾಗರೂಕರಾಗಿ) ಸರಿ ನೋಡಿದರೆ ಒಳ್ಳೇದಾದೀತು. ಇದೇ ಸಲುವಾಗಿ ಇನ್ನು ಮುಂದೆ ಅಂಥಾ ವಿಶೇಷ ಸಂಗತಿಗಳನ್ನು ಗ್ರಹ ನಕ್ಷತ್ರಾದಿಗಳು ಚಂದ್ರನಿಂದ ಮುಚ್ಚಲ್ಪಡುವ ಕಾಲಾದಿಗಳನ್ನು ಗಣಿಸಿ ಅನುಕೂಲವಿದ್ದಂತೆ ಸೂಚಿಸುತ್ತಾ ಬರುವೆವು.

ಆದದರಿಂದ ವಿವೇಕಿಗಳಾದ ನಮ್ಮ ಪ್ರಿಯ ವಾಚಕರು ಇದನ್ನೆಲ್ಲ ವರ್ಯಾಲೋಚಿಸಿ, ಈ ನಮ್ಮ ಪಂಚಾಂಗವನ್ನು ಸಾರ್ವಜನೀನ್ಯವೆಂದು ಸ್ವೀಕರಿಸುವರೆಂತ ನಂಬುತ್ತೇವೆ. ಈ ವಿಷಯದಲ್ಲಿ ನಿಮ್ಮ ಮಹಾಕವಿ ಕಾಲಿದಾಸನ ಮಾತು ನೆನಪಿಗೆ ಬಂತು:—

"ಪುರಾಣಮಿತ್ಯೇವ ನ ಸಾಧು ಸರ್ವಮ್
ನ ಚಾಪಿ ಕಾವ್ಯಂ ನವಮಿತ್ಯವದ್ಯಮ್
ಸಂತಃ ಪರೀಕ್ಷ್ಯಾನ್ಯತರದ್ಭಜನ್ತೇ
ಮೂಢಃ ಪರಪ್ರತ್ಯಯನೇಯ ಬುದ್ಧಿಃ." (ಮಾಲವಿಕಾಗ್ನಿಮಿತ್ರ)

ಅಭಿಪ್ರಾಯ:—ಎಲ್ಲವೂ ಹಳೇದೆಂಬದರಿಂದಲೇ ಒಳ್ಳೇದೆನ್ನ ಕೂಡದು; ಹೊಸತೆಂಬದರಿಂದ ನಿಂದ್ಯವೆನ್ನಲೂ ಬಾರದು. ಸಾರಜ್ಞರಾದ ವಿದ್ವಾಂಸರು ಕಾವ್ಯ ಮುಂತಾದ ಯಾವದೊಂದನ್ನಾದರೂ ತಾವೇ ಪರೀಕ್ಷಿಸಿ, ಉಪಾದೇಯವನ್ನು ತೆಕ್ಕೊಳ್ಳುತ್ತಾರೆ; ಹೇಯವನ್ನೇ ಬಿಡುತ್ತಾರೆ. ಮೂಢನು ಮಾತ್ರ ಪರರ ವಿಶ್ವಾಸದಿಂದ ನಡವವನು (ಅಂದರೆ ಯಾರ ಮೇಲೆ ಅಭಿಮಾನವಿಟ್ಟಿರುವನೋ ಅವನನ್ನು ನಂಬಿ, ಆ ನಂಬಿಕೆಯಿಂದ ನಡಿಸಲ್ಪಡುವ ಬುದ್ಧಿಯವನಾಗಿದ್ದಾನೆ).

ಪಂಚಾಂಗ ವಾಚಕರಿಗೆ ಶುಭವಾಗಲಿ!

೧೮೯೦ನೇ ಇಸವಿಯಲ್ಲಿ ಸಂಭವಿಸುವ

ಗ್ರಹಣಗಳು

ಈ ವರ್ಷ ಸೂರ್ಯ ಗ್ರಹಣಗಳೆರಡು, ಚಂದ್ರ ಗ್ರಹಣ ಒಂದು ಹೀಗೆ ಮೂರು.

I. ಜೂನು ೧೭ ಜ್ಯೇಷ್ಠ ಅಮಾವಾಸ್ಯೆಯಲ್ಲಿ ಸೂರ್ಯನಿಗೆ ಕಂಕಣ ಗ್ರಹಣ ವಾಗುವದು. ಇದು ಕಾಶ್ಮೀರ್ ಲಾಹೋರ್ ನೇಪಾಲ್ ಮುಂತಾದ ದೇಶಗಳಲ್ಲಿ ಕಂಕಣಾಕಾರವಾಗುವದಾದರೂ ಮಂಗಳೂರಿಗೆ ಪಾರ್ಶ್ವ ಗ್ರಹಣವೇ.

ಮಂಗಳೂರು ಸಮಯ ಪ್ರಕಾರ ಸ್ಪರ್ಶ ವಾಯವ್ಯದಿಂದ		ಮಧ್ಯಾನ್ಹದ ಮೇಲೆ	ಘ. ೬ ನಿ. ೬೪
,,	ಮಧ್ಯ ಕಾಲ	,,	,, ೪ ,, ೪೯
,,	ಮೋಕ್ಷ	,,	,, ೫ ,, ೫೩

ಮಧ್ಯಕಾಲದಲ್ಲಿ ಸೂರ್ಯನ $\frac{೫}{೧೦}$ ಅಂಶ ಗ್ರಹಣವಾಗುವದು ಸೂಕ್ಷ್ಮವಾಗಿ $\frac{೫೧೯}{೧೦೦೦}$ ಆಗುವದು.

II. ನವಂಬರ್ ೨೬ ಕಾರ್ತಿಕ ಪೂರ್ಣಮಿ ಚಂದ್ರನಿಗೆ ಕಿಂಚಿತ್ ಗ್ರಹಣ $\frac{೧}{೫೦}$ ಅಂಶ ಮಾತ್ರ ಭೂಚ್ಛಾಯೆಯಿಂದ ಗ್ರಹಿಸಲ್ಪಡುವದರಿಂದ ಒಳ್ಳೇ ದುರ್ಬೀನಿಯಿಂದ ಲ್ಲದೆ ಬರೆಗಣ್ಣಿಂದಾಗಲಿ ಸುಮಾರಿನ ದುರ್ಬೀನಿಯಿಂದಾಗಲಿ ನೋಡಲಶಕ್ಯವು; ಗಣಿತದ ಸೂಕ್ಷ್ಮತೆಯನ್ನು ನೋಡ ಅಪೇಕ್ಷಿಸುವವರು ಕೆಳಗಣ ಲೆಖ್ಖ ಪ್ರಕಾರ ನೋಡಿಕೊಂಡಲ್ಲಿ ಚಂದ್ರನ ಉತ್ತರ ಭಾಗದ ಅಂಚು ಸ್ವಲ್ಪ ಮಾತ್ರ ಮಲಿನವಾಗಿ ತೋರುವದು.

ಮಂಗಳೂರು ಕಾಲ	ಸ್ಪರ್ಶ	ಘಂಟಿ ೬ ನಿಮಿಷ ೨೮
	ಮಧ್ಯ ಕಾಲ	,, ೬ ,, ೫೩
	ಮೋಕ್ಷ ಕಾಲ	,, ೬ ,, ೫೮

III. ದಶಂಬರ್ ೧೨ ಕಾರ್ತಿಕ ಅಮಾವಾಸ್ಯೆ ಸೂರ್ಯನಿಗೆ ಪೂರ್ಣ ಗ್ರಹಣ; ಇದರ ಮಧ್ಯ ರೇಖೆಯು ಔಸ್ತ್ರಲ್ಯಕ್ಕಿಂತಲೂ ದಕ್ಷಿಣಕ್ಕೆ ಬೀಳುವದರಿಂದ ನಮಗೆ ಅಗೋಚರ. ಹಿಂದುಸ್ಥಾನದ ಅತಿ ದಕ್ಷಿಣ ಕೊನೆಯಲ್ಲಿ ಸ್ವಲ್ಪ ಮಾತ್ರ ಗ್ರಹಣವಾಗಿ ಪ್ರಾತಃಕಾಲ ೮ ಘಂಟೆಗೆ ಕಂಡು ಬರುವದು.

ಕಾಲಮಾನನಿರ್ಣಯ.

ದಿನವನ್ನು ವಿಭಾಗಿಸುವ ರೀತಿ ಹಿಂದು ಜನರಲ್ಲಿ ಬೇರೆ, ವಿಲಾಯತಿಯವರಲ್ಲಿ ಬೇರೆ; ಹ್ಯಾಗಂದರೆ:

ಹಿಂದು ರೀತಿ:	ವಿಲಾಯತಿ ರೀತಿ:
೧ ದಿನಕ್ಕೆ ೬೦ ಘಳಿಗೆ	೧ ದಿನಕ್ಕೆ ೨೪ ತಾಸು (ಘೋರ)
೧ ಘಳಿಗೆಗೆ ೬೦ ವಿಘಳಿಗೆ	೧ ತಾಸಿಗೆ ೬೦ ಮಿನಿಟು (ನಿಮಿವ)
೧ ವಿಘಳಿಗೆಗೆ ೬ ಪ್ರಾಣ	೧ ಮಿನಿಟಿಗೆ ೬೦ ಸೆಕೆಂದ (ಕ್ಷಣ)

ವರ್ತಮಾನ ಸಂಗ್ರಹ.

ಕನ್ನಡ ಜಿಲ್ಲೆಯಲ್ಲಿಯೂ ಮಲೆಯಾಳ ಜಿಲ್ಲೆಯಲ್ಲಿಯೂ ತಿರುವಾಂಕೋಡು ಸೀಮೆಯ ವರೆಗೂ ವಾಂತಿಭೇದಿ ರೋಗವು ಪ್ರಬಲಗೊಂಡು ಹೇರಳ ಮನುಷ್ಯರನ್ನು ಆಹುತಿ ಮಾಡಿಕೊಂಡಿತು. ಇದರ ಮಧ್ಯೇ ಅಲ್ಲಲ್ಲಿ ಸಿಡುಬುರೋಗವೂ ಹಾವಳಿ ಮಾಡುತ್ತಿತ್ತು. ಆದರೆ ಕರುಣಾಸಾಗರನಾದ ದೇವರ ದಯೆಯಿಂದ ರೋಗರುಜನೆ ಪರಿಹಾರವಾಗಿ ಸುಖವೂ ಕ್ಷೇಮವೂ ಉಂಟಾದದರಿಂದ ದೇವರ ಮಹೋಪಕಾರವನ್ನು ನಾವು ಹೃದಯಪೂರ್ವಕವಾಗಿ ಸ್ಮರಣೆ ಮಾಡ ತಕ್ಕದ್ದು. ಇದಲ್ಲದೆ ಈ ಊರಲ್ಲಿ ಭೂಕಂಪವು ಸಂಭವಿಸಿತು; ಆದರೆ ಜೀವಗಳಿಗಾಗಲಿ ಮನೆಮಾರಿಗೆ ಆಗಲಿ ಅದರಿಂದ ನಷ್ಟವು ಉಂಟಾಗಲಿಲ್ಲಾ. ಈ ಪ್ರಕಾರದ ಸಂಭವಗಳಿಂದ ದೇವರು ನಮ್ಮನ್ನು ಎಚ್ಚರಿಸಿ ನಾವು ತನ್ನನ್ನು ತಾನು ಈ ಲೋಕಕ್ಕೆ ಕಳುಹಿಸಿದ ಯೇಸು ಕ್ರಿಸ್ತನನ್ನು ತಿಳಿದು ತನ್ನ ವಾಕ್ಯವನ್ನು ನಂಬಿ ಪರಲೋಕವನ್ನು ಹಂಬಲಿಸುವಂತೆ ಬೋಧಿಸುತ್ತಾನೆಂದು ತಿಳಿಯ ಬೇಕು. ಕೊಚ್ಚಿಯಲ್ಲಿ ಹೊಳೆಯಲಿದ್ದ ನಗಕ್ಕೆ ಬೆಂಕಿ ಹಿಡಿದು ಅದರಿಂದ ಕರೆಯಲ್ಲಿರುವ ಮನೆಗಳಿಗೂ ಹಬ್ಬಿ ಅನೇಕ ಮನೆಗಳೂ ಕೆಲವು ಭಂಡಸಾಲೆಗಳೂ ಸುಟ್ಟು ಹೋಗಿ ಹೆಚ್ಚುಕಡಿಮೆ ಇಪ್ಪತ್ತನಾಲ್ಕು ಲಕ್ಷ ರೂಪಾಯಿ ಸೊತ್ತು ನಷ್ಟವಾಯಿತು. ಸೂರತ ಪಟ್ಟಣದಲ್ಲಿಯೂ ಬೆಂಕಿಯ ಪ್ರಾಬಲ್ಯದಿಂದ ಹೇರಳ ಹಾವಳಿಯು ಸಂಭವಿಸಿತು. ಗಂಜಾಮು ಜಿಲ್ಲೆಯಲ್ಲಿ ಕ್ಷಾಮಕಾಲವು ತಲೆದೋರಿ ಹೊಟ್ಟೆಗಿಲ್ಲದೆ ಬಳಲುವ ಬಡಬಗ್ಗರು ಪುಂಡಾಟ ಮಾಡುವವರಾದದರಿಂದ ಸರಕಾರದವರು ಹೆಚ್ಚು ಪೋಲೀಸು ಶಿಪಾಯರನ್ನಿಟ್ಟು ಬಂದೋಬಸ್ತು ಮಾಡಿಸಿದರು. ಮಳೆಯು ಕೊರತೆಯಿಂದ ಅಲ್ಲಿಯೂ ಒರಿಸ್ಸ ಸೀಮೆಯಲ್ಲಿಯೂ ಅಹಮದನಗರ ಬೆಂಗಳೂರು ಮುಂತಾದ ಊರುಗಳಲ್ಲಿಯೂ ನೀರಿಗೆ ತತ್ವಾರವಾಗಿ ಕೆಲವು ಪ್ರಾಂತಗಳಲ್ಲಿ ಕುಡಿಯ ತಕ್ಕ ನೀರು ಸಹಾ ದುಡ್ಡು ಕೊಟ್ಟುಕೊಳ್ಳ ಬೇಕಾಯಿತು. ಜಗದ್ವಿಖ್ಯಾತೆಯಾದ ಪಂಡಿತೆ ರಮಾಬಾಯಿ ಅಮೇರಿಕಕ್ಕೆ ಹೋಗಿದ್ದವಳು ಅಲ್ಲಿ ಹಿಂದು ಸ್ತ್ರೀಯರಿಗಾಗಿ ದ್ರವ್ಯ ಸಂಗ್ರಹ ಮಾಡಿ ಮುಂಬಾಯಿಗೆ ಬಂದು ಬ್ರಾಹ್ಮಣವಿಧವೆಗಳ ಪ್ರಯೋಜನಕ್ಕಾಗಿ ವಿಶಾಲವಾದ ಶಾಲೆಯನ್ನು ಸ್ಥಾಪಿಸಿದ್ದಾಳೆ. ಕಡಿಮೆ ಜಾತಿಯ ವಿಧವೆಗಳನ್ನು ಸಹ ಸೇರಿಸಿಕೊಳ್ಳುತ್ತಾಳಂತೆ. ಅಲ್ಲಿ ಇವರಿಗೆಲ್ಲಾ ಸಂಸ್ಕೃತ ಗುಜರಾಥಿ ಮರಾಟಿ ಭಾಷೆಗಳನ್ನು ಸ್ತ್ರೀಯರಿಗೆ ವಿನೋದವಾಗಿರುವಷ್ಟಾ ಇತರ ವಿಷಯಗಳನ್ನು ಕಲಿಸಿಕೊಡುವದಕ್ಕೆ ಅನುಕೂಲ ಮಾಡಿದ್ದಾಳೆ. ಹಿಂದು ವಿಧವೆಗಳ ಅರಿಷ್ಠ ಅವಸ್ಥೆಯನ್ನು ಕಿಂಚಿತ್ತಾದರೂ ಸುಧಾರಿಸುವದಕ್ಕೆ ಈ ಸ್ತ್ರೀಯು ಮಾಡಿದ ಭಗೀರಥ ಪ್ರಯತ್ನವು ಸ್ತುತ್ಯವಾಗಿದೆ. ಆ ಶಾಲೆಯಲ್ಲಿ ಸೇರುವವರು ಲೌಕಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳುವದು ಮಾತ್ರವಲ್ಲದೆ ಒಬ್ಬನೇ ದೇವರಾಗಿರುವವನನ್ನು ಆತನು ಈ ಲೋಕಕ್ಕೆ ಕಳುಹಿಸಿದ ಯೇಸು ಕ್ರಿಸ್ತನನ್ನು ತಿಳುಕೊಂಡು ದೇವರ ರಾಜ್ಯದ ಪ್ರಜೆಗಳಾಗುವವರಾದರೆ ನಿಜವಾಗಿ ಧನ್ಯರೆಂದು ಹೇಳ ಬಹುದು. ಹಿಂದುಸ್ಥಾನದ ಉತ್ತರ ಪ್ರದೇಶದಲ್ಲಿ

ಸಿಕ್ಕಿಮು ಎಂಬುವಲ್ಲಿ ಕಾಡಾಡಿ ಜಾತಿಗಳವರು ದಾಂದಲೆ ಎಬ್ಬಿಸಿ ಯುದ್ಧಕ್ಕೆ ಬರುವವರಾದ್ದರಿಂದ ಉಪರಾಜ ಧೊರೆಗಳವರು ಸೈನ್ಯವನ್ನು ಕಳುಹಿಸಿ ಆ ತಂಟೆಗಾರರನ್ನು ಶಿಕ್ಷಿಸಿ ಸೊಕ್ಕು ಮುರಿಸಿದರು.

ಅಫಘಾನಿಸ್ಥಾನವನ್ನು ಹ್ಯಾಗೂ ಕಟ್ಟಿಕೊಳ್ಳ ಬೇಕೆಂದು ರುಸ್ಯರು ಅದರ ಮೇಲೆ ದೃಷ್ಟಿ ಇಟ್ಟಿದ್ದಾರೆ. ಕಾಬೂಲಿನ ಅಮೀರನು ಸೀಮೆಯಲ್ಲಿ ಕಾಟಕಾಯಿ ಮಾಡಿದ ಪುಂಡುಗಾರರನ್ನು ಹಿಡಿಯುವ ಬಗ್ಯೆ ಸೈನ್ಯ ಸಮೇತ ಸೀಮೆಯ ಯಲ್ಲೇ ಕಟ್ಟನ ವರೆಗೆ ಹೋದಾಗ್ಯೆ ಅಮೀರನು ಸೀಮೆಯನ್ನು ದಾಟಿ ಬೊಖಾರ ದೇಶವನ್ನು ಸ್ವಾಧೀನ ಮಾಡಿಕೊಳ್ಳುವದಕ್ಕೆ ಹೊರಟಿದ್ದಾನೆಂದು ರುಸ್ಯರು ಅಪ್ಪೋಹ ತಂದು ಯುದ್ಧಕ್ಕೆ ಸನ್ನಾಹ ಮಾಡುವವರಾದರು. ಆದರೆ ಅಮೀರನು ಇಂಗ್ಲಿಷರ ಆಶ್ರಿತನಾಗಿರುವದರಿಂದ ರುಸ್ಯರು ತಮ್ಮ ಹುಮ್ಮಸ್ಸನ್ನು ಸಾಧಿಸುವದು ಅಸದಳವಾಗಿದೆ.

ಅರ್ಮಿನ್ಯದಲ್ಲಿ ಖುರ್ದರು ಎಂಬುವ ಕಿರಾತ ಜಾತಿಯವರು, ಎಡಬಲದಲ್ಲಿರುವ ಊರುಗಳ ಮೇಲೆ ಬಿದ್ದು ಸುಲಿದು ಜೀವನ ಮಾಡುವ ಕೊಳ್ಳೆಗಾರರಿದ್ದಾರೆ. ಇವರು ಒಂದು ಗ್ರಾಮದ ಮೇಲೆ ಬಿದ್ದು ಅನಾಹುತ ನಡಿಸಲು ಗ್ರಾಮಸ್ಥರು ಕೂಡಿ ಇಸ್ತಂಬೂಲಿಗೆ ಹೋಗಿ ಸುಲ್ತಾನರ ಮುಂದೆ ಅರಿಕೆ ಮಾಡಿಕೊಂಡು ತಾವು ಖುರ್ದರನ್ನು ನಿಗ್ರಹಿಸಿ ಪ್ರಜೆಗಳನ್ನು ಸಂರಕ್ಷಣೆ ಮಾಡದೆ ಹೋದರೆ ನಾವು ರುಸ್ಯರನ್ನು ಸಹಾಯಕ್ಕೆ ಕರೆಯುತ್ತೇವೆಂದು ಹೇಳಿದರು, ಆದದರಿಂದ ಸುಲ್ತಾನರು ಈ ಬಿನ್ನಹವನ್ನು ಅವಶ್ಯ ವಿಚಾರಣೆ ಮಾಡ ಬೇಕಾಯಿತು.

ಆಫ್ರಿಕದ ಪೂರ್ವ ಪ್ರದೇಶದಲ್ಲಿ ಅರಬಿಗಳು ಹಬಸಿ ಜನರನ್ನು ಕೈಸೆರೆ ಹಿಡಿದು ಪರ ಊರುಗಳಿಗೆ ವೈದು ಮಾರಾಟ ಮಾಡುವ ದುರ್ವ್ಯಾಪಾರವನ್ನು ನಿಲ್ಲಿಸ ಬೇಕು, ಕೋವಿ ಮದ್ದು ಗುಂಡು ಮೊದಲಾದ ರಸ್ತು ಆ ಪ್ರದೇಶಕ್ಕೆ ಸಾಗದ ಹಾಗೆ ಭದ್ರ ಮಾಡ ಬೇಕೆಂಬುವದಕ್ಕೆ ಜರ್ಮನ ಇಂಗ್ಲಿಷ ಪೊರ್ತುಗಿಸ ಇತಲಿ ಸರಕಾರದವರು ಯುದ್ಧನಾವೆಗಳನ್ನು ಕಾವಲಿಗಿಡ ಬೇಕೆಂದು ಆಲೋಚಿಸಿದ್ದಾರೆ. ಇದರಿಂದ ಆ ಬಡ ಹಬಸಿ ಜನರಿಗೆ ಸುಕಾಲ ಒದಗಿದಂತೆ ಆಗುವದು. ದಾಸರ ವ್ಯಾಪಾರಕ್ಕೆ ತಮಗೆ ಅಟಕು ಮಾಡುವವರೇ ಮಿಶ್ಯನೆರಿಗಳು ಎಂದು ಅರಬಿಗಳು ಭಾವಿಸಿ ಅಲ್ಲಿಯ ಜರ್ಮನ ಮಿಶ್ಯನಿನ ನೆಲೆಯನ್ನು ಹಾಳು ಮಾಡಿ ಕೆಲವು ಮಿಶ್ಯನೆರಿಗಳನ್ನು ಕೊಂದು ಹಾಕಿದರು. ಮಿಸ್ರ ದೇಶದ ಅರಸನ ಮೇಲೆ ದಂಗೆ ಮಾಡಿದ್ದ ಮಹದಿ ಎಂಬುವನು ಪೂರ್ಣ ಅಪಜಯಗೊಂಡು ಖಾರ್ತುಮಿಗೆ ಪಲಾಯನ ಮಾಡಿದನು; ಮಿಸರಿ ಸಿಪಾಯರು ಅಲ್ಲಿ ವರೆಗೆ ಅವನನ್ನು ಬೆನ್ನಟ್ಟಿ ಪಟ್ಟಣವನ್ನು ಹಿಡಿದಿದ್ದಾರೆ. ಅಬಿಸೀನ್ಯದ ಅರಸನು ಮರಣ ಪಟ್ಟದ್ದರಿಂದ ಇತಾಲಿಯರಿಗೂ ಅವನಿಗೂ ನಡಿಯುತ್ತಿದ್ದ ಯುದ್ಧವು ನಿಂತೀತೆಂದು ತೋರುತ್ತದೆ. ಆಫ್ರಿಕದ ತೆಂಕಣ ಪ್ರದೇಶದಲ್ಲಿ ಇಂಗ್ಲಿಷರ ಮೇಲೆ ಕಾಟಕಾಯಿ ಮಾಡಿದ ಇಬ್ಬರು ಕಾಫರಿ ಪಾಳ್ಯಗಾರರನ್ನು ಸರಕಾರದವರು ಹಿಡಿದು ಸೆರೆಯಲ್ಲಿಟ್ಟಿದ್ದಾರೆ.

ಇಂಗ್ಲಾಂಡು. ಶ್ರೀಮನ್ಮಹಾರಾಣಿ ಚಕ್ರವರ್ತಿನಿಯವರು ತಮ್ಮ ಆಳಿಕೆಯ ಐವತ್ತನೆ ವರ್ಷದ ನೆನಸಿಗಾಗಿ ಲಂಡನ ಪಟ್ಟಣದಲ್ಲಿ ಮಹಾ ಸೌಧಾಗಾರವನ್ನು ಕಟ್ಟಿಸುವರೆ ಸನ್ನಾಹ ಮಾಡಿದ್ದಾರೆ. ಆ ಬಗ್ಯೆ ಹಿಂದುಸ್ಥಾನದಿಂದಲೂ ಶ್ರಿಮಂತರು

ದ್ರವ್ಯ ಸಹಾಯ ಮಾಡಿದ್ದಾರೆ. ಚಕ್ರವರ್ತಿನಿಯವರ ಚಿಕ್ಕ ತಾಯಮ್ಮನವರು ಅತಿ ವೃದ್ಧಾಪ್ಯದಲ್ಲಿ ೯೨ ವರ್ಷ ಪ್ರಾಯದಲ್ಲಿ ಮೃತ ಪಟ್ಟರು. ಮೊದಲು ಮದ್ರಾಸ ಸಂಸ್ಥಾನದ ಗವರ್ನರ ಧೊರೆಗಳಾಗಿದ್ದ ಬಕ್ಕಿಂಘಂ ಪ್ರಭುಗಳೂ ರಾಜಸಭೆಯ ಪ್ರಖ್ಯಾತ ಸಾಮಾಧಿಕರಾಗಿ ಹಿಂದುಸ್ಥಾನದವರ ಹಿತಚಿಂತಕರೂ ಸ್ನೇಹಿತರೂ ಆಗಿದ್ದ ಜಾನ ಬ್ರೈಟ್ ಧೊರೆಗಳೂ ತೀರಿ ಹೋದರು. ಪಾರ್ಲಿಮೆಂಟ ಸಭೆಯ ಸದಸ್ಯರಾದ ಐರ್ಲಾಂಡಿನ ಪ್ರತಿನಿಧಿಗಳ ಮೇಲೆ ವಿಶೇಷವಾದ ವ್ಯವಹಾರ ನಡೆಯಿತು. ಅದು ಹ್ಯಾಗಂದರೆ: ಈ ಐರ್ಲಾಂಡಿನ ಪ್ರತಿನಿಧಿಗಳು ಸರಕಾರಕ್ಕೆ ವಿರೋಧವಾಗಿ ಕೂಡುಕಟ್ಟು ಮಾಡಿದ್ದಾರೆಂತಲೂ ಕೆಲವು ಹುದ್ದೆದಾರರನ್ನು ಕೊಲ್ಲಿಸುವರೆ ನೆರೆವಿ ಮಾಡಿದ್ದಾರೆಂತಲೂ ಒಂದು ಪತ್ರದಲ್ಲಿ ಪ್ರಸಿದ್ಧ ಮಾಡಿ ಇತ್ತು. ಇದಕ್ಕೆ ಐರ್ಲಾಂಡಿನ ಪ್ರತಿನಿಧಿಗಳು ಎದುರು ಮಾತಾಡದೆ ಇದ್ದದರಿಂದ ಮೌನಮರ್ಧಾಂಗೀಕಾರಂ ಎಂಬ ವಾಕ್ಯದಂತೆ ಆ ಅಪರಾಧ ತಾವು ಮಾಡಿರುವದರಿಂದಲೇ ಸುಮ್ಮನಿದ್ದಾರೆಂದು ಪತ್ರಕರ್ತನು ಗದ್ದಲ ಮಾಡಿ ಸರಕಾರವು ಅವರ ಮೇಲೆ ವ್ಯವಹಾರ ನಡಿಸ ಬೇಕೆಂದು ಪ್ರತಿಪಾದಿಸಿದನು. ಹಾಗೆಯೇ ವ್ಯವಹಾರವು ಪ್ರಾರಂಭವಾಗಿ ಸಾಕ್ಷಿಗಳನ್ನು ಕರೆದು ವಿಚಾರಿಸುವಲ್ಲಿ ಪತ್ರದಲ್ಲಿ ಹೇಳಿದ್ದು ಸತ್ಯವಲ್ಲ, ಐರ್ಲಾಂಡಿನ ಪ್ರತಿನಿಧಿಗಳು ನಿರ್ದೋಷಿಗಳು ಎಂತ ಸಿದ್ಧಾಂತವಾಯಿತು. ಇದರಿಂದ ಗಜೇಟಿನ ಕರ್ತನಿಗೆ ಹಣ ನಷ್ಟವೂ ಮಾನನಷ್ಟವೂ ಮಾತ್ರವೇ ಸಂಭವಿಸಿತು. ಸ್ಕೊತ್ಲಂಡಿನವರಿಗೆ ತಮ್ಮ ರಾಜ್ಯದ ಕಾರ್ಯಗಳನ್ನು ತಾವೇ ನಡಿಸುವದಕ್ಕೆ ಸ್ವತಂತ್ರವಿರ ಬೇಕೆಂಬುವ ಸಂಗತಿಯನ್ನು ರಾಜಸಭೆಯಲ್ಲಿ ಚರ್ಚೆ ಮಾಡುತ್ತಾರೆ. ಹೀಗೆ ಆದರೆ ರಾಜ್ಯದ ಬಲಕ್ಕೆ ಕುಂದು ಬಂದೀತು ಎಂಬುವದರಿಂದ ಭೂರಿಪಕ್ಷದವರು ಈ ಚರ್ಚೆಯಲ್ಲಿ ಸೇರಲಿಲ್ಲಾ.

ಯುರೋಪು. ಜರ್ಮನಿಯ ಎರಡನೆ ವಿಲ್ಲಿಯಮರೆಂಬ ನವೀನ ಚಕ್ರವರ್ತಿಯವರ ಚಿತ್ರವು ಪಂಚಾಂಗದ ಮೊದಲನೇ ಪಾನಿನಲ್ಲಿ ಅದೆ. ಇವರು ಪಟ್ಟಕ್ಕೆ ಬಂದನಂತರ ಆಸ್ಟ್ರಿಯ ರುಸ್ಯ ಇತಲಿ ದೇಶಗಳ ಕಿರೀಟಪತಿಗಳ ಸಂದರ್ಶನಾರ್ಥವಾಗಿ ಪಯಣ ಮಾಡಿದರು. ಇತಲಿಯಲ್ಲಿ ಪೋಪನು ತನಗೆ ಮೊದಲಿದ್ದಂಥಾ ಸೀಮೆಯ ಅಧಿಕಾರವನ್ನು ತಿರಿಗಿ ತನಗೆ ಕೊಡಿಸುವಂತೆ ಸಹಾಯ ಮಾಡ ಬೇಕೆಂದು ವಿಲ್ಲಿಯಮ್ ಚಕ್ರವರ್ತಿಯನ್ನು ಕೇಳಿದ್ದಕ್ಕೆ ಆ ಮಾತನ್ನು ಅವರು ಮನಸ್ಸಿಗೆ ತರಲಿಲ್ಲಾ. ಚಕ್ರವರ್ತಿಯವರು ಇಂಗ್ಲಾಂಡಿಗೆ ಹೋಗಿ ಶ್ರೀಮನ್ ಮಹಾರಾಣಿ ಚಕ್ರವರ್ತಿನಿಯವರ ಸಂದರ್ಶನ ಮಾಡ ಬೇಕೆಂದು ಮನಸ್ಸು ಮಾಡಿದ್ದಾರೆ. ಈ ಭೇಟಿಯಿಂದ ಜರ್ಮನ ಇಂಗ್ಲಿಷ ಅರಸುತನಗಳಿಗೆ ಹೆಚ್ಚು ಸಖ್ಯವೂ ಐಕ್ಯವೂ ಉಂಟಾಗುವದು. ಬಿಸ್ಮಾರ್ಕರೆಂಬ ಜರ್ಮನ ಮಂತ್ರಿಯು ವೃದ್ಧಾಪ್ಯದಲ್ಲಿದ್ದಾಗ್ಯೂ ರಾಜಕಾರ್ಯದಲ್ಲಿ ತತ್ಪರರಾಗಿ ಯುರೋಪಿನಲ್ಲಿ ಸಮಾಧಾನವು ನೆಲೆಗೊಂಡಿರುವಂತೆ ಪ್ರಯತ್ನ ಮಾಡುತ್ತಿದ್ದಾರೆ. ಮೋಲ್ಟೆ ಎಂಬ ಸರ್ವಸೇನಾಧಿಪತಿಯು ವೃದ್ಧಾಪ್ಯದಿಂದ ಕೆಲಸ ನಡಿಸಲಾರದೆ ರಾಜಿನಾಮೆ ಕೊಟ್ಟನು.–ಆಸ್ಟ್ರಿಯ ದೇಶದ ಚಕ್ರವರ್ತಿಯ ಒಬ್ಬನೇ ಕುಮಾರನಾದ ಯುವರಾಜನು ಅವಶಾತ್ತಾಗಿ ಉಂಟಾದ ಚಿತ್ತ ಭ್ರಮೆಯಿಂದ ಆತ್ಮಹತ್ಯ ಮಾಡಿಕೊಂಡನು. ಹೊಲ್ಲಂಡ ದೇಶದ ಅರಸನು ರೋಗದಲ್ಲಿ ಬಿದ್ದು ಗುಣವಾದಾನೆಂಬುವ ಕೋರಿಕೆ ಇಲ್ಲದೆ ಹೋದದರಿಂದ ಚಿಕ್ಕ ಹುಡುಗನಾದ ಯುವರಾಜನು ಪ್ರಾಯಸ್ಥನಾಗುವ ವರೆಗೆ ರಾಣಿಯೂ ಮಂತ್ರಿಗಳೂ ರಾಜ್ಯಭಾರ

ಮಾಡ ಬೇಕೆಂದು ನೇಮಕವಾಯಿತು. ಆದರೆ ಹೊಲ್ಲಂದದ ಅರಸುತನಕ್ಕೆ ಲುಕ್ಸೆಂ ಬೆರ್ಗ ಎಂಬುವ ಸೀಮೆಯೂ ಒಳಿತವಾಗಿದೆ. ಅಲ್ಲಿ ಹೆಂಗಸರು ಆಳ ಬಾರದೆಂದು ಕಟ್ಟು ಇರುವದರಿಂದ ಆ ಸೀಮೆಗೆ ಹೊಸ ಪ್ರಭುವನ್ನು ಅರಸನನ್ನಾಗಿ ಮಾಡಿದರು. ಇವನು ಹರ್ಷಗೊಂಡು ಆಳುವವನಾಗಲು, ಸ್ವಲ್ಪ ಕಾಲದಲ್ಲಿಯೇ ಹೊಲ್ಲಂದದ ಅರಸನು ಪೂರ್ಣ ಕ್ಷೇಮವಂತನಾದದರಿಂದ ಹೊಸ ಅರಸನು ಪಟ್ಟ ಬಿಟ್ಟು ಮನೆಗೆ ತೆರಳುವವನಾದನು.—ಹಿಂದುಸ್ಥಾನದ ಉಪರಾಜರಾಗಿದ್ದ ಡಫರಿನ ಪ್ರಭುಗಳು ಈಗ ಇತಲಿಯಲ್ಲಿ ರಾಯಭಾರಿಗಳಾಗಿದ್ದಾರೆ. ಇತಲಿ ಅರಸನು ಅವರಿಗೆ ಭೇಟಿ ಕೊಡುವಾಗ್ಯೆ ತಮ್ಮನ್ನು ಇಲ್ಲಿಗೆ ರಾಯಭಾರಿಯಾಗಿ ನೇಮಿಸಿದ್ದು ಇತಲಿಗೂ ಇಂಗ್ಲಾಂಡಿಗೂ ಇರತಕ್ಕ ಅನ್ಯೋನ್ಯಕ್ಕೆ ಹೊಸದಾದ ಗುರುತು ಎಂದು ಹೇಳಿದರು.—ಫ್ರೆಂಚ ರಾಜ್ಯದ ಪ್ರಧಾನಪುರವಾದ ಪರೀಸ ಪಟ್ಣದಲ್ಲಿ ಸರಕಾರದವರು ಲೋಕಸಂತೆಯನ್ನು ನೆರಸಿದ್ದಾರೆ. ಭೂಮಂಡಲದಲ್ಲಿ ಹುಟ್ಟುವ ಚಿತ್ರವಿಚಿತ್ರ ಪದಾರ್ಥಗಳು ಯಾವತ್ತೂ ಅಲ್ಲಿ ನೇರ್ಪು ಮಾಡಿಟ್ಟವೆ. ಇದಕ್ಕೆ ಮುಹೂರ್ತ ಮಾಡುವಂದು ದೇಶಾಧಿಪತಿ ಉಪನ್ಯಾಸ ಮಾಡುವಾಗ್ಯೆ ಎಲ್ಲಾ ಜನಾಂಗಗಳೂ ಸಮಾಧಾನದ ಕೃತ್ಯಗಳಿಗೆ ಉದ್ಯಮ ಗೈಯುವ ಕಾಲವು ಹತ್ತರ ಬಂದದೆ ಎಂದು ಹೇಳಿದನು. ಆದರೆ ಸಮಾಧಾನದ ಕೃತ್ಯಗಳನ್ನು ನಿತ್ಯವೂ ವಿರೋಧಿಸಿ ನಿಷ್ಫಲ ಮಾಡುತ್ತಾ ಬರುವವರು ಫ್ರೆಂಚರೇ. ಮೇಲೆ ಹೇಳಿದ ಮಹಾ ಸಂತೆಗಾಗಿ ಪರೀಸ ಪಟ್ಣದಲ್ಲಿ ಚತುರನಾದ ಶಿಲ್ಪಶಾಸ್ತ್ರಜ್ಞನು ಕಬ್ಬಿಣದಿಂದಲೇ ಸಾವಿರ ಅಡಿಗಳು ಎತ್ತರವಾದ ಗೋಪುರವನ್ನು ಕಟ್ಟಿದ್ದಾನೆ. ಅದರ ತುಟ್ಟ ತುದಿಗೆ ಒಂದೇ ತಾಸಿನಲ್ಲಿ ಏಳ್ನೂರು ಮಂದಿ ಹತ್ತ ಬಹುದು. ಏರುವದಕ್ಕೆ ಏಣಿ ಇಲ್ಲಾ. ಒಂದು ಯಂತ್ರದಿಂದ ಜನರನ್ನು ಕ್ಷಣ ಮಾತ್ರದಲ್ಲಿ ಮೇಲೇರಿಸುತ್ತಾರೆ. ಫ್ರೆಂಚ ದೇಶದ ಅಂತಸ್ಥಿತಿಯು ಗಲಿಬಿಲಿಯಿಂದ ತುಂಬಿಯದೆಂದು ತೋರುತ್ತದೆ. ಮಹಾ ಗರ್ವಿಯಾಗಿ ಕಾಟಕಾಯಿ ಮಾಡಿ ದೇಶಾಧಿಪತಿಯಾಗ ಬೇಕೆಂದು ಸಾಹಸ ಗೈಯುತ್ತಿದ್ದ ಬುಲಾಂಶೆ ಎಂಬವನನ್ನು ಸರಕಾರದವರು ಹಿಡಿಸಿ ವಿಚಾರಿಸ ಬೇಕೆಂದಿರಲು ಅವನು ಬೆಲ್ಗಿಯಕ್ಕೆ ಪಲಾಯನ ಮಾಡಿದನು. ಈ ದುರಹಂಕಾರಿಯು ತಮ್ಮಲ್ಲಿದ್ದರೆ ತಾವು ಫ್ರೆಂಚರ ಅವಚಿತ್ತಕ್ಕೆ ಒಳಗಾದೇವೆಂದು ಬೆಲ್ಗಿಯದವರು ಅವನನ್ನು ಹಿಡಿದು ಫ್ರೆಂಚರಿಗೆ ಒಪ್ಪಿಸ ಬೇಕೆಂದಿರುವಲ್ಲಿ ಅವನು ನೆಟ್ಟಗೆ ಇಂಗ್ಲಾಂಡಿಗೆ ಪಲಾಯನ ಮಾಡಿದನು.

ರುಸ್ಯ ಸಾಮ್ರಾಜ್ಯದಲ್ಲಿ ರಾಜದ್ರೋಹಗಳು ಪುನಃ ತಮ್ಮ ದುಷ್ಕೃತ್ಯಗಳನ್ನು ಗುಪ್ತದಲ್ಲಿ ಮಾಡಲೆಸಗಿದ್ದಾರೆ. ಈ ಮಹಾರಾಜ್ಯದ ಕೆಲವು ದಿಕ್ಕುಗಳಲ್ಲಿ ಅನ್ಯಾಯ ನಡಿಯುವದಲ್ಲದೆ ಚಕ್ರವರ್ತಿಯೂ ಕೂಡ ತಮ್ಮ ಸಭೆಯ ಸಂಪರ್ಕಕ್ಕೆ ಸೇರದ ಇತರ ಕ್ರೈಸ್ತರನ್ನು ಉಪಟಳ ಪಡಿಸುತ್ತಾರೆ. ಇಂಥಾ ಸಂಗತಿ ನಡಿಯುವಷ್ಟಕ್ಕೆ ದೇವರ ಅನುಗ್ರಹವನ್ನು ಪ್ರಜೆಗಳ ಸ್ವಾಮಿಭಕ್ತಿಯನ್ನು ಪಡಿಯುವರೆ ಅನುಕೂಲವಿಲ್ಲಾ. ಸಾಮ್ರಾಜ್ಯದ ಮಧ್ಯ ಪ್ರದೇಶದಲ್ಲಿ ಬರಗಾಲದಿಂದ ಜನರು ಧಾವತಿ ಪಡುತ್ತಾರೆ. ರುಸ್ಯ ಮಹಾರಾಜರು ಜರ್ಮನಿ ಮಹಾರಾಜರನ್ನು ಭೇಟಿಯಾಗುವದಕ್ಕೆ ತೆರಳ ಬೇಕೆಂದು ಆಲೋಚನೆಯಲ್ಲಿದ್ದಾರೆ.—ಬುಲ್ಗಾರ್ಯ ಸೀಮೆಯ ಪ್ರಜೆಗಳು ತಾವೇ ಆರಿಸಿಕೊಂಡ ಅರಸನಾದ ಫೆರ್ದಿನಾಂದ ಎಂಬವನು ರುಸ್ಯರಿಗೆ ಅಪ್ರಿಯ

ನಾದ ಕಾರಣ ಮೊದಲು ಅರಸುತನ ನೋಡಿದ ಅಲೆಕ್ಸಂದ್ರನನ್ನೇ ಪಟ್ಟದಲ್ಲಿ ಕುಳ್ಳಿರಿಸಿ ಆ ಪೆರ್ದಿನಾಂದನನ್ನು ಕಳುಹಿಸಿ ಬಿಡಬೇಕೆಂದು ರುಸ್ಯರು ತಗಾದೆ ಮಾಡುತ್ತಾರೆ. ಈ ಅಲೆಕ್ಸಂದ್ರನೂ ರುಸ್ಯದ ಬಲಾತ್ಕಾರದಿಂದಲೇ ಪಟ್ಟ ಬಿಟ್ಟು ಹೋಗಿದ್ದನು.

ಚೀನ ದೇಶದವರು ಬಹುಶಃ ಪರಜನಾಂಗ ಪರಧರ್ಮಗಳ ದ್ವೇಷಿಗಳಾಗಿದ್ದಾರೆ. ಈ ದ್ವೇಷವೆಂಬ ಅಮಲೇರಿ ಅವರು ಆಗಾಗ್ಯೆ ಯುರೋಪೀಯರನ್ನೂ ದೇಶಸ್ಥ ಕ್ರೈಸ್ತರನ್ನೂ ಹಿಂಸಿಸುವರು. ಚಿಂಕಿಯಂಗ್ ಎಂಬ ಸೀಮೆಯಲ್ಲಿ ಚೀನಿಯರು ದೊಂಬಿ ಮಾಡಿ ಇಂಗ್ಲಿಷರ ಕಡೆಯ ವಕೀಲನ ಮನೆಯನ್ನೂ ಇನ್ನೂ ಕೆಲವು ಮನೆಗಳನ್ನೂ ಸುಟ್ಟು ಬಿಟ್ಟು ಅನಾಹುತ ನಡಿಸಿದರು. ಚೀನಿ ಚಕ್ರವರ್ತಿಯು ವಿವಾಹವಾದನು. ಈ ಶುಭಕಾರ್ಯಕ್ಕೆ ಮೂವತ್ತು ಲಕ್ಷ ರೂಪಾಯಿ ಖರ್ಚು ಮುಟ್ಟಿತು.

ಜಾಪಾನ ರಾಜ್ಯದಲ್ಲಿ ಯಾವತ್ತೂ ಸರಕಾರ ಶಾಲೆಗಳಲ್ಲಿ ಹೊಸಒಡಂಬಡಿಕೆಯ ಪುಸ್ತಕವನ್ನು ಓದಿಸ ಬೇಕೆಂದು ರಾಜಾಜ್ಞೆಯಾಗಿದೆ. ಆದಿತ್ಯವಾರದಲ್ಲಿ ಉದ್ದಿಮೆ ಕೆಲಸಗಳನ್ನು ಬಿಟ್ಟು ವಿಶ್ರಮವಾಗಿರ ಬೇಕೆಂಬ ಕ್ರಮವು ಬರಬರುತ್ತಾ ನೆಲೆಗೊಳ್ಳುತ್ತದೆ. ಸೀಮೆಯಲ್ಲಿರುವ ಒಂದು ಜ್ವಾಲಾಮುಖಿ ಪರ್ವತವು ಬೆಂಕಿಯನ್ನೂ ಬೂದಿಯನ್ನೂ ಕರಗಿದ ಶಿಲಾರಸವನ್ನೂ ಕಾರಿದ್ದರಿಂದ ಪಾರ್ಶ್ವಾಂತರದಲ್ಲಿರುವ ನಿವಾಸಿಗಳ ಹಾನಿಗೆ ಕಾರಣವಾಯಿತು.

ಅಮೇರಿಕದ ಸಂಯುಕ್ತ ಸಂಸ್ಥಾನದವರು ಸ್ವತಂತ್ರವಾದ ರಾಜ್ಯಭಾರವನ್ನು ಪ್ರಾರಂಭಿಸಿ ಮೊದಲನೇ ಪ್ರಜಾಧಿಪತಿಯನ್ನು ಜನರ ಆಯಿಕೆಯಿಂದ ನೇಮಿಸಿಕೊಂಡಂದಿನಿಂದ ನೂರು ವರ್ಷಗಳು ಗತಿಸಿ ಹೋದವು. ಆದದರಿಂದ ಇದರ ಜ್ಞಾಪಕಾರ್ಥವಾಗಿ ದೇಶದಲ್ಲೆಲ್ಲಾ ಮೂರು ದಿವಸಗಳು ವಿಶೇಷವಾದ ಉತ್ಸವವಿತ್ತು. ಸದ್ಯಾ ಶೀಮೆಯ ಮೇಲೆ ಆಳುವ ಅಧಿಪತಿಯಾದ ಹರಿಸನ್ ಎಂಬವನು ದೇವಭಕ್ತಿಯುಳ್ಳ ಮನುಷ್ಯನಾಗಿದ್ದಾನೆ. ಅವನ ಆಳಿಕೆಯಿಂದ ದೇಶಕ್ಕೆ ಭಾಗ್ಯೋದಯವಾಗಿದೆಂದು ಹೇಳ ಬಹುದು. ಅಮೇರಿಕ ಸರಕಾರದವರು ಕೊಲೆಪಾತಕಿಗಳಿಗೆ ಫಾಶಿಗೆ ಹಾಕಿ ದೇಹಾಂತ ಶಿಕ್ಷೆ ನಡಿಸುವ ಪದ್ಧತಿಯನ್ನು ಬಿಟ್ಟು ವಿದ್ಯುಲ್ಲತೆಯ ಪ್ರಯೋಗದಿಂದ ಜೀವವರಿಸೆ ಕೊಲ್ಲುವ ಹೊಸ ಕ್ರಮವನ್ನು ಏರ್ಪಡಿಸಿದ್ದಾರೆ. ಇದರಿಂದ ಮರಣವು ಕೂಡಲೇ ಸಂಭವಿಸುವದಲ್ಲದೆ ನೋವೂ ಕಡಿಮೆಯಾಗಿರುವದಂತೆ.

ನೂರು ವರ್ಷಗಳ ಹಿಂದೆ ಈ ಭೂಮಿಯಲ್ಲಿ ಒಟ್ಟು ೭೩ ಕೋಟಿ ೧೦ ಲಕ್ಷ ನಿವಾಸಿಗಳೂ ಅವರಲ್ಲಿ ೧೭ ಕೋಟಿಯೂ ೪೦ ಲಕ್ಷವು ಕ್ರೈಸ್ತರೂ ಇದ್ದರು; ಈಗ ನಿವಾಸಿಗಳ ಸಂಖ್ಯೆ ಇಮ್ಮಡಿಯೂ ಕ್ರೈಸ್ತರ ಸಂಖ್ಯೆ ಮುಮ್ಮಡಿಯೂ ಆಗಿ ಹೆಚ್ಚಿಯದೆ.

ನ್ಯಾಯಾಧೀಶನ ಪರೀಕ್ಷೆ.

ಹೆಚ್ಚುಕಡಿಮೆ ಐನೂರು ವರ್ಷಗಳ ಹಿಂದೆ ಸ್ಪೇನ ದೇಶದಲ್ಲಿ ಪೇತರನೆಂಬ ಮಹಾಚತುರನಾದ ಅರಸನಿದ್ದನು. ತನ್ನ ರಾಜ್ಯದಲ್ಲಿ ಮಹಾಮಹಾ ಉದ್ಯೋಗಗಳಿಗೆ ಅಧಿಕಾರಿಗಳನ್ನು ನೇಮಿಸ ಬೇಕಾದರೆ, ಅವನು ತಾನೇ ಅವರನ್ನು ಪರೀಕ್ಷೆ

ಮಾಡುವನು. ಒಮ್ಮೆ ಒಂದು ಸೀಮೆಯ ಮೇಲೆ ನ್ಯಾಯಾಧಿಪತಿಯನ್ನು ನೇಮಿಸ ಬೇಕಾದಾಗ ಆ ಉದ್ಯೋಗವನ್ನು ಕೊಡಿಸ ಬೇಕೆಂದು ಮೂವರು ಬಿನ್ನವತ್ತಳೆ ಮಾಡಿದ್ದರು. ಈ ಮೂವರನ್ನೂ ಪರೀಕ್ಷೆ ಮಾಡ ಬೇಕೆಂದು ಅರಸನು ಅವರಿಗೆ ಅರಮನೆಯ ಮುಂದಣ ಉದ್ಯಾನಕ್ಕೆ ಬರ ಬೇಕೆಂದು ಅಪ್ಪಣೆ ಮಾಡಿದನು. ಅಲ್ಲಿ ಅವರ ಸಂಗಡ ಸಂಭಾಷಣೆ ಮಾಡುತ್ತಾ ಅವರ ಬುದ್ಧಿ ಸಾಮರ್ಥ್ಯ ಅನುಭವ ಶಕ್ತಿ ಎಷ್ಟು ಎಂಬುವದನ್ನು ಅರಸನು ತಿಳುಕೊಂಡವನಾದನು. ಹೀಗೆ ಕೆಲವು ಹೊತ್ತು ಸಂವಾದ ನಡೆದ ಮೇಲೆ ಅರಸನು ಉದ್ಯಾನದ ಕೊಳದಲ್ಲಿ ಬಿದ್ದಿದ್ದ ಅರ್ಧ ಲಿಂಬೆಹಣ್ಣು ನೋಡಿ: ಕೊಳದಲ್ಲಿ ತೇಲುವ ಆ ಪದಾರ್ಥವು ಯಾವದು ಎಂತ ಕೇಳಿ ದನು. ಒಬ್ಬನು ಸಂಗಡಲೇ, ಅದು ಲಿಂಬೆಹಣ್ಣು ಅಂದನು. ಎರಡನೆಯವನು ಲಿಂಬೆಹಣ್ಣಿನ ಹೋಳು ಅಂದನು. ಮೂರನೆಯವನು ಮಾತಾಡದೆ ಸುಮ್ಮಗಿದ್ದದ್ದನ್ನು ಅರಸನು ಕಂಡು ಮತ್ತೊಮ್ಮೆ ಅವನನ್ನು ಕೇಳಲು, ಅವನು: ಸ್ವಲ್ಪ ತಾಳಿ ಎಂದು ಹೇಳಿ, ಕೊಳದ ಸೋಪಾನಕ್ಕಿಳಿದು ಕೈಯಲ್ಲಿದ್ದ ಕೋಲಿನಿಂದ ಆ ಹಣ್ಣನ್ನು ತಡಿಗೆ ತಂದು ಕೈಯ್ಯಲ್ಲಿ ಹಿಡಿದು ತಿರುಗಿಸಿ ನೋಡಿ ಪುನಃ ಕೊಳದಲ್ಲಿ ಬಿಸಾಟು ಬಂದು ಮಹಾಸ್ವಾಮಿ, ಅದು ಲಿಂಬೆಹಣ್ಣಿನ ಹೋಳು ಅಂದನು. ಅರಸನು ಮಹಾಸಂತೋಷ ಪಟ್ಟು: ನೀನು ಮಹಾ ವಿವೇಕವಂತನು; ಅಲ್ಪವಾದದ್ದರಲ್ಲಿ ಸತ್ಯವಂತನಾಗಿರುವ ವನು ಮಹತ್ತಾದ ಕಾರ್ಯಗಳಲ್ಲಿಯೂ ಸತ್ಯವಂತನಾಗಿರುವನು, ಎಂಬುವ ನೀತಿ ವಾಕ್ಯದ ಮೇಲೆ ನ್ಯಾಯಾಧಿಪತಿತ್ವವನ್ನು ನಿನಗೆ ಕೊಡಿಸುತ್ತೇವೆ: ಅದು ಲಿಂಬೆ ಹಣ್ಣೇ ಎಂದು ನಿನಗೆ ತೋರಿತು ಖರೆ, ಆದರೆ ಕಣ್ಣಾರೆ ಕಂಡರೂ ಪರಾಮರಿಸಿ ನೋಡ ಬೇಕೆಂಬ ಗಾದೆಯಂತೆ ಚನ್ನಾಗಿ ತಿಳಿಯದೆ ಅದು ಲಿಂಬೆಹಣ್ಣೆಂದು ಹೇಳುವ ದಕ್ಕೆ ಧೈರ್ಯ ಬರಲಿಲ್ಲಾ. ಆದದರಿಂದ ಯಾವದೊಂದು ವ್ಯವಹರಣೆಯಲ್ಲಿ ಎಷ್ಟು ಪರಿಶ್ರಮ ಬಂದರೂ ಪೂರ್ಣ ಸಾಕ್ಷಿ ನಿಶ್ಚಯ ಪಡಕೊಂಡ ಏನಹಾ ನೀನು ತೀರ್ಪು ಕೊಡುವವನಲ್ಲವೆಂದು ನನಗೆ ಭರವಸವುಂಟು. ಮನುಷ್ಯರೊಳಗುಂಟಾಗುವ ವ್ಯಾಜ್ಯಗಳನ್ನು ತೀರ್ಪು ಮಾಡುವಂಥಾ ಭಾರವತ್ತದ ಕೆಲಸವನ್ನು ವಹಿಸಿಕೊಳ್ಳುವ ವನು ಹಾಗೆ ಮಾಡುವದು ಯೋಗ್ಯವಾಗಿದೆ ಎಂದು ಅವನನ್ನು ಹೊಗಳಿದನು.

ಯಾವ ಸಂಗತಿಯಲ್ಲಾದರೂ ತನ್ನ ಅಭಿಪ್ರಾಯವನ್ನು ತಿಳಿಸುವ ಸಂದರ್ಭ ಬಂದರೆ ತನಗೆ ಆ ಸಂಗತಿಯ ವಿಷಯದಲ್ಲಿ ಸಾಕಷ್ಟು ತಿಳಿಯುವಿಕೆ ಉಂಟೋ ಇಲ್ಲವೋ ಎಂದು ಮಟ್ಟ ಮೊದಲು ವಿಚಾರಿಸಿಕೊಳ್ಳ ಬೇಕು.

ಅನ್ಯಾಯದ ಹಣವು.

ರುಸ್ಯ ದೇಶದಲ್ಲಿ ಹೆಚ್ಚಾಗಿ ಚಲಾವಣೆಯಾಗುವ ನಾಣ್ಯವು ರೂಬಲ್ ಎಂಬುವದು, ಅದರ ಮೌಲ್ಯ ಎರಡು ರೂಪಾಯಿ; ಇಂಥಾ ೨೦ ರೂಬಲು ಒಂದು ಇಂಪೀರಿಯಲು ಎಂಬ ಚಿನ್ನದ ನಾಣ್ಯ. ಮಹಾ ತಕ್ಕನಾದ ಒಬ್ಬ ರುಸ್ಯ ಸೀಪಾಯಿ ಮೊಸ್ಕೊವ ಪಟ್ಟಣದಲ್ಲಿ ಕೆಲ ಸಂಗಡಿಗರ ಸಂಗಡ ಮಾತಾಡುತ್ತಾ ಫಕ್ಕನೆ ಅವರಿಗೆ ಒಂದು ರೂಬಲು ತೋರಿಸಿ: ನನ್ನ ಸಂಗಡ ಯಾರು ಪಂಥ ಹಾಕುತ್ತೀರಿ? ನಾಳೆ

ನಾನು ಪೇಟೆಗೆ ಹೋಗಿ ಈ ರೂಬಲಿನಿಂದ ಇಂಪೀರಿಯಲನ್ನು ಸಂಪಾದಿಸುತ್ತೇನೆ ಅಂದನು. ಆವಾಗ ಒಬ್ಬನು ಅವನ ಸಂಗಡ ಪಂಥಕ್ಕೆ ನಿಂತನು. ಮೂರಣೆ ದಿವಸ ಪೇಟೆಯಲ್ಲಿ ಜನರ ಸಂದಣಿಯಾಗುವ ವೇಳೆಯಲ್ಲಿ ಸಿಪಾಯಿಯು ಬಂದು ಕೈಯಲ್ಲಿ ರೂಬಲು ಹಿಡಿದು ಒಂದೊಂದು ಅಂಗಡಿಯ ಮುಂದೆ ನಿಂತು ಈ ರೂಬಲು ನಿಮ್ಮದೋ ನಿಮ್ಮದೋ ಎಂತ ಕೇಳುತ್ತಾ ಹೋಗುವವನಾದನು. ಹೀಗೆ ಕೆಲವು ಅಂಗಡಿಗಳನ್ನು ದಾಟಿದಾಗ್ಯೂ ಒಬ್ಬರೂ ತನ್ನದು ಎಂದು ಹೇಳದೆ ಸುಮ್ಮನಿರಲು, ಒಬ್ಬ ಅಂಗಡಿಗಾರನು: ರೂಬಲು ನನ್ನದಲ್ಲಾ, ಆದರೆ ಸಿಪಾಯಿಗೆ ಅದು ಬೇಡವಾಗಿರುವದರಿಂದ ತಕ್ಕೊಳ್ಳಿ ಎಂದು ತಿರುಗಾಡುತ್ತಾನೆ. ನನ್ನದು ಎಂದು ಹೇಳಿ ನಾನು ತಕ್ಕೊಳ್ಳುತ್ತೇನೆ ಎಂದು ಮನಸ್ಸಿನಲ್ಲಿ ಯೋಚಿಸಿ ಅದು ನನ್ನದು ಅಂದನು. ಅದಕ್ಕೆ ಸಿಪಾಯಿ ನೀವು ಘಟ್ಟಿಯಾಗಿ ಮಾತಾಡದೆ ಇದ್ದರೆ ಈ ಜನರ ಸಂದಣಿಯಲ್ಲಿ ನಿಮ್ಮನ್ನು ಗುರುತು ಹಿಡಿಯುವದು ಕಷ್ಟವಾಗಿರುವದು ಎಂದು ಹೇಳಿ ರೂಬಲು ಅವನಿಗೆ ಕೊಡಲು ಅವನು ನೋಟ ನೋಡಿ ಚೀಲದೊಳಗೆ ಹಾಕಿದನು. ಆಗ ಸಿಪಾಯಿ ಈಗ ನನ್ನ ಇಂಪೀರಿಯಲು ಇತ್ತ ಕೊಡಿರಿ ಅನ್ನಲು, ಅಂಗಡಿಯವನು: ಇಂಪೀರಿಯಲೋ? ನನ್ನಿಂದ ನಿಮಗೆ ಒಂದು ಕಾಸೂ ಸಲ್ಲ ಬೇಡ; ನನ್ನ ಸಂಗಡ ಆಡಲಿಕ್ಕೆ ಬಂದಿರಾ? ನಿಮ್ಮ ರೂಬಲು ವೈಯಿರಿ ಅಂದನು. ಅದಕ್ಕೆ ಸಿಪಾಯಿ, ಇದು ಆಟವಲ್ಲಾ, ನನ್ನ ಚಿನ್ನದ ನಾಣ್ಯವನ್ನು ಈಗಲೇ ಕೊಡಿರಿ, ಇಲ್ಲವಾದರೆ ಪೋಲೀಸಿನವರಿಗೆ ತಿಳಿಸುತ್ತೇನೆ ಎಂದು ಒದರಲು ಒಬ್ಬ ಪೋಲಿಸ ಉದ್ಯೋಗಸ್ಥನೂ ಪೇದೆಯೂ ಅಲ್ಲಿಗೆ ಬಂದು ಏನು ಸಂಗತಿ ಎಂದು ವಿಚಾರಿಸುವವರಾದರು. ಅಂಗಡಿಗಾರನು ತಾನು ಏನೂ ಅರಿಯೆನೆಂದು ಹೇಳಿದನು. ಸಿಪಾಯಿ ಕಥೆ ಹೇಳಲಾರಂಭಿಸಿ: ತಾನು ಕಾಲು ತಾಸಿಗೆ ಮೊದಲು ಈ ಅಂಗಡಿಗೆ ಬಂದು ಏನಾದರೂ ಜೀನಸು ಕೊಳ್ಳುವದಕ್ಕೆ ಕಿಸೆಯಲ್ಲಿ ಹಣ ಉಂಟೋ ಎಂದು ನೋಡಿದೆ; ಕಿಸೆಯಲ್ಲಿ ಇಂಪೀರಿಯಲು ಮಾತ್ರ ಇದ್ದದರಿಂದ ಅದನ್ನು ವಟಾಯಿಸಲಿಕ್ಕೆ ಮನಸ್ಸು ಬಾರದೆ ಇವನಲ್ಲಿ ಅಡವಿಟ್ಟು ಒಂದು ರೂಬಲು ತಕ್ಕೊಂಡೆ; ಜೀನಸು ಕೊಂಡು ಆದ ಮೇಲೆ ತಿರಿಗಿ ಬರುವಾಗ ನನಗೆ ಅಂಗಡಿ ಸಿಕ್ಕಲಿಲ್ಲಾ. ಕಷ್ಟ ಪಟ್ಟು ಅಂಗಡಿಯಿಂದ ಅಂಗಡಿಗೆ ಹೋಗಿ ರೂಬಲು ತೋರಿಸಿದೆ; ನಾನು ನಿಮಗೆ ಒಂದು ರೂಬಲು ಕೊಡ ಬೇಕೋ? ಎಂದು ಕೇಳಿದೆ. ಇವನು ಅದನ್ನು ತಕ್ಕೊಂಡನು, ಆದರೆ ನನ್ನ ಇಂಪೀರಿಯಲು ಕೊಡಲೊಲ್ಲನು ಎಂದು ಹೇಳಿದನು. ಪೋಲೀಸಿನವರು ಎಡಬಲದಲ್ಲಿದ್ದವರನ್ನು ವಿಚಾರಿಸಲು ಸಿಪಾಯಿ ರೂಬಲ್ ತೋರಿಸಿದ್ದೂ ಅಂಗಡಿಯವನು ತಕ್ಕೊಂಡದ್ದೂ ಹೌದು ಎಂದು ಸಾಕ್ಷಿ ಹೇಳಿದರು. ಈ ಕಾರಣದಿಂದ ಅಂಗಡಿಯವನು ರೂಬಲಿನ ಆಶೆಗೆ ಹೋಗಿ ಇದ್ದದ್ದೂ ನಷ್ಟಪಟ್ಟು ಸಿಪಾಯಿಗೆ ಇಂಪೀರಿಯಲು ಕೊಡ ಬೇಕಾಯಿತು. ಸಿಪಾಯಿ ಮಾಡಿದ್ದು ಕೇವಲ ಲಂಡ ಕಾರ್ಯವು ಖರೆ; ಆದರೆ ಅಂಗಡಿಯವನಿಗೆ ನ್ಯಾಯವಾದ ಸಂಬಳ ಸಿಕ್ಕಿತು. ಆದ್ದರಿಂದ ಅನ್ಯಾಯದಿಂದ ಗಳಿಸಿದ ರೊಕ್ಕವು ಇದ್ದ ಆಸ್ತಿಯನ್ನೂ ನುಂಗಿ ಬಿಡುವದು ಎಂದು ತಿಳಿಯ ಬೇಕು.

ದಾಯೂದಸ್ಯ ಪ್ರಾರ್ಥನಾ.

ಪರಮೇಶ ಸ್ವಕೋಪೇನ ಭರ್ತ್ಸನಂ ಮಮ ಮಾ ಕುರು ।
ಸ್ವೀಯ ಪ್ರಚಂಡರೋಷೇಣ ದಂಡನಂ ನ ವಿಧೇಹಿ ಮೇ ॥ ೧ ॥

ಅನುಕಂಪಸ್ವ ಮಾವಿಶ ಸ್ವಕಾರುಣ್ಯಾನುರೂಪತಃ ।
ಸ್ವ ಕೃಪಾಯಾ ಮಹತ್ತ್ವಾತ್ತ್ವಂ ಮೇಪರಾಧಾಂಶ್ಚ ದೂರಯ ॥ ೨ ॥

ನಿಃಶೇಷಂ ಕ್ಷಾಲನಂ ಕೃತ್ವಾ ಕುರು ಮಾಂ ದೋಷವರ್ಜಿತಂ ।
ಪಾತಕಾನ್ಯಾಮಕೀನಾಚ್ಚ ಪರಿಷ್ಕಾರಂ ಕುರುಷ್ವ ಮೇ ॥ ೩ ॥

ಯತೋ ಹೇತೋರ್ಹಿ ಜಾನೇಹಮಪರಾಧಾನ್ಮಯಾ ಕೃತಾನ್ ।
ಸರ್ವದಾ ಮಮ ಪಾಪಂ ಚ ಮತ್ಪ್ರತ್ಯಕ್ಷಂ ವಿತಿಷ್ಠತೇ ॥ ೪ ॥

ಕೇವಲಂ ತ್ವದ್ವಿರುದ್ಧಂ ಹಿ ಪಾಪಮಾಚರಿತಂ ಮಯಾ ।
ತವ ದೃಷ್ಟ್ಯಾ ಕದರ್ಯಾಂಚ ದುಷ್ಕ್ರಿಯಾಂ ಕೃತವಾನಹಂ ॥ ೫ ॥

ವನ್ಯಯೇವಾಪರಾಧೈರ್ಮೇ ಮಸ್ತಕಂ ಸಮಭಿಪ್ಲುತಂ ।
ವಿಶೋಢುಂ ನಹಿ ಶಕ್ಯಂತೇ ಮಯಾ ತೇ ಗುರುಭಾರವತ್ ॥ ೬ ॥

ವಿಷಣ್ಣೋತೀವ ಚೂರ್ಣೋಹಂ ಅಂತಃಕ್ರೋಶೇನ ರೋದಿಮಿ ।
ಪ್ರಭೋ ಕೃತ್ವಾನ್ನ ಮಮಾಕಾಂಕ್ಷಾ ವಿದ್ಯತೇ ತವ ಸಮ್ಮುಖೇ ॥ ೭ ॥

ಆಚ್ಛಾದಯ ನಿಜಂ ವಕ್ತ್ರಂ ಮದೀಯಂ ಪಾತಕಂ ಪ್ರತಿ ।
ಮಮ ಸರ್ವಾಪರಾಧಾನಾಂ ದವನಂ ಕ್ರಿಯತಾಂ ತ್ವಯಾ ॥ ೮ ॥

ಹೇ ಈಶ ಮಮ ಮಧ್ಯೇ ತ್ವಂ ಶುಚ್ಯಂತಃಕರಣಂ ಸೃಜ ।
ಮದೀಯಾಭ್ಯಂತರೇ ಧೀರಂ ಚಾತ್ಮಾನಂ ನೂತನೀ ಕುರು ॥ ೯ ॥

ತ್ವದೀಯ ದೃಷ್ಟಿತೋ ದೂರಂ ಮಾಂ ಚ ತ್ವಂ ನಾಪಸಾರಯ ।
ಸ್ವೀಯ ಪವಿತ್ರಮಾತ್ಮಾನಂ ಮತ್ತೋಪಾನಾಪಹಾರಯ ॥ ೧೦ ॥

ತ್ವದೀಯ ತ್ರಾಣಜಂ ಹರ್ಷಂ ಪುನರ್ಮಹ್ಯಂ ಪ್ರದೇಹಿ ಚ ।
ಉದಾರೇಣಾತ್ಮನಾ ಮಾಂ ಚ ಧಾರಯನ್ ಸುಸ್ಥಿರಂ ಕುರು ॥ ೧೧ ॥

ದಕ್ಷಿಣ ಹಿಂದುಸ್ಥಾನದಲ್ಲಿ ರೂಢಿಯಾಗಿ ಎಣಿಸುವ

ಶಕಗಳ ಮೊಕಾಬಿಲೆ ಪಟ್ಟಿ.

ಕ್ರಿಸ್ತಶಕ A. D.		ಹಿಂದು ಶಕಗಳು				ಫಸಲಿ		ಮಹಮ್ಮದಿ ಹಿಜರಿ	
		ಚಾಂದ್ರಮಾನ		ಸೌರಮಾನ					
		ಸಂವತ್ಸರಗಳು	ಶಾಲಿವಾಹನ ಶಕ	ಮಲಯಾಳ ಕೊಲ್ಲಮ್					
1807	1867	ಪ್ರಭವ	1729	1789	982	1042	1216	1276	1222	1284
1808	1868	ವಿಭವ	1730	1790	983	1043	1217	1277	1223	1285
1809	1869	ಶುಕ್ಲ	1731	1791	984	1044	1218	1278	1224	1286
1810	1870	ಪ್ರಮೋದೂತ	1732	1792	985	1045	1219	1279	1225	1287
1811	1871	ಪ್ರಜೋತ್ಪತ್ತಿ	1733	1793	986	1046	1220	1280	1226	1288
1812	1872	ಆಂಗೀರಸ	1734	1794	987	1047	1221	1281	1227	1289
1813	1873	ಶ್ರೀಮುಖ	1735	1795	988	1048	1222	1282	1228-29	1290
1814	1874	ಭಾವ	1736	1796	989	1049	1223	1283	1230	1291
1815	1875	ಯುವ	1737	1797	990	1050	1224	1284	1231	1292
1816	1876	ಧಾತು	1738	1798	991	1051	1225	1285	1232	1293
1817	1877	ಈಶ್ವರ	1739	1799	992	1052	1226	1286	1233	1294-95
1818	1878	ಬಹುಧಾನ್ಯ	1740	1800	993	1053	1227	1287	1234	1296
1819	1879	ಪ್ರಮಾಥಿ	1741	1801	994	1054	1228	1288	1235	1297
1820	1880	ವಿಕ್ರಮ	1742	1802	995	1055	1229	1289	1236	1298
1821	1881	ವಿಷು	1743	1803	996	1056	1230	1290	1237	1299
1822	1882	ಚಿತ್ರಭಾನು	1744	1804	997	1057	1231	1291	1238	1300
1823	1883	ಸ್ವಭಾನು	1745	1805	998	1058	1232	1292	1239	1301
1824	1884	ತಾರಣ	1746	1806	999	1059	1233	1293	1240	1302
1825	1885	ಪಾರ್ಥಿವ	1747	1807	1000	1060	1234	1294	1241	1303
1826	1886	ವ್ಯಯ	1748	1808	1001	1061	1235	1295	1242	1304
1827	1887	ಸರ್ವಜಿತು	1749	1809	1002	1062	1236	1296	1243	1305
1828	1888	ಸರ್ವಧಾರಿ	1750	1810	1003	1063	1237	1297	1244	1306
1829	1889	ವಿರೋಧಿ	1751	1811	1004	1064	1238	1298	1245	1307
1830	1890	ವಿಕೃತಿ	1752	1812	1005	1065	1239	1299	1246	1308
1831	1891	ಖರ	1753	1813	1006	1066	1240	1300	1247	1309
1832	1892	ನಂದನ	1754	1814	1007	1067	1241	1301	1248	1310
1833	1893	ವಿಜಯ	1755	1815	1008	1068	1242	1302	1249	1311
1834	1894	ಜಯ	1756	1816	1009	1069	1243	1303	1250	1312

ಕ್ರಿಸ್ತಶಕ		ಸಂವತ್ಸರಗಳು	ಶಾಲಿವಾಹನ ಶಕ		ಮಲಯಾಳ ಕೊಲ್ಲಮ್		ಫಸಲಿ		ಮುಹಮ್ಮದ್ದಿ ಹಿಜರಿ	
1835	1895	ಮನ್ಮಥ	1757	1817	1010	1070	1244	1304	1251	1313
1836	1896	ದುರ್ಮುಖಿ	1758	1818	1011	1071	1245	1305	1252	1314
1837	1897	ಹೇವಿಳಂಬಿ	1759	1819	1012	1072	1246	1306	1253	1315
1838	1898	ವಿಳಂಬಿ	1760	1820	1013	1073	1247	1307	1254	1316
1839	1899	ವಿಕಾರಿ	1761	1821	1014	1074	1248	1308	1255	1317
1840	1900	ಶಾರ್ವರಿ	1762	1822	1015	1075	1249	1309	1256	1318
1841	1901	ಪ್ಲವ	1763	1823	1016	1076	1250	1310	1257	1319
1842	1902	ಶುಭಕೃತು	1764	1824	1017	1077	1251	1311	1258	1320
1843	1903	ಶೋಭಕೃತು	1765	1825	1018	1078	1252	1312	1259	1321
1844	1904	ಕ್ರೋಧಿ	1766	1826	1019	1079	1253	1313	1260	1322
1845	1905	ವಿಶ್ವಾವಸು	1767	1827	1020	1080	1254	1314	1261-62	1323
1846	1906	ಪರಾಭವ	1768	1828	1021	1081	1255	1315	1263	1324
1847	1907	ಪ್ಲವಂಗ	1769	1829	1022	1082	1256	1316	1264	1325
1848	1908	ಕೀಲಕ	1770	1830	1023	1083	1257	1317	1265	1326
1849	1909	ಸೌಮ್ಯ	1771	1831	1024	1084	1258	1318	1266	1327-28
1850	1910	ಸಾಧಾರಣ	1772	1832	1025	1085	1259	1319	1267	1329
1851	1911	ವಿರೋಧಿಕೃತು	1773	1833	1026	1086	1260	1320	1268	1330
1852	1912	ಪರಿಧಾವಿ	1774	1834	1027	1087	1261	1321	1269	1331
1853	1913	ಪ್ರಮಾದೀಚ	1775	1835	1028	1088	1262	1322	1270	1332
1854	1914	ಆನಂದ	1776	1836	1029	1089	1263	1323	1271	1333
1855	1915	ರಾಕ್ಷಸ	1777	1837	1030	1090	1264	1324	1272	1334
1856	1916	ನಳ	1778	1838	1031	1091	1265	1325	1273	1335
1857	1917	ಪಿಂಗಳ	1779	1839	1032	1092	1266	1326	1274	1336
1858	1918	ಕಾಳಯುಕ್ತಿ	1780	1840	1033	1093	1267	1327	1275	1337
1859	1919	ಸಿದ್ಧಾರ್ಥಿ	1781	1841	1034	1094	1268	1328	1276	1338
1860	1920	ರೌದ್ರಿ	1782	1842	1035	1095	1269	1329	1277	1339
1861	1921	ದುರ್ಮತಿ	1783	1843	1036	1096	1270	1330	1278	1340
1862	1922	ದುಂದುಭಿ	1784	1844	1037	1097	1271	1331	1279	1341
1863	1923	ರುಧಿರೋದ್ಗಾರಿ	1785	1845	1038	1098	1272	1332	1280	1342
1864	1924	ರಕ್ತಾಕ್ಷಿ	1786	1846	1039	1099	1273	1333	1281	1343
1865	1925	ಕ್ರೋಧನ	1787	1847	1040	1100	1274	1334	1282	1344
1866	1926	ಕ್ಷಯ	1788	184	1041	1101	1275	1335	1283	1345

ಸೂಚನೆ: 1. ಕ್ರಿಸ್ತಶಕವೆಂಬ ಇಸವಿ ಜನವರಿ 1ನೇ ತಾರೀಕಿಗೆ ಪ್ರಾರಂಭವಾಗುವದು.

2. ಸಂವತ್ಸರವೂ ಶಾಲಿವಾಹನ ಶಕವೂ (ಒಂದೇ ದಿವಸ) ಮಾರ್ಚಿ-ಎಪ್ರಿಲಲ್ಲಿ ಪ್ರಾರಂಭವಾಗುವದು

3. ಮಲಯಾಳ ಕೊಲ್ಲಮ್ ಎಂಬ ಕೇರಳ ಶಕವು ಸಪಟಂಬರ ತಿಂಗಳಲ್ಲಿ "

4. ಫಸಲಿ ಜುಲಾಯಿ 1ನೇ ತಾರೀಕಿಗೆ "

5. ಮುಹಮ್ಮದ್ದಿ ಹಿಜರಿ ಸಾಮಾನ್ಯವಾಗಿ ವರ್ಷ ವರ್ಷ ೧೪ ದಿವಸಕ್ಕೆ ಮುಂದಾಗಿ "

ನಾಸ್ತಿಕನು ಯಾರು?

ದೇವರಿಲ್ಲವೆಂದು ಬುದ್ಧಿಹೀನನು ತನ್ನ ಹೃದಯದಲ್ಲಿ ಹೇಳಿಕೊಂಡಿದ್ದಾನೆ.

ಸರ್ವ ನಿರ್ಮಾಣಕರ್ತನಾದ ನಿಯಾಮಕನಾದ ದೇವರಿದ್ದಾನೆಂಬುವದು ನಿರ್ವಿವಾದವಾಗಿ ಸರ್ವೇ ಮನುಷ್ಯರು ಅಸ್ತು ಪಡುವ ಮಾತಾಗಿದೆ. ಹೀಗಿರುತ್ತಾ ದೇವರಿಲ್ಲವೆಂದನ್ನುವವರೂ ಅಲ್ಲಲ್ಲಿ ಇರುತ್ತಾರೆ. ಅವರಿಗೆ ನಾಸ್ತಿಕರೆಂಬ ಹೆಸರು ಸಲ್ಲುವದು. ಇಂಥಾ ನಾಸ್ತಿಕಮತವನ್ನು ಖಂಡನೆ ಮಾಡುವದು ಇಲ್ಲಿ ನನ್ನ ಉದ್ದೇಶವಲ್ಲಾ. ಅನೇಕರು ದೇಹವು ಕ್ಷೀಣಮದಿಂದಿರುವಷ್ಟು ಕಾಲ ನಾಸ್ತಿಕರೆಂದೆನಿಸಿಕೊಂಡರೂ ಜಡಜಾಡ್ಯಗಳೂ ವೃದ್ಧಾಪ್ಯವೂ ಬರುವಾಗ ಭಯಭ್ರಾಂತರಾಗಿ ನಾಸ್ತಿಕಮತವನ್ನು ತೊರೆದು ಬಿಟ್ಟವರು ಇದ್ದಾರೆ. ಆದದರಿಂದ ಇಂಥಾ ನಾಸ್ತಿಕರನ್ನು ಕುರಿತು ಇಲ್ಲಿ ಪ್ರಸ್ತಾಪಿಸದೆ, ದೇವರಿದ್ದಾನೆಂದು ಬಾಯಿಯಿಂದ ಒಪ್ಪಿಕೊಂಡಾಗ್ಯೂ ಕಾರ್ಯಾರ್ಥದಲ್ಲಿ ದೇವರನ್ನು ಮರೆತು ನಡೆಯುವವರನ್ನು ಕುರಿತು ಹೇಳ ಬೇಕೆಂದಿದ್ದೇನೆ.

೧. ಈ ಸೃಷ್ಟಿಗೆ ಕರ್ತನೂ ಒಡೆಯನೂ ಆಗಿರುವ ದೇವರಿದ್ದಾನೆಂದು ಹೇಳುವವನು ಅಂಥಾ ದೇವರು ಮಹಾ ದೊಡ್ಡವನೂ ಪರಮ ಸ್ತುತ್ಯನೂ ಆಗಿದ್ದಾನೆಂದು ಒಪ್ಪುತ್ತಾನೆ. ಕಾರ್ಯದಿಂದ ಕರ್ತೃವಿನ ಶಕ್ತಿ ಜ್ಞಾನ ಮಹಿಮೆಗಳನ್ನು ತಿಳಿಯ ಬಹುದಷ್ಟೇ. ಹಾಗೆಯೇ ಈ ಅಪಾರ ವಿಶ್ವವನ್ನು ನಿರ್ಮಿಸಿ ಪರಿಪಾಲಿಸುವವನು ಮಹಾ ದೊಡ್ಡವನೂ ಆರಾಧನೆಗೆ ಯೋಗ್ಯನೂ ಆಗಿದ್ದಾನೆಂದು ಸ್ಪಷ್ಟವಾಗುವದು. ಇದನ್ನು ಯಥಾಸ್ಥಿತ್ಯಾ ತಿಳಿದಾಗ್ಯೂ ದೇವರನ್ನು ಆರಾಧನೆ ಮಾಡದೆ ಸ್ತುತಿಸದೆ ಮಹಿಮೆ ಪಡಿಸದೆ ಇರುವವನು ಯಾವನೋ ಅವನ ಮನಸ್ಸಿನಲ್ಲಿರುವ ವಾಸ್ತವಿಕ ಮತವೇನು? ದೇವರಿದ್ದಾನೆಂಬುವದೋ ಇಲ್ಲವೆಂಬುವದೋ?

೨. ನಿರ್ಮಾಣಕರ್ತನಾದ ಪರಿಪಾಲಕನಾದ ದೇವರಿದ್ದಾನೆಂದು ಹೇಳುವವನು ಅಂಥಾ ದೇವರು ತನ್ನನ್ನು ರಕ್ಷಣೆ ಮಾಡುವವನೂ ಸುಖವನ್ನೂ ದುಃಖವನ್ನೂ ತನಗೆ ಕಳುಹಿಸುವವನೂ ಆಗಿದ್ದಾನೆಂದೂ ಆತನ ಕೃಪೆ ತನಗಾದರೆ ತಾನು ಧನ್ಯನಾದೆ, ಅವಕೃಪೆಯಾದರೆ ತಾನು ಕೆಟ್ಟಿನೆಂದೂ ಒಪ್ಪುತ್ತಾನೆ. ಆದರೆ ಆತನ ಕೃಪೆಯನ್ನು ಪಡಿಯುವದಕ್ಕೆ ಪ್ರಯತ್ನ ಮಾಡುವದಿಲ್ಲಾ. ಆತನ ಅವಕೃಪೆಗೂ ಕೋಪಕ್ಕೂ ಗುರಿಯಾಗುವ ಕೃತ್ಯಗಳನ್ನೇ ಮಾಡುತ್ತಾನೆ. ಇದೇ ಪ್ರಕಾರ ಅವನ ದಿನದಿನದ ನಡಾವಳಿಯಾದರೆ ಅವನ ವಾಸ್ತವ್ಯ ಮತವೇನು? ದೇವರಿದ್ದಾನೆಂಬುವದೋ ಇಲ್ಲವೆಂಬುವದೋ?

೩. ನಿರ್ಮಾಣಕರ್ತನಾದ ಒಡೆಯನಾದ ಸ್ವಾಮಿ ಇದ್ದಾನೆಂದು ಹೇಳುವವನು ಅಂಥಾ ದೇವರು ತನಗೂ ಒಡೆಯನೂ, ತನಗಿರುವಂಥಾದ್ದು ಯಾವತ್ತೂ ಆತನು ಕೊಟ್ಟದ್ದು, ಆತನು ಧನಿ, ತಾನು ಸೇವಕನು, ಆತನ ಆಜ್ಞೆ ತಾನು ಶಿರಸಾ ಮಾನ್ಯ ಮಾಡ ಬೇಕು ಎಂದೂ ಒಪ್ಪುತ್ತಾನೆ. ಆದರೆ ಅವನ ನಿತ್ಯದ ನಡಾವಳಿಯಲ್ಲಿ ದೇವರ ಅಪ್ಪಣೆ ಮೀರುತ್ತಾನೆ, ಮಾಡ ಬಾರದ್ದನ್ನು ಮಾಡುತ್ತಾನೆ, ಮಾಡ ತಕ್ಕದ್ದನ್ನು ಮಾಡದೆ ಬಿಡುತ್ತಾನೆ. ತನಗೆ ತಾನೇ ಒಡೆಯನು, ತನ್ನನ್ನು ವಿಚಾರಿಸುವವನಿಲ್ಲ ಎಂಬು

ವಂತೆ ನಡಿಯುತ್ತಾನೆ. ಇಂಥಾ ಮನುಷ್ಯನ ವಾಸ್ತವ್ಯ ಮತವೇನು? ದೇವರಿದ್ದಾನೆಂಬುವದೋ ಇಲ್ಲವೆಂಬುವದೋ?

೪. ನಿರ್ಮಾಣಕರ್ತನಾದ ದೇವರಿದ್ದಾನೆಂದು ಹೇಳುವವನು, ಅಂಥಾ ದೇವರು ಒಳ್ಳೇಯವನೂ ಸರ್ವಪ್ರಾಣಿಗಳ ಮೇಲೆ ಮಹಾ ದಯೆಯುಳ್ಳವನೂ ಎಂದು ಒಪ್ಪುತ್ತಾನೆ. ಸರ್ವಪ್ರಾಣಿಗಳಿಗೆ ಸುಖವಾಗ ತಕ್ಕ ಸಾಧನಗಳನ್ನು ಆತನು ಈ ಲೋಕದಲ್ಲಿಟ್ಟಿದ್ದಾನೆ. ಹೀಗೆ ದೇವರು ಮಹಾ ಪ್ರೇಮವಂತನೆಂದು ಹೇಳುತ್ತಾ ಆತನನ್ನು ಪ್ರೀತಿ ಮಾಡದೆ ಇತರ ಪ್ರಾಣಿಗಳನ್ನೂ ವಸ್ತುಗಳನ್ನೂ ಪ್ರೀತಿ ಮಾಡುವವನ ವಾಸ್ತವ್ಯ ಮತವು ಯಾವದು? ದೇವರಿದ್ದಾನೆಂಬುವದೋ ಇಲ್ಲವೆಂಬುವದೋ?

೫. ಈ ಮಹಾ ವಿಶ್ವಕ್ಕೆ ಕರ್ತನಿದ್ದಾನೆಂದು ಒಪ್ಪುವವನು ಅಂಥಾ ಸ್ವಾಮಿ ಮಹಾ ಪರಿಶುದ್ಧನು, ತಾನು ಅಪವಿತ್ರವಾದದ್ದನ್ನು ಮಾಡದವನೂ ಇತರರಿಂದ ಮಾಡಿಸದವನೂ ಎಂದು ಒಪ್ಪುವನು. ದೇವರ ಪರಿಶುದ್ಧತ್ವವನ್ನು ನೆನಸುವವನು ಲಂಡ ಕೃತ್ಯಗಳನ್ನು ಮಾಡುವದಕ್ಕೆ ಮಾತ್ರವಲ್ಲಾ ಅಂಥಾ ಕೃತ್ಯಗಳನ್ನು ಮನಸ್ಸಿನಲ್ಲಿ ಯೋಚಿಸುವದಕ್ಕೂ ಭಯ ಪಡುವನು. ಹೀಗಿರುತ್ತಾ ದೇವರು ಪರಿಶುದ್ಧನು, ಅಶುದ್ಧವಾದದ್ದಕ್ಕೆ ಮೆಚ್ಚುವವನಲ್ಲಾ ಎಂದು ತಿಳಿದು ಅಶುದ್ಧ ಯೋಚನೆಗಳನ್ನು ಕೃತ್ಯಗಳನ್ನು ಮಾಡುವವನೂ ಅಶುದ್ಧ ಮಾತುಗಳನ್ನು ಆಡುವವನೂ ಯಾವನೋ ಅವನ ವಾಸ್ತವ್ಯ ಮತವು ಯಾವದು? ದೇವರಿದ್ದಾನೆಂಬುವದೋ ಇಲ್ಲವೆಂಬುವದೋ?

೬. ದೇವರು ಸರ್ವ ವ್ಯಾಪಿಯೂ ಸರ್ವ ಸಾಕ್ಷಿಯೂ ಸರ್ವಜ್ಞನೂ ಆಗಿ ಪ್ರತಿ ಒಬ್ಬ ಮನುಷ್ಯನ ಕೃತ್ಯಗಳನ್ನೆಲ್ಲಾ ಬಲ್ಲವನಾಗಿದ್ದಾನೆ; ಮನೋಗತವನ್ನೂ ನೆನಪುಗಳನ್ನೂ ತಿಳಿಯುತ್ತಾನೆ, ಆ ಪ್ರಕಾರ ಫಲವನ್ನು ಕೊಡುವನು ಎಂದು ಒಬ್ಬನು ಬಾಯಿದೆರೆದು ಹೇಳುತ್ತಾ ದೇವರ ಆಜ್ಞೆಗಳನ್ನು ಸಾವಿರಾರು ಸಾರಿ ಮೀರುವವನು ದೇವರು ಸರ್ವಜ್ಞನೆಂದು ನೆನಸುತ್ತಾನೋ? ಅಧಿಕಾರಸ್ಥರ ಮುಂದೆ ಅಪರಾಧವನ್ನು ಮಾಡುವದಕ್ಕೆ ಒಬ್ಬನು ಧೈರ್ಯ ಪಡುವನೋ? ದೇವರು ಸರ್ವಜ್ಞನು, ಆತನಿಗೆ ಅಂತರಂಗ ಬಹಿರಂಗವೆಂಬುವದಿಲ್ಲಾ ಆತನಿಗೆ ಮರೆಮಾಜಿ ತಾನೇನೂ ಮಾಡಲಾರೆನೆಂದು ಒಪ್ಪುವವನು ಅಪಕೃತ್ಯಗಳನ್ನು ಮಾಡುವದಕ್ಕೆ ಅಂಜ ಬೇಕಲ್ಲವೋ? ಆದದರಿಂದ ಅಂತರಂಗದಲ್ಲಿ ಪಾಪ ಮಾಡುವವರು ದೇವರು ಇಲ್ಲವೆಂದು ಮರೆತು ನಡಿಯುವವರಲ್ಲವೇ?

೭. ದೇವರು ಪವಿತ್ರಾಗಮದಲ್ಲಿ ಮನುಷ್ಯರಿಗೆ ಅಪ್ಪಣೆ ಮಾಡಿರುವದು—ನೀವು ನಿಮ್ಮ ಪಾಪಗಳನ್ನು ನೆನಸಿ ನಿಜವಾಗಿ ಮಾನಸಾಂತರ ಮಾಡಿ ರಕ್ಷಕನಾದ ಯೇಸು ಕ್ರಿಸ್ತನ ಮೇಲೆ ಪರಿಪೂರ್ಣ ಭರವಸವಿಡುವವರಾಗಿ ಇಂದಿನಿಂದ ನನ್ನ ಆಜ್ಞೆಗಳನ್ನು ಕೈಕೊಳ್ಳುವವರಾದರೆ ನೀವು ಅಪರಾಧಿಗಳೂ ದಂಡನೆಗೆ ಯೋಗ್ಯರೂ ಆಗಿದ್ದರೂ ನಿಮ್ಮ ಪಾಪಗಳನ್ನು ಕ್ಷಮಿಸಿ ರಕ್ಷಣೆ ಮಾಡುವೆನು, ಅನಂತ ಕಾಲದ ಪರಮಸುಖವನ್ನು ನಿಮಗೆ ಕೊಡುವೆನು, ಈ ನನ್ನ ಅಪ್ಪಣೆ ನೀವು ಮಾನ್ಯ ಮಾಡದೆ ಹೋದರೆ, ನಿಮ್ಮ ಪಾಪಗಳಿಗೆ ತಕ್ಕ ಶಿಕ್ಷೆಯಾಗಿ ನಿತ್ಯ ಕಾಲಕ್ಕೂ ನರಕಯಾತನೆ ಅನುಭವಿಸುವಿರಿ. ಈ ಪ್ರಕಾರವಿರುವ ದೇವರ ವಾಕ್ಯವನ್ನು ತಿಳಿದು ಮನಸ್ಸಿಗೆ ತಾರದೆ ಉದಾಸೀನನಾಗಿ ಮಾನಸಾಂತರ ಮಾಡದೆ ರಕ್ಷಕನ ಶರಣ ಹೋಗದೆ ಇರುವವನ ವಾಸ್ತವ್ಯ ಮತ ಯಾವದು? ದೇವರಿದ್ದಾನೆಂಬುವದೋ?

ಈ ಪ್ರಕಾರ ದೇವರಿದ್ದಾನೆಂದು ಬಾಯಿದೆರೆದು ಒಪ್ಪಿ ನಡಾವಳಿಯಿಂದ ಅದಕ್ಕೆ ವಿರೋಧ ಮಾಡುವವನಿಗೂ ನಾಸ್ತಿಕನಿಗೂ ಬಹಳ ಭೇದವಿಲ್ಲಾ. ಒಬ್ಬನು ಬಾಯಿಯಿಂದ ದೇವರನ್ನು ಬೊಂಕಿದರೆ ಒಬ್ಬನು ಕೃತ್ಯಗಳಿಂದ ಬೊಂಕುತ್ತಾನೆ. ದೇವರಿದ್ದಾನೆಂದು ನಾವು ಒಪ್ಪಿದ ಮೇಲೆ ಕೃತ್ಯಗಳಲ್ಲಿಯೂ ಒಪ್ಪುವವರಾಗಿ ನಮ್ಮ ಹೇಳಿಕೆಯೂ ಬಾಳಿಕೆಯೂ ತಾಳೆಯಾಗಿದ್ದರೆ ನಾವು ಆಸ್ತಿಕರೂ ದೇವರ ನಿಜ ಭಕ್ತರೂ ಆಗಿರುವೆವು. ಯೇಸು ಕ್ರಿಸ್ತ ಸ್ವಾಮಿಯರು ಹೇಳಿದ್ದು: ಕರ್ತನೇ ಕರ್ತನೇ ಎಂದು ನನಗೆ ಹೇಳುವವರೆಲ್ಲವರೂ ಪರಲೋಕದಲ್ಲಿ ಸೇರರು, ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತವನ್ನು ಮಾಡುವವರೇ ಸೇರುವರು. ನನ್ನ ವಾಕ್ಯವನ್ನು ಕೇಳಿ ಮಾಡುವವನೇ ಬುದ್ಧಿವಂತನು.

ಅತಿಶಯ ಪ್ರೀತಿಯು.

ಪೂರ್ವದಲ್ಲಿ ಇಂಗ್ಲಿಷರಿಗೂ ಟೀಪು ಸುಲ್ತಾನನಿಗೂ ಯುದ್ಧ ಉಂಟಾಗುತ್ತಿತ್ತೆಂದು ಎಲ್ಲರಿಗೂ ಗೊತ್ತಿದೆಯಷ್ಟೇ. ಒಮ್ಮೆ ಒಂದು ಯುದ್ಧದಲ್ಲಿ ಇಂಗ್ಲಿಷರು ಅಪಜಯ ಪಟ್ಟು ಮಹಾ ಪರಾಕ್ರಮಿಗಳಾದ ಕೆಲವರು ಇಂಗ್ಲಿಷ ಸರದಾರರು ಸುಲ್ತಾನರ ಕೈಗೆ ಸೆರೆಯವರಾಗಿ ಸಿಕ್ಕಿದರು. ನಿಷ್ಕರುಣಿಗಳಾದ ವೈರಿಗಳು ಯುದ್ಧದಲ್ಲಿ ಘಾಯ ಪಟ್ಟ ಈ ಸರದಾರರನ್ನು ಸೆರೆಯಲ್ಲಿಟ್ಟು ಆರೈಕೆ ಮಾಡದೆ ಬೇಕಾದ ಆಹಾರವನ್ನು ಕೊಡಿಸದೆ ಬಹು ತರದಲ್ಲಿ ಶ್ರಮೆ ಪಡಿಸಿದರು. ಒಬ್ಬ ಸರದಾರನ ಕಾಲಿಗೆ ಗುಂಡು ತಾಗಿ ಅವನು ಮಹಾ ವ್ಯಥೆ ಪಡುತ್ತಿದ್ದನು. ಒಂದು ದಿನ ಸೆರೆಯಲ್ಲಿದ್ದ ಸರದಾರರು ಹೊರಗಿನಿಂದ ಗಣಗಣವೆಂಬ ಸದ್ದು ಕೇಳಿ ಇದೇನಾಗಿರಬಹುದು? ನಮ್ಮನ್ನು ಕೊಲ್ಲಲಿಕ್ಕೆ ಬರುತ್ತಾರೋ? ಎಂದು ಬಹಳ ಹೆದರಿ ಘಾಬರಿಯಾದರು. ಕೂಡಲೇ ಬಾಗಲು ತೆರೆದು ಕೆಲ ಕಮ್ಮಾರರು ಬೇಡಿಗಳನ್ನು ಹೊತ್ತು ಕೊಂಡವರು ಒಳನುಗ್ಗಿದರು. ಅವರ ಸಂಗಡಲಿದ್ದ ಮುಖ್ಯಸ್ಥನೊಬ್ಬನು ಆ ನಿರ್ಭಾಗ್ಯರಾದ ಸರದಾರರಲ್ಲಿ ಒಬ್ಬೊಬ್ಬರ ಕಾಲಿಗೆ ಒಂದು ಬೇಡಿ ಹಾಕುವದೆಂದು ಅಪ್ಪಣೆ ಮಾಡಿದನು. ಸರದಾರರಲ್ಲಿ ಮುದುಕನಾದವನೊಬ್ಬನು ತನ್ನ ಅವಸ್ಥೆಯನ್ನು ಪೂರಾ ಮರೆತು ಕಣ್ಣಿನಲ್ಲಿ ನೆತ್ತರವಿಲ್ಲದ ಈ ಜನರು ಕಾಲಿನಲ್ಲಿ ಗುಂಡು ತಾಗಿದ ಸರದಾರನಿಗೂ ಸಹ ಬೇಡಿ ಹಾಕುವದನ್ನು ನೋಡಿ ತಾಳಲಾರದೆ, ಅಪ್ಪಾ, ಅವನಿಗೆ ಸಂಕೋಲೆ ಹಾಕ ಬೇಡಿ; ಗುಂಡು ತಾಗಿ ಕಾಲಿನಿಂದ ಮಾಂಸದ ತುಂಡು ಹೋಗಿ ಮೊದಲೇ ಬಹಳ ವೇದನೆ ಪಡುತ್ತಾನೆ; ಸ್ಸಾಕೋಲೆ ಹಾಕಿದರೆ ನೋವನ್ನು ಹ್ಯಾಗೆ ತಾಳುವನು? ಎಂದು ಅವನಿಗಾಗಿ ದೈನ್ಯ ಪಟ್ಟು ಬೇಡಿಕೊಂಡನು. ಎಷ್ಟು ಬೇಡಿಕೊಂಡರೂ ಸುಲ್ತಾನನ ಕಡೆಯವರು ಗುಮಾನ ಮಾಡಲಿಲ್ಲಾ. ಸೆರೆಯವರ ಲೆಖ್ಖಕ್ಕೆ ಸರಿಯಾಗಿ ಅವರು ಸಂಕೋಲೆಗಳನ್ನು ತಂದಿದ್ದರು. ಅವನ್ನು ಅವರವರ ಕಾಲಿಗೆ ಹಾಕಲೇ ಬೇಕು ಎಂದು ಅವರಿಗೆ ಅಪ್ಪಣೆಯಾಗಿತ್ತು. ಈ ನಿರ್ದಯಾತ್ಮಕರ ಹೃದಯದಲ್ಲಿ ಕರುಣೆ ಹುಟ್ಟಲಿಲ್ಲವೆಂದು ಆ ಮುದಿ ಸರದಾರನು ನೋಡಿ ಬಹಳ ನೋವಿನಿಂದ ಸಂಕಟ ಪಡುವ ನನ್ನ ಸ್ನೇಹಿತನ ಸಂಕೋಲೆಯನ್ನು ನನ್ನ ಕಾಲಿಗೆ ಹಾಕಿರಿ;

ಅವನಿಗೆ ಮಾಪು ಮಾಡಿರಿ ಎಂದು ಹೇಳಿ ಕೊಂಡಲ್ಲಿ ಅವರು ಒಪ್ಪಿ ಹಾಗೆಯೇ ಮಾಡಿದರು.

ಕೆಲವು ಕಾಲ ಕಳೆದು ಇನ್ನೊಂದು ಯುದ್ಧದಲ್ಲಿ ಇಂಗ್ಲಿಷರು ಜಯಗೊಂಡು ಸೆರೆಯಲ್ಲಿರುವ ಸರದಾರರನ್ನು ಬಿಡುಗಡೆ ಮಾಡುವದಕ್ಕೆ ಸೆರೆ ಮನೆಗೆ ಬಂದು, ಅತಿ ಸ್ನೇಹದಿಂದ ಕಾಲಿಗೆ ಜೋಡು ಸಂಕೋಲೆಗಳನ್ನು ಹಾಕಿಸಿಕೊಂಡ ಆ ಮುದಿ ಸರದಾರನು ಸತ್ತು ಹೋಗಿರುವದನ್ನು ಅವನು ಯಾರಿಗೋಸ್ಕರ ಈ ಭಾರವನ್ನು ಹೊತ್ತಿದ್ದನೋ ಆ ಸ್ನೇಹಿತನು ಇನ್ನು ಜೀವಂತನಾಗಿರುವದನ್ನು ಕಂಡರು; ಆವಾಗ ಅವರಿಗಾದ ದುಃಖವೂ ಆಶ್ಚರ್ಯವೂ ಅಷ್ಟಿಷ್ಟಲ್ಲಾ. ಬಿಡುಗಡೆ ಹೊಂದಿದ ಈ ಸರದಾರನೇ ಇನ್ನೊಂದು ಯುದ್ಧದಲ್ಲಿ ಜಯಶಾಲಿಯಾಗಿ ತನಗೆ ಉಪದ್ರ ಪಡಿಸಿದವರನ್ನು ಅಣಗಿಸುವದಕ್ಕೆ ಅನುಕೂಲ ಹೊಂದಿದವನಾದನು.

ನಾವು ಈ ವರೆಗೆ ಹೇಳಿದ ವೃತ್ತಾಂತವನ್ನು ಆಲೋಚಿಸಿದರೆ ಅತಿಶಯವಾದ ಪ್ರೀತಿಗೆ ಇದೊಂದು ರೂಪಕವೆಂದು ಹೇಳ ಬಹುದು. ಸೆರೆಯಲ್ಲಿದ್ದು ಮಹಾ ಸಂಕಟವನ್ನು ಸೈರಿಸಿದ ಆ ಬಂದಿಗಳಂತೆ ನಾವೆಲ್ಲವರೂ ಮಹಾ ಕಠೋರನಾದ ವೈರಿಯ ಕೈವಶದಲ್ಲಿರುವವರು. ಈ ವೈರಿ ಯಾರು? ಪಾಪ ಮಾಡುವವನು ಪಾಪದ ದಾಸನಾಗಿದ್ದಾನೆಂಬುವ ವೇದೋಕ್ತಿಯ ಮೇರೆಗೆ ನಮ್ಮ ಮೇಲೆ ಅಧಿಕರಿಸುತ್ತಿದ್ದದ್ದೇ ಪಾಪವು. ಪಾಪದಿಂದಲೇ ಅಂಧಕಾರದ ಪ್ರಭುವೆನ್ನಿಸಿಕೊಳ್ಳುವ ಪಿಶಾಚನು ಮನುಷ್ಯರನ್ನು ಬೋಳಯಿಸಿ ಉರುಲಿನಲ್ಲಿ ಸಿಕ್ಕಿಸಿ ನರಕಕ್ಕೆ ಎಳಿಯುತ್ತಿದ್ದಾನೆ. ಪಿಶಾಚನು ನಮ್ಮನ್ನು ಮುಚ್ಚಿರುವ ಸೆರೆಯು ಕೇವಲ ಅಂಧಕಾರಮಯವಾದದ್ದು. ಸತ್ಯವನ್ನು ಬಿಟ್ಟು ಸಂಸಾರದ ಭೋಗಗಳನ್ನು ಅಷ್ಟ ಪಾಶಗಳನ್ನು ಸೇವಿಸಿ ದೇವರ ಜ್ಞಾನವನ್ನೂ ಭಕ್ತಿಯನ್ನೂ ಕಳಕೊಂಡು ಅಜ್ಞಾನವೆಂಬ ಕಾರ್ಗತ್ತಲಲ್ಲಿ ತಡವ್ಯಾಡುವವರಾಗಿದ್ದೇವೆ. ಇದರಿಂದಲೇ ಅವಿಶ್ವಾಸವೆಂಬ ಅಗಾಧದಲ್ಲಿ ಬಿದ್ದು ದೇವರಿಲ್ಲದವರೂ ಉತ್ತಮ ನಿರೀಕ್ಷೆ ಇಲ್ಲದವರೂ ಆದೆವು. ಇನ್ನು ಅನೇಕರ ಜ್ಞಾನವಿಲ್ಲದ ಹೃದಯವು ಕತ್ತಲಾಗಿ ನಿರ್ಣಯನಾದ ದೇವರ ಮಹಿಮೆಯನ್ನು ಲಯವಾಗುವ ಮನುಷ್ಯ ಪಶು ಮೃಗ ಪಕ್ಷಿ ಇತ್ಯಾದಿಗಳಿಗೆ ಕೊಡುವವರಾದರು. ಪಾಪದ ದಾಸನಿಗೆ ನಿಜ ಸಮಾಧಾನವೂ ಆನಂದವೂ ಎಲ್ಲಿಂದ? ದುಷ್ಟನಿಗೆ ಸಮಾಧಾನವಿಲ್ಲವೆಂದು ದೇವರು ಹೇಳುತ್ತಾನೆಂದು ವಾಕ್ಯ ಉಂಟು. ದೇವರ ಸಂಪರ್ಕದಲ್ಲಿರುವದಕ್ಕೆ ನಿರ್ಮಿತನಾದ ಮನುಷ್ಯನು ಆ ಸಂಪರ್ಕದಿಂದ ತೊಲಗಿದವನಾದ್ದರಿಂದ ತೃಪ್ತಿ ಇಲ್ಲದವನಾಗಿದ್ದಾನೆ. ಸೆರೆಯವರು ಸಂಕೋಲೆ ಹಾಕಿಸಿಕೊಂಡಿರುವಂತೆ ಪಾಪಿಯೂ ಪಿಶಾಚನ ಅಧೀನದಲ್ಲಿದ್ದು ಅವನ ಚಿತ್ತವನ್ನೇ ಮಾಡುತ್ತಾನೆ. ತಂದೆಯಾದ ದೇವರ ಕರುಣೆಯನ್ನು ತಳ್ಳಿ ಪಾಪಿಯು ಮನಸೋ ಇಚ್ಛೆ ನಡಿಯ ಬಹುದೆಂದು ನೆನಸಿದ್ದಾಗ್ಯೂ ಶತ್ರುವಾಗಿರುವ ಪಿಶಾಚನಲ್ಲಿ ಗುಲಾಮಚಾಕರಿ ಮಾಡುತ್ತಾನೆ. ಪಾಪದಿಂದ ಉಂಟಾದ ದುರ್ವ್ಯಸನಗಳು ಮನುಷ್ಯರ ಮೇಲೆ ಅಧಿಕರಿಸುವದಿಲ್ಲವೋ? ಮದ್ಯಪಾನಿಯು ಸುರೆಗೆ ದಾಸನು, ಲೋಭಿಯು ಹಣಕ್ಕೆ ದಾಸನು, ವ್ಯಭಿಚಾರಿಯು ಹಾದರಕ್ಕೆ ದಾಸನು ಹೀಗೆ ಆಯಾ ವ್ಯಸನಗಳಿಗೆ ಮನುಷ್ಯರು ದಾಸರಾಗಿದ್ದಾರೆ. ಸೆರೆಯಲ್ಲಿರುವವರು ಹೊರಗಿನಿಂದ ಒಂದು ಸಪ್ಪಳ ಕೇಳಿದರೆ ಘಾಬರಿಯಾಗುವಂತೆ

ಈ ಪ್ರಕಾರ ದೇವರಿದ್ದಾನೆಂದು ಬಾಯಿದೆರೆದು ಒಪ್ಪಿ ನಡಾವಳಿಯಿಂದ ಅದಕ್ಕೆ ವಿರೋಧ ಮಾಡುವವನಿಗೂ ನಾಸ್ತಿಕನಿಗೂ ಬಹಳ ಭೇದವಿಲ್ಲಾ. ಒಬ್ಬನು ಬಾಯಿಯಿಂದ ದೇವರನ್ನು ಬೊಂಕಿದರೆ ಒಬ್ಬನು ಕೃತ್ಯಗಳಿಂದ ಬೊಂಕುತ್ತಾನೆ. ದೇವರಿದ್ದಾನೆಂದು ನಾವು ಒಪ್ಪಿದ ಮೇಲೆ ಕೃತ್ಯಗಳಲ್ಲಿಯೂ ಒಪ್ಪುವವರಾಗಿ ನಮ್ಮ ಹೇಳಿಕೆಯೂ ಬಾಳಿಕೆಯೂ ತಾಳೆಯಾಗಿದ್ದರೆ ನಾವು ಆಸ್ತಿಕರೂ ದೇವರ ನಿಜ ಭಕ್ತರೂ ಆಗಿರುವೆವು. ಯೇಸು ಕ್ರಿಸ್ತ ಸ್ವಾಮಿಯರು ಹೇಳಿದ್ದು: ಕರ್ತನೇ ಕರ್ತನೇ ಎಂದು ನನಗೆ ಹೇಳುವವರೆಲ್ಲವರೂ ಪರಲೋಕದಲ್ಲಿ ಸೇರರು, ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತವನ್ನು ಮಾಡುವವರೇ ಸೇರುವರು. ನನ್ನ ವಾಕ್ಯವನ್ನು ಕೇಳಿ ಮಾಡುವವನೇ ಬುದ್ಧಿವಂತನು.

ಅತಿಶಯ ಪ್ರೀತಿಯು.

ಪೂರ್ವದಲ್ಲಿ ಇಂಗ್ಲಿಷರಿಗೂ ಟೀಪು ಸುಲ್ತಾನನಿಗೂ ಯುದ್ಧ ಉಂಟಾಗುತ್ತಿತ್ತೆಂದು ಎಲ್ಲರಿಗೂ ಗೊತ್ತಿದೆಯಷ್ಟೇ. ಒಮ್ಮೆ ಒಂದು ಯುದ್ಧದಲ್ಲಿ ಇಂಗ್ಲಿಷರು ಅಪಜಯ ಪಟ್ಟು ಮಹಾ ಪರಾಕ್ರಮಿಗಳಾದ ಕೆಲವರು ಇಂಗ್ಲಿಷ ಸರದಾರರು ಸುಲ್ತಾನರ ಕೈಗೆ ಸೆರೆಯವರಾಗಿ ಸಿಕ್ಕಿದರು. ನಿಷ್ಕರುಣಿಗಳಾದ ವೈರಿಗಳು ಯುದ್ಧದಲ್ಲಿ ಘಾಯ ಪಟ್ಟ ಈ ಸರದಾರರನ್ನು ಸೆರೆಯಲ್ಲಿಟ್ಟು ಆರೈಕೆ ಮಾಡದೆ ಬೇಕಾದ ಆಹಾರವನ್ನು ಕೊಡಿಸದೆ ಬಹು ತರದಲ್ಲಿ ಶ್ರಮೆ ಪಡಿಸಿದರು. ಒಬ್ಬ ಸರದಾರನ ಕಾಲಿಗೆ ಗುಂಡು ತಾಗಿ ಅವನು ಮಹಾ ವ್ಯಥೆ ಪಡುತ್ತಿದ್ದನು. ಒಂದು ದಿನ ಸೆರೆಯಲ್ಲಿದ್ದ ಸರದಾರರು ಹೊರಗಿನಿಂದ ಗಣಗಣವೆಂಬ ಸದ್ದು ಕೇಳಿ ಇದೇನಾಗಿರಬಹುದು? ನಮ್ಮನ್ನು ಕೊಲ್ಲಲಿಕ್ಕೆ ಬರುತ್ತಾರೋ? ಎಂದು ಬಹಳ ಹೆದರಿ ಘಾಬರಿಯಾದರು. ಕೂಡಲೇ ಬಾಗಲು ತೆರೆದು ಕೆಲ ಕಮ್ಮಾರರು ಬೇಡಿಗಳನ್ನು ಹೊತ್ತುಕೊಂಡವರು ಒಳನುಗ್ಗಿದರು. ಅವರ ಸಂಗಡಲಿದ್ದ ಮುಖ್ಯಸ್ಥನೊಬ್ಬನು ಆ ನಿರ್ಭಾಗ್ಯರಾದ ಸರದಾರರಲ್ಲಿ ಒಬ್ಬೊಬ್ಬರ ಕಾಲಿಗೆ ಒಂದು ಬೇಡಿ ಹಾಕುವದೆಂದು ಅಪ್ಪಣೆ ಮಾಡಿದನು. ಸರದಾರರಲ್ಲಿ ಮುದುಕನಾದವನೊಬ್ಬನು ತನ್ನ ಅವಸ್ಥೆಯನ್ನು ಪೂರಾ ಮರೆತು ಕಣ್ಣಿನಲ್ಲಿ ನೆತ್ತರವಿಲ್ಲದ ಈ ಜನರು ಕಾಲಿನಲ್ಲಿ ಗುಂಡು ತಾಗಿದ ಸರದಾರನಿಗೂ ಸಹ ಬೇಡಿ ಹಾಕುವದನ್ನು ನೋಡಿ ತಾಳಲಾರದೆ, ಅಪ್ಪಾ, ಅವನಿಗೆ ಸಂಕೋಲೆ ಹಾಕ ಬೇಡಿ; ಗುಂಡು ತಾಗಿ ಕಾಲಿನಿಂದ ಮಾಂಸದ ತುಂಡು ಹೋಗಿ ಮೊದಲೇ ಬಹಳ ವೇದನೆ ಪಡುತ್ತಾನೆ; ಸಂಕೋಲೆ ಹಾಕಿದರೆ ನೋವನ್ನು ಹ್ಯಾಗೆ ತಾಳುವನು? ಎಂದು ಅವನಿಗಾಗಿ ದೈನ್ಯ ಪಟ್ಟು ಬೇಡಿಕೊಂಡನು. ಎಷ್ಟು ಬೇಡಿಕೊಂಡರೂ ಸುಲ್ತಾನನ ಕಡೆಯವರು ಗುಮಾನ ಮಾಡಲಿಲ್ಲಾ. ಸೆರೆಯವರ ಲೆಖ್ಖಕ್ಕೆ ಸರಿಯಾಗಿ ಅವರು ಸಂಕೋಲೆಗಳನ್ನು ತಂದಿದ್ದರು. ಅವನ್ನು ಅವರವರ ಕಾಲಿಗೆ ಹಾಕಲೇ ಬೇಕು ಎಂದು ಅವರಿಗೆ ಅಪ್ಪಣೆಯಾಗಿತ್ತು. ಈ ನಿರ್ದಯಾತ್ಮಕರ ಹೃದಯದಲ್ಲಿ ಕರುಣೆ ಹುಟ್ಟಲಿಲ್ಲವೆಂದು ಆ ಮುದಿ ಸರದಾರನು ನೋಡಿ ಬಹಳ ನೋವಿನಿಂದ ಸಂಕಟ ಪಡುವ ನನ್ನ ಸ್ನೇಹಿತನ ಸಂಕೋಲೆಯನ್ನು ನನ್ನ ಕಾಲಿಗೆ ಹಾಕಿರಿ;

ಅವನಿಗೆ ಮಾಪು ಮಾಡಿರಿ ಎಂದು ಹೇಳಿ ಕೊಂಡಲ್ಲಿ ಅವರು ಒಪ್ಪಿ ಹಾಗೆಯೇ ಮಾಡಿದರು.

ಕೆಲವು ಕಾಲ ಕಳೆದು ಇನ್ನೊಂದು ಯುದ್ಧದಲ್ಲಿ ಇಂಗ್ಲಿಷರು ಜಯಗೊಂಡು ಸೆರೆಯಲ್ಲಿರುವ ಸರದಾರರನ್ನು ಬಿಡುಗಡೆ ಮಾಡುವದಕ್ಕೆ ಸೆರೆ ಮನೆಗೆ ಬಂದು, ಅತಿ ಸ್ನೇಹದಿಂದ ಕಾಲಿಗೆ ಜೋಡು ಸಂಕೋಲೆಗಳನ್ನು ಹಾಕಿಸಿಕೊಂಡ ಆ ಮುದಿ ಸರದಾರನು ಸತ್ತು ಹೋಗಿರುವದನ್ನು ಅವನು ಯಾರಿಗೋಸ್ಕರ ಈ ಭಾರವನ್ನು ಹೊತ್ತಿದ್ದನೋ ಆ ಸ್ನೇಹಿತನು ಇನ್ನು ಜೀವಂತನಾಗಿರುವದನ್ನು ಕಂಡರು; ಆವಾಗ ಅವರಿಗಾದ ದುಃಖವೂ ಆಶ್ಚರ್ಯವೂ ಅಷ್ಟಿಷ್ಟಲ್ಲಾ. ಬಿಡುಗಡೆ ಹೊಂದಿದ ಈ ಸರದಾರನೇ ಇನ್ನೊಂದು ಯುದ್ಧದಲ್ಲಿ ಜಯಶಾಲಿಯಾಗಿ ತನಗೆ ಉಪದ್ರ ಪಡಿಸಿದವರನ್ನು ಅಣಗಿಸುವದಕ್ಕೆ ಅನುಕೂಲ ಹೊಂದಿದವನಾದನು.

ನಾವು ಈ ವರೆಗೆ ಹೇಳಿದ ವೃತ್ತಾಂತವನ್ನು ಆಲೋಚಿಸಿದರೆ ಅತಿಶಯವಾದ ಪ್ರೀತಿಗೆ ಇದೊಂದು ರೂಪಕವೆಂದು ಹೇಳ ಬಹುದು. ಸೆರೆಯಲ್ಲಿದ್ದು ಮಹಾ ಸಂಕಟವನ್ನು ಸೈರಿಸಿದ ಆ ಬಂದಿಗಳಂತೆ ನಾವೆಲ್ಲವರೂ ಮಹಾ ಕಠೋರನಾದ ವೈರಿಯ ಕೈವಶದಲ್ಲಿರುವವರು. ಈ ವೈರಿ ಯಾರು? ಪಾಪ ಮಾಡುವವನು ಪಾಪದ ದಾಸನಾಗಿದ್ದಾನೆಂಬುವ ವೇದೋಕ್ತಿಯ ಮೇರೆಗೆ ನಮ್ಮ ಮೇಲೆ ಅಧಿಕರಿಸುತ್ತಿದ್ದದ್ದೇ ಪಾಪವು. ಪಾಪದಿಂದಲೇ ಅಂಧಕಾರದ ಪ್ರಭುವೆನ್ನಿಸಿಕೊಳ್ಳುವ ಪಿಶಾಚನು ಮನುಷ್ಯರನ್ನು ಬೋಳಯಿಸಿ ಉರುಲಿನಲ್ಲಿ ಸಿಕ್ಕಿಸಿ ನರಕಕ್ಕೆ ಎಳಿಯುತ್ತಿದ್ದಾನೆ. ಪಿಶಾಚನು ನಮ್ಮನ್ನು ಮುಚ್ಚಿರುವ ಸೆರೆಯು ಕೇವಲ ಅಂಧಕಾರಮಯವಾದದ್ದು. ಸತ್ಯವನ್ನು ಬಿಟ್ಟು ಸಂಸಾರದ ಭೋಗಗಳನ್ನು ಅಷ್ಟ ಪಾಶಗಳನ್ನು ಸೇವಿಸಿ ದೇವರ ಜ್ಞಾನವನ್ನೂ ಭಕ್ತಿಯನ್ನೂ ಕಳಕೊಂಡು ಅಜ್ಞಾನವೆಂಬ ಕಾರ್ಗತ್ತಲಲ್ಲಿ ತಡವ್ಯಾಡುವವರಾಗಿದ್ದೇವೆ. ಇದರಿಂದಲೇ ಅವಿಶ್ವಾಸವೆಂಬ ಅಗಾಧದಲ್ಲಿ ಬಿದ್ದು ದೇವರಿಲ್ಲದವರೂ ಉತ್ತಮ ನಿರೀಕ್ಷೆ ಇಲ್ಲದವರೂ ಆದೆವು. ಇನ್ನು ಅನೇಕರ ಜ್ಞಾನವಿಲ್ಲದ ಹೃದಯವು ಕತ್ತಲಾಗಿ ನಿರ್ಣಯನಾದ ದೇವರ ಮಹಿಮೆಯನ್ನು ಲಯವಾಗುವ ಮನುಷ್ಯ ಪಶು ಮೃಗ ಪಕ್ಷಿ ಇತ್ಯಾದಿಗಳಿಗೆ ಕೊಡುವವರಾದರು. ಪಾಪದ ದಾಸನಿಗೆ ನಿಜ ಸಮಾಧಾನವೂ ಆನಂದವೂ ಎಲ್ಲಿಂದ? ದುಷ್ಟನಿಗೆ ಸಮಾಧಾನವಿಲ್ಲವೆಂದು ದೇವರು ಹೇಳುತ್ತಾನೆಂದು ವಾಕ್ಯ ಉಂಟು. ದೇವರ ಸಂಪರ್ಕದಲ್ಲಿರುವದಕ್ಕೆ ನಿರ್ಮಿತನಾದ ಮನುಷ್ಯನು ಆ ಸಂಪರ್ಕದಿಂದ ತೊಲಗಿದವನಾದ್ದರಿಂದ ತೃಪ್ತಿ ಇಲ್ಲದವನಾಗಿದ್ದಾನೆ. ಸೆರೆಯವರು ಸಂಕೋಲೆ ಹಾಕಿಸಿಕೊಂಡಿರುವಂತೆ ಪಾಪಿಯೂ ಪಿಶಾಚನ ಅಧೀನದಲ್ಲಿದ್ದು ಅವನ ಚಿತ್ತವನ್ನೇ ಮಾಡುತ್ತಾನೆ. ತಂದೆಯಾದ ದೇವರ ಕರುಣೆಯನ್ನು ತಳ್ಳಿ ಪಾಪಿಯು ಮನಸ್ಸೋ ಇಚ್ಛೆ ನಡಿಯ ಬಹುದೆಂದು ನೆನಸಿದ್ದಾಗ್ಯೂ ಶತ್ರುವಾಗಿರುವ ಪಿಶಾಚನಲ್ಲಿ ಗುಲಾಮಚಾಕರಿ ಮಾಡುತ್ತಾನೆ. ಪಾಪದಿಂದ ಉಂಟಾದ ದುರ್ವ್ಯಸನಗಳು ಮನುಷ್ಯರ ಮೇಲೆ ಅಧಿಕರಿಸುವದಿಲ್ಲವೋ? ಮದ್ಯಪಾನಿಯು ಸುರೆಗೆ ದಾಸನು, ಲೋಭಿಯು ಹಣಕ್ಕೆ ದಾಸನು, ವ್ಯಭಿಚಾರಿಯು ಹಾದರಕ್ಕೆ ದಾಸನು ಹೀಗೆ ಆಯಾ ವ್ಯಸನಗಳಿಗೆ ಮನುಷ್ಯರು ದಾಸರಾಗಿದ್ದಾರೆ. ಸೆರೆಯಲ್ಲಿರುವವರು ಹೊರಗಿನಿಂದ ಒಂದು ಸಪ್ಪಳ ಕೇಳಿದರೆ ಘಾಬರಿಯಾಗುವಂತೆ

ಪಾಪಿಯು ಸದಾ ಭಯಸ್ಥನಾಗಿದ್ದಾನೆ. ದೇವರನ್ನು ಕುರಿತೂ ಮರಣವನ್ನು ಕುರಿತೂ ಕೇಳುವಾಗ ಹೆದರುತ್ತಾನೆ. ಪಾಪಿಗಳು ಮರಣದ ಭಯವೆಂಬ ದಾಸತ್ವದಲ್ಲಿದ್ದಾರೆ. ಪಾಪದ ಸಂಬಳ ಮರಣ, ಮರಣದ ಮೇಲೆ ನ್ಯಾಯತೀರ್ಪು ಎಂದು ಅರಿತ ಪಾಪಿಯಲ್ಲಿ ಸಂತೋಷವು ಹ್ಯಾಗಿದ್ದೀತು?

ನಮಗೆ ಉದ್ಧಾರಕನಿದ್ದಾನೆ. ಆತನೇ ನಮ್ಮ ಸಂಕೋಲೆಗಳನ್ನು ತೆಗೆದು ಪಾಪದಿಂದ ನಮ್ಮ ಮೇಲೆ ಬಂದ ಎಲ್ಲಾ ಭಾರವನ್ನೂ ಶಾಪವನ್ನೂ ತಾನೇ ವಹಿಸಿದನು. ದೇವರ ಅವಕರುಣೆಯಿಂದಲೂ ಕೋಪದಿಂದಲೂ ನಮ್ಮ ಪಾಪ ಕೃತ್ಯಗಳಿಂದಲೂ ನಾಶವಾಗಿ ಹೋಗ ಬಾರದೆಂದು ಉದ್ಧಾರಕನಾದ ಯೇಸು ಕ್ರಿಸ್ತನು ಶಿಲುಬೆಯನ್ನೇರಿ ನಮ್ಮ ಸಕಲ ಪಾಪಕ್ಕೂ ಶಾಪಕ್ಕೂ ತಾನು ಹೊಣೆಯಾಗಿ ಜೀವಾರ್ಪಣೆ ಮಾಡಿದನು. ನಮಗೂ ದೇವರಿಗೂ ಮಧ್ಯಸ್ಥನೂ ನಮ್ಮ ಹೊಣೆಗಾರನೂ ನಮ್ಮನ್ನು ಬಿಡುಗಡೆ ಮಾಡಿದವನೂ ಆತನೇ. ಆತನು ನಮ್ಮ ಹೊಣೆಗಾರನಾಗಿ ಮರಣವನ್ನು ಪಟ್ಟವನು ಮೂರನೇ ದಿವಸದಲ್ಲಿ ಪುನಃ ಸಜೀವನಾಗಿ ಎದ್ದಿದ್ದಾನೆ. ದೇವರು ಪಾಪವನ್ನು ಎಷ್ಟು ಅಸಹ್ಯಿಸುತ್ತಾನೆ ಲಘುವೆಂದೆನ್ನಿಸುವದಿಲ್ಲವೆಂಬುವದನ್ನು ಯೇಸು ಕ್ರಿಸ್ತನ ಮರಣದಲ್ಲಿ ತಿಳಿಯ ಬಹುದು; ಮತ್ತು ತನ್ನ ಪುತ್ರನಾದ ಆತನನ್ನು ಈ ಪಾಪಿಗಳ ಲೋಕಕ್ಕೆ ಕಳುಹಿಸಿದ್ದರಲ್ಲಿ ದೇವರ ಅತ್ಯಂತ ಪ್ರೇಮವನ್ನೂ ತಿಳಿಯ ಬಹುದು. ಎಲ್ಲಾ ನೀತಿಯನ್ನು ನೆರವೇರಿಸಿ ಅನೇಕರು ರಕ್ಷಣೆ ಹೊಂದುವ ಬಗ್ಯೆ ಯೇಸು ಕ್ರಿಸ್ತನು ಅವತರಿಸಿದ ಕಾರಣ ಯೇಸು ಕ್ರಿಸ್ತನನ್ನು ನೋಡಿ ದೇವರು ನಮ್ಮ ಪಾಪಗಳನ್ನು ಕ್ಷಮೆ ಮಾಡುತ್ತಾನೆ. ಆದರೆ ಕ್ಷಮೆ ಪಡೆಯ ಬೇಕಾದರೆ ಪಾಪಿಯು ಪಾಪಗಳನ್ನು ನೆನಸಿ ದುಃಖಗೊಂಡು ಮಾನಸಾಂತರ ಮಾಡಿ ಯೇಸು ಕ್ರಿಸ್ತನಲ್ಲಿ ವಿಶ್ವಾಸವಿಡುವವನಾಗ ಬೇಕು. ಪಾಪವನ್ನು ಹಗೆ ಮಾಡಿ ಅದರಿಂದ ಬಿಡುಗಡೆ ಹೊಂದುವದಕ್ಕೆ ಅಪೇಕ್ಷಿಸುವವನು ಯೇಸು ಕ್ರಿಸ್ತನ ಬಳಿಗೆ ಬಂದು ಆತನ ಮರಣದಿಂದ ಸಾಧ್ಯವಾದ ಫಲಗಳನ್ನು ಅನುಭವಿಸುತ್ತಾನೆ.

ಯೇಸು ಕ್ರಿಸ್ತನು ನಮ್ಮ ಕಷ್ಟಗಳನ್ನು ತನ್ನ ಮೇಲೆ ವಹಿಸಿಕೊಂಡದ್ದಲ್ಲದೆ ಸೆರೆಮನೆಯನ್ನು ತೆರದು ತಾನೆ ಉತ್ಥಾನವಾಗಿ ಮರಣವನ್ನೂ ಪಿಶಾಚನನ್ನೂ ಪರಾಜಯ ಮಾಡಿ ಜೀವವನ್ನೂ ಅಮರ್ತ್ಯತ್ವವನ್ನೂ ಪ್ರಕಾಶಕ್ಕೆ ತಂದಿದ್ದಾನೆ. ಆತನ ಆಶ್ರಿತರು ಸಹ ಅವನ ಜಯವನ್ನೇ ಪಡಿಯುವರು. ಪಾಪದ ಸೇವೆಯಲ್ಲಿರುವಾಗ ನಮ್ಮನ್ನು ಬಂಧನ ಮಾಡಿದ ಅಜ್ಞಾನವು, ಭಯವು, ಸಮಾಧಾನವಿಲ್ಲದ ಸ್ಥಿತಿಯು ಮೊದಲಾದ ವೈರಿಗಳನ್ನು ಯೇಸು ಕ್ರಿಸ್ತನು ನಿವೃತ್ತಿ ಮಾಡಿದ್ದರಿಂದ ನಾವೂ ಅವನ ಸಂಪರ್ಕದಲ್ಲಿರುವವರಾದರೆ ಜಯಶಾಲಿಗಳಾಗುವೆವು.

ಇಂಥಾ ಉತ್ತಮವಾದ ರಕ್ಷಣೆಯ ಮಾರ್ಗವು ಸಿದ್ಧವಾಗಿರಲಾಗಿ ಇನ್ನೂ ಯಾತಕ್ಕೆ ಸೆರೆಮನೆಯಲ್ಲಿರ ಬೇಕು? ಯೇಸು ಕ್ರಿಸ್ತನಲ್ಲಿ ವಿಶ್ವಾಸಿಸಿ ಬಿಡುಗಡೆ ಹೊಂದಿರಿ. ಮಾನಸಾಂತರ ಪೂರ್ವಕವಾಗಿ ಪೂರ್ಣ ವಿಶ್ವಾಸದಿಂದ ಆತನ ಬಳಿಗೆ ಬನ್ನಿರಿ! ಶುಭವಾರ್ತೆಯನ್ನು ಕೇಳಿರಿ. ದೇವರ ಮಗನು ನಿಮ್ಮನ್ನು ಬಿಡುಗಡೆ ಮಾಡಿದರೆ ನೀವು ನಿಜವಾಗಿ ಬಿಡುಗಡೆಯವರಾಗುವಿರಿ. ತಥಾಸ್ತು.

ಠ ನೇ ತೀ ವೆ ೯.

(೧೮೮೯ನೇ ಇಸವಿ Iನೇ ಆಕ್ಟಿನಲ್ಲಿರುವ ಪಟ್ಟಿಯಿಂದ ಎತ್ತಿ ತೆಗದು ಸಂಕ್ಷೇಪಿಸಿದ್ದು.)

ದಸ್ತಾವೇಜಿನ ವಿವರಣೆ:	ಸ್ಟಾಂಪ್ ಹಾಸಲು:

11. (Bill of Exchange or Promissory Note) ಬಿಲ್ ಒಫ್ ಎಕ್ಸ್‌ಚೇಂಜ್ ಯಾ ಪ್ರೊಮಿಸರಿ ನೋಟು (ಅಂದರೆ ಪಟಾಯಿಸ ತಕ್ಕ ಪತ್ರ, ಇದರಲ್ಲಿ ಚಕ್ಕ್, ದಸ್ತಾವೇಜು, ಬೇಂಕನೋಟು, ಇಲ್ಲವೆ ಕರೆನ್ಸಿನೋಟು ಶೇರುವದಿಲ್ಲ):—

a) ಕೇಳಿದಾಗಲೇ ಪಾವತಿ ಆಗ ತಕ್ಕದ್ದಾಗಿ, ಅದರ ಮೌಲ್ಯ ೨೦ ರೂ ಪಾಯಿಗೆ ಮಿಂರಿದರೆ . . . . . ೧ ಆಣೆ

	ಒಂದಕ್ಕೆ:	ದುಬಾರೆಪ್ರತಿಗೆ:	ತಿಬಾರೆಪ್ರತಿಗೆ:
b) ಕೇಳಿದಾಗಲೇ ಆಲ್ಲದೆ ಅನ್ಯಥಾ ಪಾವತಿಯೊಗ ತಕ್ಕದ್ದಾಗಿ, ಬರದ ಯಾ ಕಂಡ ತಾರೀಕಿನಿಂದ ಒಂದು ಸಂವತ್ಸರಕ್ಕೆ ಮಿಂರದ ವಾಯಿದೆ ಇದ್ದರೆ:	ರೂ. ಆ.	ರೂ. ಆ.	ರೂ. ಆ.
ನಮೂದಿಸಿದ ರೂಪಾಯಿ ೨೦ಂಕ್ಕೆ ಮಿಂರದಿದ್ದರೆ	೦ ೩	೦ ೧	೦ ೧
ರೂಪಾಯಿ ೨೦ಂಕ್ಕೆ ಮಿಂರಿ ೪೦೦ „	೦ ೪	೦ ೨	೦ ೨
„ ೪೦೦ „ ೬೦೦ „	೦ ೬	೦ ೩	೦ ೩
„ ೬೦೦ „ ೧೦೦೦ „	೦ ೧೦	೦ ೫	೦ ೪
„ ೧೦೦೦ „ ೧೩೦೦ „	೦ ೧೩	೦ ೬	೦ ೪
„ ೧೩೦೦ „ ೧೬೦೦ „	೧ ೦	೦ ೮	೦ ೬
„ ೧೬೦೦ „ ೨೫೦೦ „	೧ ೮	೦ ೧೩	೦ ೮
೨೫೦೦ ರೂಪಾಯಿ ಮೇಲೆ ೧೦೦೦೦ ರೂ. ವರೆಗೆ ಪ್ರತಿ ರೂ. ೨೫೦೦ಕ್ಕೆ ಯಾ ಅದರ ಅಂತಕ್ಕೆ.	೧ ೮	೦ ೧೩	೦ ೮
೧೦೦೦೦ ರೂಪಾಯಿ ಮೇಲೆ ೨೦೦೦೦ ರೂಪಾಯಿ ವರೆಗೆ ಪ್ರತಿ ರೂಪಾಯಿ ೫೦೦೦ಕ್ಕೆ ಯಾ ಅದರ ಅಂತಕ್ಕೆ. . .	೨ ೦	೧ ೮	೧ ೦
೨೦೦೦೦ ರೂಪಾಯಿ ಮೇಲೆ ಪ್ರತಿ ರೂಪಾಯಿ ೧೦೦೦೦ಕ್ಕೆ ಯಾ ಅದರ ಅಂತಕ್ಕೆ	೬ ೦	೩ ೦	೨ ೦

c) ಬರದ ತಾರೀಕಿನಿಂದ ಇಲ್ಲವೆ ಕಂಡ ತಾರೀಕಿನಿಂದ ಒಂದು ಸಂವತ್ಸರದ ಮೇಲೆ ಪಾವತಿ ಆಗ ತಕ್ಕದ್ದಾದರೆ— ೧೩ನೇ ಅಂಕೆಯಲ್ಲಿ ಮೇಲಿರುವಷ್ಟೇ ಠಸೆ

12. (Bill of Lading) ಬಿಲ್ ಒಫ್ ಲೇಡಿಂಗ್ ಎಂಬ ಸಾಮಾನು (ಜಹಜನ ಮೇಲೆ) ಭರಾವಣಿಚೀಟು . . . . . ೪ ಆಣೆ

13. ದಸ್ತಾವೇಜು (ಈ ಆಕ್ಟಿನಿಂದ ಅನ್ಯಥಾ ನಿಬಂಧಿಸಲ್ಪಡದೆ ಇರುವಂಥಾದ್ದು):—

ಇದರ ಮೊಬಲಗು ೧೦ ರೂಪಾಯಿಗೆ ಮಿಂರದಿದ್ದರೆ . .	೩ ಆಣೆ
೧೦ ರೂಪಾಯಿಗೆ ಮಿಂರಿ ೫೦ ರೂಪಾಯಿಗೆ ಮಿಂರದಿದ್ದರೆ. .	೪ ಆಣೆ
೫೦ „ „ ೧೦೦ „ „ . .	೮ ಆಣೆ
೧೦೦ರೂ.ಮೇಲೆ ೧೦೦೦ರೂ. ವರೆಗೆ ಪ್ರತಿ ರೂ.೧೦೦ಕ್ಕೆ ಯಾ ಅದರ ಅಂತಕ್ಕೆ	೮ ಆಣೆ
೧೦೦೦ „ „ ಪ್ರತಿ „ ೫೦೦ಕ್ಕೆ ಯಾ ಅದರ ಅಂತಕ್ಕೆ . .	೩ ರೂಪಾಯಿ ೮ ಆಣೆ

14. (Bond or Mortgage-Deed) ದಸ್ತಾವೇಜು ಅಥವಾ ಅಡವು ದಸ್ತಾವೇಜು (ಒಂದು ಉದ್ಯೋಗ ಕೆಲಸವನ್ನು ಸರಿಯಾಗಿ ನೆರವೇರಿಸ ತಕ್ಕ ಬಗ್ಗೆ ಅಥವಾ ತದ್ವಾರಾ ಬಂದ ಹಣವನ್ನು ಕುರಿತು ಸಮಾಧಾನ ಪಡಿಸ ತಕ್ಕ ಬಗ್ಗೆ ಜವಾಬದಾರಿಯಾಗಿ ಬರಕೊಡುವಂಥಾದ್ದು):—

a) ಇದರ ಮೊಬಲಗು ೧೦೦೦ ರೂಪಾಯಿಗೆ ಮೀರದಿದ್ದರೆ—13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ
b) ಇತರ ಸಂಗತಿಯಲ್ಲಿ . . . . . ೪ ರೂಪಾಯಿ

ಕುಜಾದಿ ಪಂಚಗ್ರಹರ ಉದಯೋಚ್ಚಾಸ್ತಮಯಗಳನ್ನು ತೋರಿಸುವ ಪಟ್ಟಿ

ಗ್ರಹ	ತಾರೀಖು	ಉದಯ	ಉಚ್ಚ	ಅಸ್ತ
		ಘಂ. ನಿ.	ಘಂ. ನಿ.	ಘಂ. ನಿ.
ಕುಜ	೧	ಪ್ರಾತಃ. ೫ ೨೯	ಪ್ರಾತಃ. ೯ ೫೫	ಹಗಲು ೨ ೨೨
	೧೫	೫ ೨೪	೯ ೧೯	೨ ೧೪
	೩೦	೫ ೧೧	೯ ೪	೧ ೫೭
ಬುಧ	೧	ಪ್ರಾತಃ. ೬ ೨೫	ಮಧ್ಯಾ. ೨ ೪೯	ಸಾಯಂ ೫ ೪೯
	೧೫	೬ ೪೪	೨ ೩೦	೫ ೧೦
	೩೦	೬ ೨೧	೨ ೫೭	೫ ೩೨
ಗುರು	೧	ಮಧ್ಯಾ. ೧ ೪೪	ಸಾಯಂ ೭ ೪೪	ಪ್ರಾತಃ. ೧ ೪೭
	೧೫	೧ ೧೯	೭ ೧೯	೧ ೨೨
	೩೦	೧ ೨೯	೭ ೨೦	೧ ೧೩
ಶುಕ್ರ	೧	ಪ್ರಾತಃ. ೬ ೪೫	ಮಧ್ಯಾ. ೧೨ ೨೬	ಸಾಯಂ ೬ ೧೨
	೧೫	೬ ೧೦	೧೨ ೪೭	೬ ೨೯
	೩೦	೬ ೩೬	೧೩ ೫	೬ ೪೦
ಶನಿ	೧	ಪ್ರಾತಃ. ೭ ೪೪	ಪ್ರಾತಃ. ೧೦ ೪೭	ಮಧ್ಯಾ. ೨ ೪೦
	೧೫	೭ ೨೯	೧೦ ೨೨	೨ ೧೪
	೩೦	೭ ೧೩	೯ ೫೭	೧ ೪೯

1891 DECEMBER

31 DAYS

೧೮೯೧ ದಶಂಬರ

೩೧ ದಿವಸಗಳು

ದಶಂಬರ ೧ ಕಾರ್ತಿಕ ಅಮಾವಾಸ್ಯೆ, ಸಾಯಂಕಾಲ ಘಂಟೆ ೪ ನಿಮಿಷ ೪೪

" ೪ ಶುಕ್ಲಾರ್ಧಚಂದ್ರ, ರಾತ್ರಿ " ೧೦ " ೧೩

" ೧೫ ಮಾರ್ಗಶಿರ ಪೂರ್ಣಿಮೆ, ಸಾಯಂಕಾಲ " ೫ " ೫೨

" ೨೩ ಕೃಷ್ಣಾರ್ಧ ಚಂದ್ರ, ಪ್ರಾತಃಕಾಲ " ೧೦ " ೫೪

" ೩೦ ಮಾರ್ಗಶಿರ ಅಮಾವಾಸ್ಯೆ, " " ೪ " ೧೪

ವಿಲಾಯತಿ ಕ್ರಮದ ಚಂದ್ರಸ್ಥಿತಿಗಳು

ಅಂಗ್ಲ				ಚಾಂದ್ರಮಾನ			ನಕ್ಷತ್ರ		ಸೌರಮಾನ		ಮಹಮ್ಮದಿ	
Date	Day	ತಾರೀಕು	ವಾರ	ತಿಂಗಳು	ತಿ	ಘಳಿಗೆ ವಿಘಳಿಗೆ	ಜನ್ಮ ಶಿವರ ಹಸ್ತ ಚಿ	ಘಳಿಗೆ ವಿಘಳಿಗೆ	ಸಂಕ್ರಾಂತಿ	ದಿನ ಘ	ತಿಂಗಳು	ದಿನ
1	Tu	೧	ಮ	ಕಾ. ಕೃ	●	೨೬-೪೧	ಅನುರಾಧಾ	೨೫-೪೫		೧೭	ರಬೀವುಲಾಖರ್	೨೮
2	W	೨	ಬು		೧	೨೭-೪೬	ಜ್ಯೇಷ್ಠಾ	೩೨-೫೩	[ಧನುರ್ಯಾರ್]	೧೮		೨೯
3	Th	೩	ಗು		೨	೨೭-೫೯	ಮೂಲಾ	೨೯-೫೫		೧೯		
4	F	೪	ಶು		೩	೨೮-೨೬	ಪೂರ್ವಾಷಾಢ	೨೯-೫೧		೨೦		೧
5	S	೫	ಶ		೪	೨೯-೦೪	ಉತ್ತರಾಷಾಢ	೨೯-೦೦		೨೧		೨
6	SUN	೬	ಆ	ಮಾರ್ಗಶಿರ ಶುಕ್ಲ	೫	೨೯-೦೩	ಶ್ರವಣಾ	೨೮-೫೮		೨೨		೩
7	M	೭	ಚ		೬	೦೮-೨೨	ಧನಿಷ್ಠಾ	೨೫-೨೪		೨೩		೪
8	Tu	೮	ಮ		೭	೦೨-೫೪	ಶತಭಿಷಾ	೨೨-೫೨		೨೪		೫
9	W	೯	ಬು		೮	೩-೫೫	ಪೂರ್ವಾಭಾದ್ರ	೧೯-೦೦		೨೫		೬
10	Th	೧೦	ಗು		೯	೨-೨೯	ಉತ್ತರಾಭಾದ್ರ	೧೫-೨೨		೨೬		೭
11	F	೧೧	ಶು		೧೦	೫೦-೪೭	ರೇವತೀ	೧೦-೧೯	ಕುಂಭ	೨೭		೮
12	S	೧೨	ಶ		೧೧	೪೪-೫೫	ಅಶ್ವಿನೀ	೫- ೮		೨೮		೯
13	SUN	೧೩	ಆ		೧೨	೩೯-೦೭	ಭರಣೀ	೫- ೨		೨೯		೧೦
14	M	೧೪	ಚ		೧೩	೩೪-೦೦	ಕೃತ್ತಿಕಾ	೫೬- ೪		೩೦		೧೧
15	Tu	೧೫	ಮ		☺	೨೯-೪೯	ಮೃಗಶಿರಾ	೫೩-೪೫		೧		೧೨
16	W	೧೬	ಬು		೧	೨೭-೩೧	ಆರ್ದ್ರಾ	೫೨-೩೫		೨		೧೩
17	Th	೧೭	ಗು		೨	೨೪-೩೧	ಪುನರ್ವಸೂ	೫೨-೪೭		೩		೧೪
18	F	೧೮	ಶು		೩	೨೪- ೫	ಪುಷ್ಯಾ	೫೪-೩೭		೪		೧೫
19	S	೧೯	ಶ		೪	೨೫-೦೯	ಆಶ್ಲೇಷಾ	೫೬-೩೩		೫		೧೬
20	SUN	೨೦	ಆ		೫	೨೮-೦೭	ಮಘಾ	೬೦- ೦		೬		೧೭
21	M	೨೧	ಚ		೬	೩೨-೪೭	ಮಘಾ	೩- ೭		೭		೧೮
22	Tu	೨೨	ಮ	ಪೌಷ್ಯ ಕೃಷ್ಣ	೭	೩೮-೨೯	ಹುಬ್ಬಾ	೧-೪೦		೮		೧೯
23	W	೨೩	ಬು		೮	೪೪-೪೨	ಉತ್ತರಾ	೧೬-೪೬		೯		೨೦
24	Th	೨೪	ಗು		೯	೪೦-೨೯	ಹಸ್ತಾ	೨೪-೦೯		೧೦		೨೧
25	F	೨೫	ಶು		೧೦	೪೭-	ಚಿತ್ರಾ	೩೦-೩೬		೧೧		೨೨
26	S	೨೬	ಶ		೧೧	೬೦-	ಸ್ವಾತೀ	೩೮- ೨		೧೨		೨೩
27	SUN	೨೭	ಆ		●	೨-೨೨	ವಿಶಾಖಾ	೪೩-೦೦		೧೩		೨೪
28	M	೨೮	ಚ		೧೨	೫-೩೩	ಅನುರಾಧಾ	೪೬-೪೭		೧೪		೨೫
29	Tu	೨೯	ಮ		೧೩	೭-೦೪	ಜ್ಯೇಷ್ಠಾ	೪೮-೪೫		೧೫		೨೬
30	W	೩೦	ಬು		೧೪	೭-೦೫	ಮೂಲಾ	೪೯-೦೨		೧೬		೨೭
31	Th	೩೧	ಗು		●	೫-೪೩	ಪೂರ್ವಾಷಾಢಾ	೪೮-೦೨		೧೭		೨೮

ಕರ್ತನಿಗೆ ದಿನ ದಿನಕ್ಕೆ ಕೊಂಡಾಡಿರಿ, ಭಾರಿ
ಉಪಕಾರಗಳನ್ನು ನಮಗೆ ಮಾಡುತ್ತಾನೆ; ದೇವರು ನಮ್ಮ ರಕ್ಷಣೆಯಾಗಿದ್ದಾನೆ.
ಕೀರ್ತ. ೬೮, ೧೯.

1891 DECEMBER—ದಶಂಬರ ೧೮೯೧

ತಾರೀಖು	ಸೂರ್ಯ ಉದಯ ಘಂಟೆ	ಸೂರ್ಯ ಉದಯ ನಿಮಿಷ	ಸೂರ್ಯ ಅಸ್ತ ಘಂಟೆ	ಸೂರ್ಯ ಅಸ್ತ ನಿಮಿಷ	ಚಂದ್ರ ಉದಯ ಘಂಟೆ	ಚಂದ್ರ ಉದಯ ನಿಮಿಷ	ಚಂದ್ರ ಉಚ್ಚ ಘಂಟೆ	ಚಂದ್ರ ಉಚ್ಚ ನಿಮಿಷ	ಚಂದ್ರ ಅಸ್ತ ಘಂಟೆ	ಚಂದ್ರ ಅಸ್ತ ನಿಮಿಷ
					ಪ್ರಾತಃ.		ಹಗಲು		ಸಾಯಂ.	
೧	೬	೬	೫	೫೦	೫	೪೬	೧೧	೫೮	೫	೨೨
೨	೬	೬	೫	೫೦	೬	೪೪	ಮಧ್ಯಾಹ್ನ ೧೨	೫೮	೬	೧೭
೩	೬	೧೦	೫	೫೧	೭	೪೦	೧	೨೬	೭	೧೧
೪	೬	೧೧	೫	೫೧	೮	೩೪	೧	೨೪	೮	೦
೫	೬	೧೧	೫	೫೧	೧೦	೨೬	೪	೧೮	೧೦	೬
೬	೬	೧೨	೫	೫೨	೧೧	೧೬	೫	೧೦	೧೧	೨
೭	೬	೧೨	೫	೫೨	೧೧	೦	೬	೮	ಪ್ರಾತಃ.	
೮	೬	೧೩	೫	೫೨	೧೧	೪೪	೬	೫೦	೧೧	೧
೯	೬	೧೪	೫	೫೩	೧	೧೭	೭	೩೮	೧೧	೫೮
೧೦	೬	೧೪	೫	೫೩	೧	೫೨	೭	೨೮	೧೨	೪೮
೧೧	೬	೧೫	೫	೫೩	೧	೨೮	೮	೧೮	೧೨	೩೮
೧೨	೬	೧೫	೫	೫೪	೧	೪೬	೮	೫೮	೧೩	೨೮
೧೩	೬	೧೬	೫	೫೪	೨	೨೪	೯	೩೮	೧೪	೧೮
೧೪	೬	೧೬	೫	೫೪	೨	೫೮	೧೦	೧೮	೧೪	೫೮
೧೫	೬	೧೭	೫	೫೫	೩	೩೨	೧೦	೫೮	೧೫	೩೮
೧೬	೬	೧೭	೫	೫೫	೪	೬	೧೧	೩೮	೧೬	೧೮
೧೭	೬	೧೮	೫	೫೫	೪	೪೦	ಹಗಲು ೧೨	೧೮	೧೬	೫೮
೧೮	೬	೧೮	೫	೫೬	೫	೧೪	೧	೫೮	೧೭	೩೮
೧೯	೬	೧೯	೫	೫೬	೫	೪೮	೧	೩೮	೧೮	೧೮
೨೦	೬	೧೯	೫	೫೭	೬	೨೨	೨	೧೮	೧೮	೫೮
೨೧	೬	೨೦	೫	೫೭	೬	೫೬	೨	೫೮	೧೯	೩೮
೨೨	೬	೨೦	೫	೫೭	೭	೩೦	೩	೩೮	೧೯	೧೮
೨೩	೬	೨೧	೫	೫೮	ಪ್ರಾತಃ.		೩	೧೮	೧೯	೫೮
೨೪	೬	೨೧	೫	೫೮	೧	೧೬	೪	೫೮	೨೦	೩೮
೨೫	೬	೨೧	೫	೫೮	೧	೫೬	೪	೩೮	೨೦	೧೮
೨೬	೬	೨೨	೫	೫೯	೨	೩೬	೫	೧೮	೨೦	೫೮
೨೭	೬	೨೨	೫	೫೯	೩	೧೬	೫	೫೮	೨೧	೩೮
೨೮	೬	೨೩	೫	೫೯	೩	೫೬	೬	೩೮	೨೧	೧೮
೨೯	೬	೨೩	೫	೬೦	೪	೩೬	೬	೧೮	೨೧	೫೮
೩೦	೬	೨೪	೫	೬೦	೫	೧೬	೬	೫೮	೨೨	೩೮
೩೧	೬	೨೪	೫	೬೦	೫	೫೬	ಮಧ್ಯಾಹ್ನ ೧೨	೩೮	೨೨	೧೮

ಕುಜಾದಿ ಪಂಚಗ್ರಹರ ಉದಯೋಚ್ಚಾಸ್ತಮಯಗಳನ್ನು ತೋರಿಸುವ ಪಟ್ಟಿ

ಗ್ರಹ	ತಾರೀಖು	ಉದಯ	ಉಚ್ಚ	ಅಸ್ತ
		ಪ್ರಾತಃ. ಘ. ನಿ.	ಪ್ರಾತಃ. ಘ. ನಿ.	ಮಧ್ಯಾ. ಘ. ನಿ.
ಕುಜ	೧	೨ ೫೭	೯ ೪೯	೨ ೫೯
	೧೫	೨ ೪೪	೯ ೨೨	೨ ೨೨
	೨೯	೨ ೨೧	೮ ೧೯	೧ ೫೪
	೩೧	೨ ೨೬	೮ ೧೨	೧ ೫೯
		ಪ್ರಾತಃ. ಘ. ನಿ.	ಮಧ್ಯಾ. ಘ. ನಿ.	ಸಾಯಂ ಘ. ನಿ.
ಬುಧ	೧	೨ ೪೪	೧ ೧೯	೬ ೫೪
	೧೫	೨ ೪೨	೧ ೧೯	೬ ೫೬
	೨೯	೨ ೨೨	೧೨ ೧೬	೫ ೫೨
	೩೧	೫ ೫೮	೧೧ ೨೮	೫ ೧೮
		ಹಗಲು ಘ. ನಿ.	ಸಾಯಂ ಘ. ನಿ.	ರಾತ್ರಿ ಘ. ನಿ.
ಗುರು	೧	೧೧ ೫೨	೫ ೪೪	೧೧ ೨೬
	೧೫	೧೧ ೧೮	೫ ೯	೧೧ ೩
	೨೯	೧೦ ೪೨	೪ ೫೫	೧೦ ೨೯
	೩೧	೧೦ ೧೯	೪ ೨೨	೧೦ ೧೫
		ಪ್ರಾತಃ. ಘ. ನಿ.	ಮಧ್ಯಾ. ಘ. ನಿ.	ಸಾಯಂ ಘ. ನಿ.
ಶುಕ್ರ	೧	೨ ೪೨	೧ ೧೯	೬ ೫೫
	೧೫	೨ ೫೬	೧ ೨೪	೨ ೧೧
	೨೯	೬ ೯	೧ ೪೯	೨ ೧೨
	೩೧	೬ ೧೨	೧ ೫೬	೨ ೨೨
		ರಾತ್ರಿ ಘ. ನಿ.	ಪ್ರಾತಃ. ಘ. ನಿ.	ಹಗಲು ಘ. ನಿ.
ಶನಿ	೧	೧೨ ೫೬	೬ ೫೯	೧ ೦
	೧೫	೧೨ ೧೯	೬ ೨೧	೧೨ ೨೬
	೨೯	೧೧ ೪೧	೫ ೪೬	೧೧ ೫೫
	೩೧	೧೧ ೨೫	೫ ೨೬	೧೧ ೪೯

೧೮೯೧ನೇ ವರ್ಷದ ಸೂಕ್ಷ್ಮನೂತನ ದೃಕ್ಸಿದ್ಧಾಂತ ಪಂಚಾಂಗವು.

ಈ ೧೮೯೧ನೇ ವರ್ಷದ ಆದಿಯಲ್ಲಿ ಚಿತ್ರಾ ನಕ್ಷತ್ರದ ಅಯನಾಂಶವು ಸೂರ್ಯಸಿದ್ಧಾಂತ ಪ್ರಕಾರ ಭಾಗ ೨೨ ಕಲೆ ೧೯ ವಿಕಲೆ ೨೬ ಎಂದೂ, ವರ್ಷದ ಅಂತ್ಯದಲ್ಲಿ ಭಾಗ ೨೨ ಕಲೆ ೨೦ ವಿಕಲೆ ೧೬ ಎಂದೂ ಗಣಿಸಲ್ಪಟ್ಟಿದೆ.

ಮಹಾ ನಕ್ಷತ್ರವೆಂಬ ಸೂರ್ಯನಕ್ಷತ್ರ ಆರಂಭಿಸುವ ಕಾಲ.

ನಕ್ಷತ್ರದ ಹೆಸರು	ತಿಂಗಳು	ತಾ.	ಹೊತ್ತು	ಘಂಟೆ	ನಕ್ಷತ್ರದ ಹೆಸರು	ತಿಂಗಳು	ತಾ.	ಹೊತ್ತು	ಘಂಟೆ
ಉತ್ತರಾಷಾ.	ಜನವರಿ	೯	ಮಧ್ಯಾನ್ಹ	೧	ಪುಷ್ಯಾ	ಜುಲಾಯಿ	೧೯	ಸಾಯಂ.	೪
ಶ್ರವಣಾ	"	೨೨	"	೩	ಆಶ್ಲೇಷಾ	ಆಗೊಸ್ತು	೧	"	೩॥
ಧನಿಷ್ಠಾ	ಫೆಬ್ರುವರಿ	೪	ಸಾಯಂ.	೬	ಮಘಾ	"	೧೫	ಮಧ್ಯಾನ್ಹ	೧
ಶತಭಿಷಾ	"	೧೭	ರಾತ್ರಿ	೧೧	ಹುಬ್ಬಾ	"	೨೯	ಪ್ರಾತಃ.	೯
ಪೂರ್ವಾಭಾ.	ಮಾರ್ಚಿ	೩	ಪ್ರಾತಃ.	೫	ಉತ್ತರಾ	ಸಪ್ತಂಬರ	೧೨	"	೩
ಉತ್ತರಾಭಾ.	"	೧೬	ಮಧ್ಯಾನ್ಹ	೧॥	ಹಸ್ತಾ	"	೨೫	ಸಾಯಂ.	೬॥
ರೇವತೀ	"	೨೯	ರಾತ್ರಿ	೧೧॥	ಚಿತ್ರಾ	ಒಕ್ತೋಬರ	೯	ಪ್ರಾತಃ.	೭॥
ಅಶ್ವಿನೀ	ಏಪ್ರಿಲ್	೧೨	ಮಧ್ಯಾನ್ಹ	೨	ಸ್ವಾತೀ	"	೨೨	ಸಾಯಂ.	೫॥
ಭರಣೀ	"	೨೬	ಪ್ರಾತಃ.	೫॥	ವಿಶಾಖಾ	ನವಂಬರ	೫	ಪ್ರಾತಃ	೧॥
ಕೃತ್ತಿಕಾ	ಮೇ	೯	ರಾತ್ರಿ	೧೧॥	ಅನುರಾಧಾ	"	೧೯	"	೯
ರೋಹಿಣೀ	"	೨೩	ಮಧ್ಯಾನ್ಹ	೧೨	ಜ್ಯೇಷ್ಠಾ	ದಶಂಬರ	೧	ಹಗಲು	೧೧॥
ಮೃಗತಿರಾ	ಜೂನ್	೬	ಸಾಯಂ.	೫॥	ಮೂಲಾ	"	೧೪	"	೩.
ಆರ್ದ್ರಾ	"	೨೦	"	೫	ಪೂರ್ವಾಷಾ.	"	೨೬	ಸಾಯಂ.	೫
ಪುನರ್ವಸೂ	ಜುಲಾಯಿ	೪	"	೪॥					

ದೃಕ್ಸಿದ್ಧ ಸಂಕ್ರಮಣಕಾಲದ ಘಳಿಗೆ ವಿಘಳಿಗೆಗಳು.

(ಸ್ಫುಟ ಸೂರ್ಯೋದಯಾದಿ.)

ತಿಂಗಳು	ತಾರೀಕು	ವಾರ	ಘಳಿಗೆ ವಿಘಳಿಗೆ	ರಾಶಿ ಸಂಕ್ರಮ	ತಿಂಗಳು	ತಾರೀಕು	ವಾರ	ಘಳಿಗೆ ವಿಘಳಿಗೆ	ರಾಶಿ ಸಂಕ್ರಮ
ಜನವರಿ	೧೫	ಚಂದ್ರವಾರ	೩೨-೨೫	ಮಕರ	ಜುಲಾಯಿ	೧೪	ಮಂಗಳವಾರ	೫೬-೩೬	ಕರ್ಕಾಟ
ಫೆಬ್ರುವರಿ	೧೧	ಬುಧವಾರ	೪-೪೪	ಕುಂಭ	ಆಗೊಸ್ತು	೧೫	ಶನಿವಾರ	೧೭-೩೦	ಸಿಂಹ
ಮಾರ್ಚಿ	೧೫	ಗುರುವಾರ	೫೭-೩೨	ಮೀನ	ಸಪ್ತಂಬರ	೧೫	ಮಂಗಳವಾರ	೧೭-೧೪	ಕನ್ಯಾ
ಏಪ್ರಿಲ್	೧೫	ಆದಿತ್ಯವಾರ	೧೯-೩೭	ಮೇಷ	ಒಕ್ತೋಬರ	೧೫	ಗುರುವಾರ	೪೭- ೧	ತುಲಾ
ಮೇ	೧೫	ಬುಧವಾರ	೧೫-೩೦	ವೃಷಭ	ನವಂಬರ	೧೪	ಶನಿವಾರ	೪೭- ೫	ವೃಶ್ಚಿಕ
ಜೂನ್	೧೩	ಶನಿವಾರ	೨೯-೨೫	ಮಿಥುನ	ದಶಂಬರ	೧೪	ಚಂದ್ರವಾರ	೨೧-೪೭	ಧನು

ಭೂಸನ್ನಿಕರ್ಷಣ ಭೂವಿಪ್ರಕರ್ಷಣ

ಅಂದರೆ ಚಂದ್ರನು ಭೂಮಿಗೆ ಸಮೀಪ (Perigee) ಮತ್ತು ದೂರ (Apogee) ಇರುವ ಸಮಯ ತಿಳಿಯಲಿಕ್ಕೆ.

ತಿಂಗಳು	ತಾರೀಕು	ಹೊತ್ತು	ಘಂಟೆ	ತಿಂಗಳು	ತಾರೀಕು	ಹೊತ್ತು	ಘಂಟೆ
ಜನವರಿ	೧೨	ಪ್ರಾತಃ.	೭	ಜನವರಿ	೨೬	ಸಾಯಂ.	೯
ಫೆಬ್ರುವರಿ	೯	ಸಾಯಂ.	೬	ಫೆಬ್ರುವರಿ	೨೩	ರಾತ್ರಿ	೧೧
ಮಾರ್ಚಿ	೧೦	ಪ್ರಾತಃ.	೭	ಮಾರ್ಚಿ	೨೩	ಪ್ರಾತಃ.	೭
ಏಪ್ರಿಲ್	೭	ಹಗಲು	[illegible]	ಏಪ್ರಿಲ್	೧೯	ಸಾಯಂ.	೫
ಮೇ	೫	"	[illegible]	ಮೇ	೧೭	ಹಗಲು	೧೧
ಜೂನ್	೧	ಪ್ರಾತಃ.	[illegible]	ಜೂನ್	೧೪	ಪ್ರಾತಃ.	೭
"	೨೭	"	೧೦	ಜುಲಾಯಿ	೧೧	ರಾತ್ರಿ	೧೨
ಜುಲಾಯಿ	೨೩	ರಾತ್ರಿ	೯	ಆಗೊಸ್ತು	೮	ಹಗಲು	೩
ಆಗೊಸ್ತು	೨೧	ಪ್ರಾತಃ.	೨	ಸಪ್ತಂಬರ	೫	ಪ್ರಾತಃ.	೧
ಸಪ್ತಂಬರ	೧೪	ಮಧ್ಯಾನ್ಹ	೧೨	ಒಕ್ತೋಬರ	೨	"	೩
ಒಕ್ತೋಬರ	೧೪	ರಾತ್ರಿ	೧೧	"	೨೯	"	೯
ನವಂಬರ	೧೪	ಪ್ರಾತಃ.	೩	ನವಂಬರ	೨೫	"	೨
ದಶಂಬರ	೧೧	ರಾತ್ರಿ	೧೨	ದಶಂಬರ	೨೩	ರಾತ್ರಿ	೧೧

೧೮೯೧ರಲ್ಲಿ ಕುಜಾದಿ ಗ್ರಹಗಳ ರಾಶಿಪ್ರವೇಶಕಾಲಗಳು.

ಗ್ರಹ	ಯಾವ ಸಮಯದಿಂದ		ಯಾವ ಸಮಯದ ವರೆಗೆ					ಯಾವ ರಾಶಿಯಲ್ಲಿ
	ತಿಂಗಳು	ತಾ.	ತಿಂಗಳು	ತಾ.	ಹೊತ್ತು	ಘ.	ನಿ.	
Mars ಕುಜಸ್ಥಿತಿ	ಜನವರಿ	೧	ಜನವರಿ	೧೫	ರಾತ್ರಿ	೯	೧೪	ಕುಂಭದಲ್ಲಿ
	"	೧೫	ಫೆಬ್ರುವರಿ	೨೫	ಸಾಯಂಕಾಲ	೪	೫೬	ಮೀನ
	ಫೆಬ್ರುವರಿ	೨೫	ಏಪ್ರಿಲ್	೯	ಪ್ರಾತಃಕಾಲ	೧೨	೧೬	ಮೇಷ
	ಏಪ್ರಿಲ್	೯	ಮೇ	೨೩	"	೨	೪	ವೃಷಭ
	ಮೇ	೨೩	ಜುಲಾಯಿ	೬	ಸಾಯಂಕಾಲ	೬	೩೪	ಮಿಥುನ
	ಜುಲಾಯಿ	೬	ಅಗೊಸ್ತು	೨೩	ಮಧ್ಯಾನ್ಹ	೧	೧೧	ಕರ್ಕಾಟಕ
	ಅಗೊಸ್ತು	೨೩	ಒಕ್ತೋಬರ	೯	ಸಾಯಂಕಾಲ	೬	೫೧	ಸಿಂಹ
	ಒಕ್ತೋಬರ	೯	ನವಂಬರ	೨೬	ಪ್ರಾತಃಕಾಲ	೩	೨೨	ಕನ್ಯಾ
	ನವಂಬರ	೨೬	ದಶಂಬರ	೩೧	ರಾತ್ರಿ	೧೨	೦	ತುಲಾರಾಶಿಯಲ್ಲಿ
Mercury ಬುಧಸ್ಥಿತಿ	ಜನವರಿ	೧	ಜನವರಿ	೧೪	ಸಾಯಂಕಾಲ	೭	೩೬	ಮಕರದಲ್ಲಿ
	"	೧೪	ಫೆಬ್ರುವರಿ	೭	ಪ್ರಾತಃಕಾಲ	೧	೫	ಕುಂಭನುಪನಲ್ಲಿ
	ಫೆಬ್ರುವರಿ	೭	ಮಾರ್ಚಿ	೧	"	೯	೩೧	ಮಕರ
	ಮಾರ್ಚಿ	೧	"	೧೪	ಮಧ್ಯಾನ್ಹ	೨	೨೧	ಕುಂಭ
	"	೧೪	ಏಪ್ರಿಲ್	೨	"	೨	೧೪	ಮೀನ
	ಏಪ್ರಿಲ್	೨	"	೨೪	ಪ್ರಾತಃಕಾಲ	೪	೪೦	ಮೇಷ
	"	೨೪	ಮೇ	೪	ಸಾಯಂಕಾಲ	೪	೪೪	ವೃಷಭ
	ಮೇ	೪	ಜೂನ್	೭	ಪ್ರಾತಃಕಾಲ	೪	೩	ವಕ್ರಮೇಷದಲ್ಲಿ
	ಜೂನ್	೭	"	೨೬	ಸಾಯಂಕಾಲ	೬	೪೭	ವೃಷಭ
	"	೨೬	ಜುಲಾಯಿ	೧೦	ರಾತ್ರಿ	೯	೩೪	ಮಿಥುನ
	ಜುಲಾಯಿ	೧೦	"	೨೬	ಮಧ್ಯಾನ್ಹ	೨	೫೩	ಕರ್ಕಾಟಕ
	"	೨೬	ಅಗೊಸ್ತು	೧೪	ಪ್ರಾತಃಕಾಲ	೭	೧೯	ಸಿಂಹ
	ಅಗೊಸ್ತು	೧೪	ಸಪ್ತಂಬರ	೧೧	"	೯	೫೪	ಕನ್ಯಾ
	ಸಪ್ತಂಬರ	೧೧	ಒಕ್ತೋಬರ	೨	ರಾತ್ರಿ	೧೦	೧೪	ವಕ್ರಸಿಂಹದಲ್ಲಿ
	ಒಕ್ತೋಬರ	೨	"	೨೧	ಪ್ರಾತಃಕಾಲ	೧೨	೧೩	ಕನ್ಯಾ
	"	೨೧	ನವಂಬರ	೯	"	೯	೫೦	ತುಲಾ
	ನವಂಬರ	೯	"	೨೯	"	೫	೨	ವೃಶ್ಚಿಕ
	"	೨೮	ದಶಂಬರ	೩೧	ರಾತ್ರಿ	೧೨	೦	ಧನುರಾಶಿಯಲ್ಲಿ
Jupiter ಗುರುಸ್ಥಿತಿ	ಜನವರಿ	೧	ಫೆಬ್ರುವರಿ	೩	ಪ್ರಾತಃಕಾಲ	೯	೨	ಮಕರದಲ್ಲಿ
	ಫೆಬ್ರುವರಿ	೩	ದಶಂಬರ	೩೧	ರಾತ್ರಿ	೧೨	೦	ಕುಂಭದಲ್ಲಿ
Venus ಶುಕ್ರಸ್ಥಿತಿ	ಜನವರಿ	೧	ಜನವರಿ	೩೪	ಪ್ರಾತಃಕಾಲ	೩	೧೪	ವೃಶ್ಚಿಕದಲ್ಲಿ
	"	೩೪	ಫೆಬ್ರುವರಿ	೨೩	,,	೧೦	೪೪	ಧನು
	ಫೆಬ್ರುವರಿ	೨೩	ಮಾರ್ಚಿ	೨೩	,,	೬	೪೦	ಮಕರ
	ಮಾರ್ಚಿ	೨೩	ಏಪ್ರಿಲ್	೧೧	,,	೧೨	೩೨	ಕುಂಭ
	ಏಪ್ರಿಲ್	೧೧	ಮೇ	೧೩	,,	೬	೪೦	ಮೀನ
	ಮೇ	೧೩	ಜೂನ್	೧೦	,,	೭	೧೦	ಮೇಷ
	ಜೂನ್	೧೦	ಜುಲಾಯಿ	೪	,,	೭	೪೧	ವೃಷಭ
	ಜುಲಾಯಿ	೪	"	೩೦	ಸಾಯಂಕಾಲ	೪	೩೭	ಮಿಥುನ
	"	೩೦	ಅಗೊಸ್ತು	೨೩	ಪ್ರಾತಃಕಾಲ	೧	೪೪	ಕರ್ಕಾಟಕ
	ಅಗೊಸ್ತು	೨೩	ಸಪ್ತಂಬರ	೧೬	,,	೪	೪೪	ಸಿಂಹ
	ಸಪ್ತಂಬರ	೧೬	ಒಕ್ತೋಬರ	೧೦	,,	೭	೧೪	ಕನ್ಯಾ
	ಒಕ್ತೋಬರ	೧೦	ನವಂಬರ	೩	,,	೭	೧೪	ತುಲಾ
	ನವಂಬರ	೩	"	೨೭	,,	೭	೬	ವೃಶ್ಚಿಕ
	"	೨೭	ದಶಂಬರ	[illegible]	,,	೭	೨೯	ಧನು
	ದಶಂಬರ	೨೧	"	[illegible]	ರಾತ್ರಿ	೧೨	೦	ಮಕರದಲ್ಲಿ
Saturn ಶನಿಸ್ಥಿತಿ	ಜನವರಿ	೧	ಸಪ್ತಂಬರ	[illegible]	ಹಗಲು	೧೧	೪೯	ಸಿಂಹದಲ್ಲಿ
	ಸಪ್ತಂಬರ	೧೬	ದಶಂಬರ	೩೧	ರಾತ್ರಿ	೧೨	೦	ಕನ್ಯೆಯಲ್ಲಿ
Moon's ascending node ರಾಹುಸ್ಥಿತಿ	ಜನವರಿ	೧	ದಶಂಬರ	೩೧	ರಾತ್ರಿ	೧೨	೦	ಸದಾವೃಷಭದಲ್ಲೇ

೧೮೯೧ನೇ ಇಸವಿಯಲ್ಲಿ ಸಂಭವಿಸುವ

ಗ್ರಹಣಗಳು.

ಈ ವರ್ಷ ಸೂರ್ಯ ಗ್ರಹಣಗಳೆರಡು, ಚಂದ್ರಗ್ರಹಣಗಳೆರಡು, ಹೀಗೆ ನಾಲ್ಕು; ಇವುಗಳಲ್ಲಿ ಚಂದ್ರಗ್ರಹಣಗಳೇ ನಮಗೆ ಗೋಚರ. ಇನ್ನೊಂದು ಬುಧಸಂಕ್ರಮ ವೆಂಬ ಸೂರ್ಯಬುಧ ಸಮಾಗಮವು ಕೂಡ ಇಲ್ಲಿ ಗೋಚರವಾಗುವಂಥಾದ್ದು.

ಬುಧಸಂಕ್ರಮವೆಂದರೆ ಸೂರ್ಯಬಿಂಬದ ಕೆಳಗಣ ಭಾಗದಿಂದ ಬುಧ ಗ್ರಹ ದಾಟುವ ಅಪರೂಪವಾದದೊಂದು ಜ್ಯೋತಿರ್ವಿನೋದವು. ಶ್ರದ್ಧೇಯವಾದ ಪಂಚಾಂಗವು ಯಾವದೆಂದು ದೃಢೀಕರಿಸಲಿಕ್ಕೆ ಇದರ ವಿವರಣವನ್ನು ನಮ್ಮ ಪ್ರಿಯ ವಾಚಕರಿಗೆ ಸ್ವಲ್ಪ ಮಟ್ಟಿಗೆ ಕೊಡುತ್ತೇವೆ.

ಬುಧನು ವಕ್ರಗತಿಯಲ್ಲಿರುವಾಗ, ಸೂರ್ಯ ಮತ್ತು ಭೂಮಿಗೆ ನಡುವೆ ಬರುವಲ್ಲಿ, ಸೂರ್ಯ ಬುಧರ ಕ್ರಾಂತಿತುಲ್ಯವಿರಲು ಇದು ಸಂಭವಿಸುತ್ತದೆ. ಕರಣಪ್ರಕಾಶವೆಂಬ ಗ್ರಂಥದಲ್ಲಿ (ಇದು ಗ್ರಹಯುತಿ ಅಥವಾ ಗ್ರಹಯುದ್ಧವೆಂದು) ಹೇಳೋಣಾಗಿದೆ. ಮೇ ತಾರೀಕು ೧೦ನೇ ಆದಿತ್ಯವಾರ ಸೂರ್ಯೋದಯಕ್ಕೆ ಮುಂಚೆ (ಅಂದರೆ ೪ ಘಂಟೆ ೫೦ ನಿಮಿಷ ೫೧ ಸೆಕುಂದಿಗೆ ಸೂರ್ಯಪರಿಧಿಗೆ ಬುಧಸ್ಪರ್ಶವಾಗುತ್ತದೆ. ಮತ್ತು ೪ ಘಂಟೆ ೫೫ ನಿಮಿಷ ೪೪ ಸೆಕುಂದಿಗೆ ಸೂರ್ಯಪರಿಧ್ಯಂತರ್ಗಮನವಾಗುತ್ತದೆ. ಮಂಗಳೂರಿಗೆ ಸೂರ್ಯೋದಯವೇ ಘಂಟೆ ೫ ನಿಮಿಷ ೩೬ ಸೆಕುಂದ ೪೯ಕ್ಕೆ ಆಗುವದರಿಂದ ಅಂಥಾ ಸ್ಪರ್ಶಕಾಲವು ನಮಗೆ ಕಾಣದು. ಹಾಗಾದರೆ ಹ್ಯಾಗೆ ನಂಬಬಹುದು? ಎಂದು ಪ್ರಶ್ನೆ ಬಂದರೆ, ಸುಲಭವಾಗಿ ಉತ್ತರ ಕೊಡಬಹುದು. ಸೂರ್ಯೋದಯವಾಗುತ್ತಲೇ ಸೂರ್ಯನನ್ನು ನೋಡಿದರೆ, ಕೆಳಭಾಗದಲ್ಲಿ ಕಪ್ಪಾದ ಬುಧ ಬಿಂದುವು (ಹೊಗೆ ಕೊಟ್ಟ ದುರ್ಬೀನಿಯಿಂದ ನೋಡಿದರೆ), ಕಾಣುವದು. ಘಂಟೆ ೬ ನಿಮಿಷ ೧೯ ಸೆಕುಂದ ೩೧ಕ್ಕೆ ಸೂರ್ಯಮಧ್ಯಕ್ಕೂ ಬುಧಮಧ್ಯಕ್ಕೂ ೧೨ ಕಲೆ ೩೪ ವಿಕಲೆ ಅಂತರವಿರುವದು. ಕಡೆಗೆ ಘಂಟೆ ೯ ನಿಮಿಷ ೪೩ ಸೆಕುಂದ ೧೬ಕ್ಕೆ ಸೂರ್ಯಪರಿಧ್ಯಂತರ ಮೋಕ್ಷವೂ, ಘಂಟೆ ೯ ನಿಮಿಷ ೪೮ ಸೆಕುಂದ ೧೧ಕ್ಕೆ ಸೂರ್ಯ ಪರಿಧಿ ಬಹಿರ್ಮೋಕ್ಷವಾಗುವದು. ಈ ಮಂಗಳೂರು ಸಮಯವನ್ನು ಗಡಿಯಾಲಿಂದ ಜಾಗರೂಕತೆಯೊಡನೆ ಪರೀಕ್ಷಿಸಿದರೆ, ಈ ಪಂಚಾಂಗದ ಸೂಕ್ಷ್ಮತೆಯು ವಿದಿತವಾಗದೆ ಹೋಗದು. ಈ ಮೋಕ್ಷಕಾಲದ ನಿಶ್ಚಯದಿಂದ ಸ್ಪರ್ಶಕಾಲದ ನಿಶ್ಚಯ ಕೂಡ ಬುದ್ಧಿಗೆ ಗೋಚರವಾದಂತಾದೀತು. ಈ ದಿವಸ ಪರಹಿತ ದೃಗ್ಗಣಿತಗಳೆರಡರಿಂದಲೂ ಸೂರ್ಯಬುಧ ಸ್ಫುಟಗಳು ತುಲ್ಯವಾಗುವದಿಲ್ಲ! ನೋಡಿರಿ! "ಪ್ರತ್ಯಕ್ಷಂ ಜ್ಯೋತಿಷಂ ಶಾಸ್ತ್ರಮ್" ಹೀಗನ್ನುವದು ಠಕ್ಕೋ? ನಿಜವೋ? ನಿಜವಹುದಾದರೆ, ಸೂರ್ಯಬುಧ ಸ್ಫುಟಗಳೆರಡೂ ತುಲ್ಯವಾಗದೆ ಸಂಕ್ರಮ ಸಂಭವ ಹ್ಯಾಗಾಯಿತೆಂದು ವಿಚಾರಿಸ ಬೇಕಲ್ಲವೆ?

೧೮೯೧ನೇ ಇಸವಿಯ ನವಂಬರ ೧೦ರಲ್ಲಿ ಪುನಃ ಬುಧಸಂಕ್ರಮ ಬರುವದುಂಟು. ಅದು ನಮಗೆ ಕಾಣದು.

I. ಮೇ ೨೩ ವೈಶಾಖ ಪೂರ್ಣಿಮಾ ರಾತ್ರಿಯಲ್ಲಿ ಚಂದ್ರಗೆ ಪೂರ್ಣ ಗ್ರಹಣ.

	ಮಂಗಳೂರು ಕಾಲ				ಮದ್ರಾಸ್ ಕಾಲ			
ಆಗ್ನೇಯ ಸ್ಪರ್ಶ	ಘಂಟೆ	೯	ನಿಮಿಷ	೪೦III	ಘಂಟೆ	೧೦	ನಿಮಿಷ	೨I
ಪೂರ್ಣ ಗ್ರಾಸಾರಂಭ	"	೧೦	"	೪೯	"	೧೧	"	೧೦III
ಮಧ್ಯಕಾಲ	"	೧೧	"	೨೪II	"	೧೧	"	೫೦I
ಪೂರ್ಣ ಗ್ರಾಸಾಂತ	"	೧೨	"	೯	"	೧೨	"	೨೯III
ಶುದ್ಧ ಪಶ್ಚಿಮದಿಂ ಗ್ರಹಣಮೋಕ್ಷ	"	೧	"	೧೬II	"	೧	"	೫೯

ಗ್ರಹಣಾದ್ಯಂತ ಘಂಟೆ ೬ ನಿಮಿಷ ೬೪III ಇರುವದು.

II ಜೂನ್ ೬ ವೈಶಾಖ ಅಮಾವಾಸ್ಯೆ ಸೂರ್ಯಗೆ ಕಂಕಣ ಗ್ರಹಣ ರಾತ್ರಿ ಘಂಟೆ ೭ಕ್ಕೆ ಆರಂಭಿಸುವದರಿಂದ ಇಲ್ಲಿಗೆ ಅದೃಶ್ಯ; ವಿಲಾಯತಿ ಮತ್ತು ಉತ್ತರ ಅಮೆರಿಕದಲ್ಲಿ ಗೋಚರ.

III ನವಂಬರ ೧೫ ಕಾರ್ತಿಕ ಪೂರ್ಣಿಮಿ ರಾತ್ರಿ (ಅಂದರೆ ವಿಲಾಯತಿ ಕ್ರಮದ ಪ್ರಕಾರ ೧೬ನೇ ಪ್ರಾತಃಕಾಲ) ಚಂದ್ರನ ಪೂರ್ಣ ಗ್ರಹಣ.

	ಮಂಗಳೂರು ಕಾಲ				ಮದ್ರಾಸ್ ಕಾಲ			
ಈಶಾನ್ಯ ಸ್ಪರ್ಶ	ಘಂಟೆ	೩	ನಿಮಿಷ	೩೪ll	ಘಂಟೆ	೩	ನಿಮಿಷ	೫೬
ಪೂರ್ಣ ಗ್ರಾಸಾರಂಭ	,,	೪	,,	೩೬lll	,,	೪	,,	೫೮ll
ಮಧ್ಯಕಾಲ	,,	೫	,,	೧೮l	,,	೫	,,	೪೦
ಪೂರ್ಣ ಗ್ರಾಸಾಂತ	,,	೫	,,	೫೯lll	,,	೬	,,	೨೧ll
ಪೂರ್ಣಗ್ರಸ್ತ ಚಂದ್ರಾಸ್ತಮಯ	,,	೫	,,	೫೮l	ಮೋಕ್ಷ ಕಾಣದು.			

IV. ದಶಂಬರ ೧ ಕಾರ್ತಿಕ ಅಮಾವಾಸ್ಯೆ ಸೂರ್ಯಗೆ ಪಾರ್ಶ್ವಗ್ರಹಣ. ಹಗಲು ೨ ಘಂಟೆಗೆ ಆರಂಭಿಸುವದಾದರೂ ಇಲ್ಲಿ ಕಾಣದು. ಯಾಕಂದರೆ ಚಂದ್ರನು ಸೂರ್ಯನಿಗಿಂತ ದಕ್ಷಿಣಸ್ಥಿತನಾಗಿ ಅವನತಿಯು ದಕ್ಷಿಣಕ್ಕಾಗುವದರಿಂದ ಚಂದ್ರಚ್ಛಾಯೆ ಭೂಗೋಲದ ಅತಿದಕ್ಷಿಣಕ್ಕೆ ಬೀಳುವದು ಹೀಗಾಗಿ ದಕ್ಷಿಣ ಅಕ್ಷಾಂಶ ೪೦ಕ್ಕಿಂತ ಆಚೆಗೆ ಮಾತ್ರ ಗೋಚರ.

ಯಾವದೊಂದು ಪ್ರಸ್ತಾಪದಿಂದ, ಮಂಗಳೂರು ಸಮಯವು ಮದ್ರಾಸ್ ವೇಧಶಾಲಾ (Observatory) ಸಮಯವಾಗ ಬೇಕಾದರೆ ಶುಮಾರು ೨೧ll ನಿಮಿಷ (ಅಂದರೆ ಸೂಕ್ಷ್ಮವಾಗಿ, ನಿಮಿಷ ೨೧ ಸೆಕುಂದ ೩೭) ಕೂಡ ಬೇಕು. ಉದಾ: ಮೇಲಣ ಬುಧಸಂಕ್ರಮದ ಸೂರ್ಯ ಪರಿಧ್ಯಂತರ ಮೋಕ್ಷ ಮಂಗಳೂರು ಕಾಲ ಪ್ರಾತಃ ಘ. ೯ ನಿ. ೪೩ ಸೆ. ೧೬ಕ್ಕೆ ಆಗುವಲ್ಲಿ ನಮ್ಮ ಗಡಿಯಾಲು ಮದ್ರಾಸ್ ಸಮಯ ತೋರಿಸುವದಾದರೆ ಅದರಲ್ಲಿ ಎಷ್ಟು ಸಮಯವಿರ ಬೇಕು? ೯-೪೩-೧೬+೨೧-೩೭ =೧೦-೪-೩೯.

ಉತ್ತರ ಘ. ೧೦ ನಿ. ೪ ಸೆ. ೩೯ ತೋರಿಸುವದು. ಹಾಗಾದರೆ ಸೂರ್ಯೋದಯದ ಸಮಯದಿಂದ ಮದ್ರಾಸ್ ಘಂಟೆ ೧೦ ನಿಮಿಷ ೪ ವರೆಗೆ ಬುಧನು ಸೂರ್ಯಬಿಂಬದ ಮೇಲೆ ಪೂರ್ವದಿಂದ ಪಶ್ಚಿಮಕ್ಕೆ ತೆಂಕು ದಿಕ್ಕಿಗಾಗಿ ಚಲನವಾಗುವದು ಸ್ಪಷ್ಟವಾಯಿತು. ಸಣ್ಣ ದುರ್ಬೀನಿಗಾದರೂ ಸೂರ್ಯಕನ್ನಡಿ ಅಥವಾ ಕಪ್ಪು ಹಿಡಿಸಿದ ಕನ್ನಡಿ ಹಚ್ಚದೆ ನೋಡಲಾಗದು.

ಪಂಚಾಂಗವಾಚಕರು ಪರೀಕ್ಷಿಸ ಬೇಕಾಗಿ ಈ ವರ್ಷದಾರಭ್ಯ ಗುರುಶುಕ್ರಾಸ್ತೋದಯಗಳಂ ಕೊಟ್ಟಿದ್ದೇವೆ. ದೇವರು ಅನುಗ್ರಹ ಮಾಡಿದರೆ ಮುಂದಕ್ಕೆ ಇತರ ಗ್ರಹರ ಅಸ್ತೋದಯಗಳನ್ನು ಕೊಟ್ಟೇವು. ಕಳದ ೧೯೯೦ನೇ ಇಸವೀ ನವಂಬರ ೨೯ರಿಂದ ದಶಂಬರ ೯ರ ವರೆಗೆ ಶುಕ್ರಗೆ ಅಸ್ತವು. ೧೧ ದಿನ.

ಜನವರಿ ತಾರೀಕು ೨೯ ಗುರು ಪಶ್ಚಾದಸ್ತನಾಗಿ (ಪುಷ್ಯ ಬ. ೪ ಗುರುವಾರ) ಮಾರ್ಚಿ ತಾರೀಕು ೨೩ಗೆ (ಮಾಘಕೃಷ್ಣ ೬ ಚಂದ್ರವಾರ) ಪ್ರಾಗುದಯನಾಗುತ್ತಾನೆ (ಹಾಗಾದರೆ ೩೨ ದಿನ ಗುರು ಅದೃಶ್ಯನಾಗುತ್ತಾನೆ).

ಆಗೊಸ್ತು ೧೩ (ಶ್ರಾವಣ ಶುಕ್ಲ ೯ ಗುರುವಾರಕ್ಕೆ) ಶುಕ್ರನು ಪ್ರಾಗಸ್ತನಾಗಿ ಒಕ್ತೋಬರ ತಿಳನೆಗೆ (ಆಶ್ವೀಜ ಕೃಷ್ಣ ೭ ಶನಿವಾರ) ಪಶ್ಚಾದುದಯನಾಗುತ್ತಾನೆ (ಹಾಗಾದರೆ ೭೪ ದಿನ ಶುಕ್ರನು ದೃಶ್ಯನಲ್ಲಾ). ಪ್ರಾಗಸ್ತವೆಂದರೆ ಪೂರ್ವದಿಕ್ಕಿನಲ್ಲಿ ಸೂರ್ಯಗೆ ಸವಿ ಹೊಸೆ ಅಸ್ತವಾಗುವದು. ಪಶ್ಚಾದುದಯವೆಂದರೆ ಪಶ್ಚಿಮ ದಿಕ್ಕಿನಲ್ಲಿ ಪುನಃ ಕಾಣ ಬರುವದೆಂಬ ಅಭಿಪ್ರಾಯವು. ಈ ಅಸ್ತೋದಯಗಳನ್ನೂ ಬುಧ ಸಂಕ್ರಮ ಗ್ರಹಣಾದಿಗಳನ್ನೂ ಕೂಡ ಪರೀಕ್ಷಿಸಿದರೆ ನಮ್ಮ ಪಂಚಾಂಗವೆಷ್ಟು ಸೂಕ್ಷ್ಮವಾದ್ದೆಂದು ತಿಳಿಯ ಬಹುದು.

ಶುಭಮಸ್ತು.

ವರ್ತಮಾನ ಸಂಗ್ರಹ.

ಮದ್ರಾಸು ಸಂಸ್ಥಾನದಲ್ಲಿರುವ ವಿದ್ಯಾಶಾಲೆಗಳಲ್ಲಿ ಸರಕಾರದವರು ಆಯಾ ಹೊಸ ಕ್ರಮಗಳನ್ನು ಏರ್ಪಡಿಸಿದ್ದಾರೆ. ವರ್ಷಂಪ್ರತಿ ಸಾವಿರ ವಿದ್ಯಾರ್ಥಿಗಳು ಮೆಟ್ರಿಕ್ಯುಲೆಶನ್ ಪರೀಕ್ಷೆಯಲ್ಲಿ ತೇರ್ಗಡೆಯಾಗುತ್ತಾರೆ, ಬಳಿಕ ಇಷ್ಟೇ ಸಾಕೆಂದು ವಿದ್ಯಾಭ್ಯಾಸವನ್ನು ಮುಂದರಿಸದೆ ಒಂದಾನೊಂದು ಚಾಕರಿಯನ್ನು ಹಾರೈಸುತ್ತಾರೆಂದು ಸರಕಾರದವರು ತಿಳಿದು ಮೆಟ್ರಿಕ್ಯುಲೆಶನ್ ಒಂದು ಉದ್ಯೋಗವನ್ನು ಪ್ರವೇಶಿಸುವದಕ್ಕೆ ಸಾಲದು ಎಂದೂ, ಅದು ಸರ್ವ ವಿದ್ಯಾಶಾಲೆಯನ್ನು ಸೇರುವದಕ್ಕೆ ಮಾತ್ರವೇ ಇಟ್ಟದ್ದಾದ ಕಾರಣ ಕೇವಲ ಕೆಳಗಣ ಪರೀಕ್ಷೆ ಕೊಟ್ಟವನಿಗೆ ಹ್ಯಾಗೋ ಹಾಗೆಯೇ ಈ ಪರೀಕ್ಷೆ ಕೊಟ್ಟವನಿಗೂ ಹದಿನೈದು ರೂಪಾಯಿಯ ಚಾಕರಿಯೇ ಸಿಕ್ಕ ಬಹುದೆಂದೂ, ನಿರ್ಣಯ ಮಾಡಿದರು. ಇದಕ್ಕಿಂತ ಹೆಚ್ಚು ಸಿಕ್ಕ ಬೇಕೆಂಬುವವನು ಅದರ ಮುಂದಣ ಪರೀಕ್ಷೆ ಕೊಡ ಬೇಕು ಇಲ್ಲವೆ ಹೊಸತಾಗಿ ನೇಮಿಸಿದ ಅಪ್ಪರ್‌ಸೆಕಂಡೆರಿ ಪರೀಕ್ಷೆ ಕೊಡ ಬೇಕು. ಈ ಪರೀಕ್ಷೆಯನ್ನಲ್ಲದೆ ಪ್ಲೆಮೆರಿ ಎಂಬ ಪರೀಕ್ಷೆಯನ್ನೂ ನೇಮಿಸಿದ್ದಾರೆ. ನಾಲ್ಕನೆ ವರ್ಗದಲ್ಲಿ ಕಲಿಯುವ ಹುಡುಗರು ಅದಕ್ಕೆ ಹೋಗ ಬಹುದು. ಇದರಲ್ಲಿ ತೇರ್ಗಡೆ ಪಟ್ಟವನಿಗೆನೇ ಸರಕಾರದಲ್ಲಿ ಹದಿನೈದು ರೂಪಾಯಿ ಕೆಳಗಣ ಚಾಕರಿ ಸಿಕ್ಕ ಬಹುದು. ಉಪಾಧ್ಯಾಯರಾಗುವವರು ನೊರ್ಮಲ್‌ಸ್ಕೂಲಿಗೆ ಹೋಗುವ ಮೊದಲು ಇದರಲ್ಲಿ ತೇರ್ಗಡೆ ಪಟ್ಟರ ಬೇಕು. ಉಪಾಧ್ಯಾಯರು ನಾಲ್ಕನೆ ವರ್ಗದ ಹುಡುಗರನ್ನು ಈ ಪರೀಕ್ಷೆಗೆ ಕಳಿಸಿದರೆ ಗ್ರಾಂಟು ಪರೀಕ್ಷೆಗೆ ಬದಲಾಗಿ ಒದಗುತ್ತದೆ. ಇದಲ್ಲದೆ ಶಾಲೆಗಳಿಗೆ ಸಂಬಂಧವಾದ ಎಲ್ಲಾ ಕ್ರಮಗಳನ್ನು ವಿದ್ಯಾರ್ಥಿಗಳು ಕೊಡ ತಕ್ಕ ಫೀಸುಗಳನ್ನು ನವೀನವಾಗಿ ವ್ಯವಸ್ಥೆ ಪಡಿಸುವ ಬಗ್ಗೆ ಸರಕಾರದವರು ವಿದ್ಯಾಇಲಾಖೆಯ ಅಧ್ಯಕ್ಷರನ್ನೂ ಅವರ ಸಂಗಡ ಬೇರೆ ಹನ್ನೆರಡು ಮಂದಿಯನ್ನೂ ಪಂಚಾಯತ ಮಂಡಳಿಯಾಗಿ ನೇಮಿಸಿದ್ದಾರೆ.—ತೆಂಕಣ ಆರ್ಕಾಡು ಕಡಪೆ ತಿನವೆಲ್ಲಿ ಜಿಲ್ಲೆಗಳಲ್ಲಿ ಬೆಳಸು ಒಣಗಿ, ಬಡಗ ಆರ್ಕಾಡು ತಿರ್ಜನಾಪಳ್ಳಿ ಕೊಯಮುತ್ತೂರು ಜಿಲ್ಲೆಗಳಲ್ಲಿ ಮಳೆ ಬಹಳ ಕಡಮೆಯಾಗಿ ಜನರಿಗೆ ಅನುಸಂಕಟಕ್ಕೆ ಕಾರಣವಾಯಿತು. ಇನ್ನು ಕೆಲ ಜಿಲ್ಲೆಗಳಲ್ಲಿ ವಾಂತಿಭೇದಿಯೂ ಹಬ್ಬಿ ಕೊಂಡಿತ್ತು.

ಮುಂಬಾಯಿ ಸಂಸ್ಥಾನದಲ್ಲಿ ಮುಖ್ಯ ಸೈನ್ಯಾಧಿಪತಿಯಾಗಿದ್ದ ಡ್ಯೂಕ್ ಅಫ್ ಕನ್ನಾಟ ರಾಜಕುಮಾರರು ಉದ್ಯೋಗವನ್ನು ಬಿಟ್ಟು ಇಂಗ್ಲಾಂಡಿಗೆ ತೆರಳಿದರು. ಮತ್ತು ಮುಂಬಾಯಿ ಗವರ್ನರ್ ಧೊರೆಗಳಾದ ರೇ ಪ್ರಭುಗಳು ಊರಿಗೆ ಹೋದವರಾದ್ದರಿಂದ ಹಾರಿಸ ಪ್ರಭುಗಳು ಅವರ ಸ್ಥಾನಕ್ಕೆ ನೇಮಕವಾಗಿದ್ದಾರೆ. ಮಹಾರಾಣಿ ಚಕ್ರವರ್ತಿನಿಯವರ ಮೊಮ್ಮಕ್ಕಳಾದ ಅಲ್ಬೆರ್ಟ ರಾಜಕುಮಾರರು ಹಿಂದು ಸ್ಥಾನದ ಮುಖ್ಯ ಮುಖ್ಯ ಪಟ್ಟಣಗಳನ್ನು ಸಂಚರಿಸಿ ನೋಡಿಕೊಂಡು ಮರಳಿ ಇಂಗ್ಲಾಂಡಿಗೆ ಹೋಗುವಾಗ ಮುಂಬಾಯಿಯ ಗವರ್ನರ್ ಧೊರೆಗಳು ಮಿಶನೆರಿಗಳನ್ನು ಕರಿಸಿ ಅವರಿಗೆ ಭೇಟ ಮಾಡಿಸಿ ತಾವು ಹಿಂದು ಸಾಮ್ರಾಜ್ಯದ ಸೈನ್ಯಬಲವನ್ನು ವ್ಯಾ

ಪಾರ ಬಲವನ್ನು ಕಂಡಿರಿ; ಈ ರಾಜ್ಯದ ಸನ್ಮಾರ್ಗಬಲವು ಈಗ ತಮ್ಮ ಮುಂದೆ ನಿಂತಿರುವ ಮಿಶನೆರಿಗಳು; ಇವರಿಲ್ಲದೆ ಉಳಿದ ಬಲಗಳೆಲ್ಲಾ ಸಾರವಿಲ್ಲವೆಂದು ಹೇಳಿದರು. ಇದು ಅರ್ಥಯುಕ್ತ ಸಾಕ್ಷಿಯಾಗಿದೆ. ಮುಂಬಾಯಿಯಲ್ಲಿ ಸರ್ ದಿನಶಾಮಣೋಕಜಿ ಪೇಟಿಟ್ ಎಂಬವರಿಗೆ ಮಹಾ ರಾಣಿಯವರು **ಬೆರೊನೆಟ್** ಎಂಬ ಪಾರಂಪರ್ಯ ಬಹುಮಾನ ಪದವಿಯನ್ನು ಕೊಟ್ಟಿದ್ದಾರೆ. ಈ ದೇಶಸ್ಥರೊಳಗೆ ಆ ಪದವಿಯನ್ನು ಪಡೆದವರು ಇವರು ಎರಡನೆಯವರು. ಮೊದಲಾಗಿ ಹೊಂದಿದವರು ಸರ್ ಜಮ್‌ಸೇಟಜಿ ಜಿಜಿಬಾಯಿ ಎಂಬವರು. ಇವರಿಬ್ಬರು ಪಾರ್ಸಿಗೃಹಸ್ಥರು. ಮುಂಬಾಯಿಯಲ್ಲಿ ಕೆಲಸಿಗರೆಲ್ಲರೂ ಕೂಟ ಕೂಡಿ ವಿಧವೆಗಳ ತಲೆ ಬೋಳಿಸುವ ಹೀನವೃತ್ತಿಯ ದೆಸೆಯಿಂದಲೇ ತಮ್ಮ ಜಾತಿಗೆ ಬಡತನವು ತಪ್ಪುವದಿಲ್ಲ; ಹೆಂಗಸಿನ ತಲೆ ಬೋಳಿಸುವದು ಶಾಸ್ತ್ರಕ್ಕೆ ವಿರೋಧವಾಗಿದೆ; ಇನ್ನು ಮೇಲೆ ಯಾವನೂ ವಿಧವೆಯ ತಲೆ ಬೋಳಿಸಬಾರದು; ಅತಿ ವಿಾರಿ ಬೋಳಿಸಿದರೆ ಅವನಿಗೆ ಜಾತಿ ಇಲ್ಲವೆಂದು ಕಟ್ಟು ಮಾಡಿದ್ದಾರೆ. ಕಾಶಿಯಲ್ಲಿ ನಾಲ್ಕು ಕಡೆಯಿಂದಲೂ ಯಾತ್ರಿಕರೂ ಬಂದು ಕೂಡುವದರಿಂದ ಅವರಿಂದ ಮಂಡೆತೆರಿಗೆ ಈಸಿಕೊಳ್ಳ ಬೇಕೆಂದು ಪಟ್ಟಣಾಧಿಕಾರಿಗಳು ನಿರ್ಣಯಿಸಿದ್ದಾರೆ. ಈ ರೀತಿಯಿಂದ ಐವತ್ತು ಸಾವಿರಕ್ಕಿಂತ ಹೆಚ್ಚು ರೂಪಾಯಿ ಉತ್ಪತ್ತಿಯಾದೀತಂತೆ. ಮರೋದಾಬಾದು, ವಿಾರತ್ ಮೊದಲಾದ ಪಟ್ಟಣಗಳ ಪ್ರಾಂತಗಳಲ್ಲಿ ದರೋಡೆ ಕಳ್ಳರ ಅವಾಂತರವು ತಲೆದೋರಿತು.—ಬ್ರಹ್ಮಪುತ್ರ ನದಿಯಲ್ಲಿ ನೆರೆ ಬಂದು ಬಹಳ ನಷ್ಟ ಸಂಭವಿಸಿತು. ಹಲವು ಗ್ರಾಮಗಳು ನೀರಿನಲ್ಲಿ ಮುಳುಗಿ ಹೈರು ಹಾಳಾಗಿ ಪಶುಗಳಿಗೂ ಮೇವು ಇಲ್ಲದೆ ಬಡಬಗ್ಗರಿಗೆ ಆಹಾರವಿಲ್ಲದೆ ಅತಿರೇಕ ಕಷ್ಟವಾಯಿತು. ಹಲವು ವರ್ಷಗಳಿಂದ ಅಂಥಾ ನೆರೆ ಅಲ್ಲಿ ಬಂದದ್ದಿಲ್ಲವಂತೆ.

ಅರಬಸ್ಥಾನದ ಮಕ್ಕಾ ಮದೀನ ಮೊದಲಾದ ಊರುಗಳಲ್ಲಿ ದುಷ್ಕಾಲದ ಬಾಧೆಯು ಘೋರವಾಗಿ ದವಸಧಾನ್ಯಕ್ಕೆ ತತ್ವಾರವಾದದರಿಂದ ಕಳ್ಳರ ತಂಡಗಳು ಹೆಚ್ಚಿದ್ದಾವೆಂದು ವರ್ತಮಾನವದೆ. ಪಾರಸಿಸ್ತಾನದ ಶಾ ಅರಸನು ಯುರೋಪಿನ ಪ್ರಮುಖ ರಾಜ್ಯಗಳನ್ನು ನೋಡಿ ಬರುವದಕ್ಕೆ ಹೊರಟವರು ಅಲ್ಲಲ್ಲಿ ಅರಸರಿಂದಲೂ ಪ್ರಜೆಗಳಿಂದಲೂ ಆಗತಸ್ವಾಗತ ಮಾಡಿಸಿಕೊಂಡು ರುಸ್ಯದೇಶದ ಮಾರ್ಗವಾಗಿ ಸ್ವದೇಶಕ್ಕೆ ಮರಳುವಾಗ್ಯೆ ರೈಲುಗಾಡಿ ಸರಳಿನಿಂದ ಜಾರಿದ್ದರಿಂದ ಅರಸರು ಕೆಳಗೆ ಬಿದ್ದರು. ಹೆಚ್ಚಿನ ಕೆಡಕಾಗಲಿಲ್ಲಾ.—ಮಿಸ್ರ ದೇಶದಲ್ಲಿ ಮತ್ತೊಬ್ಬ ಮಹದಿಯು ಎದ್ದು ದರ್ವೇಶರನ್ನು ಕೂಡಿಸಿ ತಂಟೆ ಮಾಡುವದಕ್ಕೆ ಹತ್ತಿದ್ದನು. ಅಲ್ಲಿರುವ ಇಂಗ್ಲಿಷ ದಳವಾಯಿ ಧೀರರಾದ ಸೈನ್ಯದವರೊಡನೆ ಅವನ ಸಂಗಡ ಕಾದಾಡಲು ಮಹದಿಯು ಸಾವಿರದ ಐನೂರು ಭಟರು ಸಹಿತವಾಗಿ ಕುಡಿದು ಹೋದನು. ಮಿಸ್ರದ ದಕ್ಷಿಣ ಸೀಮೆಯಾದ ಸುದಾನಿನಲ್ಲಿ ಬರಗಾಲದ ಬಾಧೆಯಾಗಿ ಹೊಟ್ಟೆಗಿಲ್ಲದೆ ಬಳಲುವವರು ಸತ್ತು ಹೋದ ಬಂಧುಗಳ ಹೆಣಗಳನ್ನು ಕೂಡ ಭಕ್ಷಣ ಮಾಡುವವರಾದರಂತೆ. ಆಫ್ರಿಕ ಖಂಡವನ್ನು ಮೊದಲೊಮ್ಮೆ ಪರಿಶೋಧನೆ ಮಾಡಿ ಕೀರ್ತಿ ಸಂಪಾದಿಸಿದ ಸ್ಟೆನ್‌ಲಿ ಎಂಬ ಧೈರ್ಯಶಾಲಿಯು ಇನ್ನೊಂದು ಸಾರಿ ಅದೇ ಜಂಬರದ ಮೇಲೆ ಆಫ್ರಿಕ ಖಂಡಕ್ಕೆ ಹೊರಟಿದ್ದನು. ಬಹುಕಾಲ ಅವನ ವರ್ತಮಾನವಿಲ್ಲದ್ದರಿಂದ ಕಾಡಾಡಿಗಳ ಕೈಯಿಂದ ಸತ್ತನೇನೋ ಎಂದು ನೆನಸುವದಾಗಿತ್ತು. ಒಂದು ವರ್ಷದ

ಮೇಲೆ ಅವನೂ ಜತೆಯವರೂ ಪೂರ್ವತೀರಕ್ಕೆ ಬಂದು ತಲಪಿದರು. ಈ ಸ್ತೆನ್‌ಲಿಯ ಸಾಹಸವುಳ್ಳ ಪರಿಶೋಧನೆಗಳಿಂದ ಆಫ್ರಿಕದ ಹಲವು ಪ್ರದೇಶಗಳೂ ಜನಾಂಗಗಳೂ ಯುರೋಪೀಯರ ತಿಳುವಳಿಕೆಗೆ ಬಂದವು. ಯುರೋಪೀಯ ಹರದರು ಆ ದೇಶಗಳಲ್ಲಿ ವ್ಯಾಪಾರ ನಡಿಸುವದಲ್ಲದೆ ಉಪದೇಶಕರೂ ಆ ಕಾಡಾಡಿಗಳ ಬಳಿಗೆ ಹೋಗಿ ವಸ್ತಿ ಮಾಡಿ ಸತ್ಯಧರ್ಮವನ್ನು ಅವರಿಗೆ ಬೋಧಿಸುತ್ತಾರೆ. ಕೇವಲ ಪಶುಪ್ರಾಯವಾಗಿ ಜೀವನ ಮಾಡುತ್ತಿದ್ದ ಆ ಕಿರಾತರಲ್ಲಿ ಬಹು ಜನರು ಯೇಸು ಕ್ರಿಸ್ತನ ಸತ್ಯಧರ್ಮದ ಉಪದೇಶದಿಂದ ಸಭ್ಯರೂ ದೇವಭಕ್ತರೂ ಆದದ್ದು ಕ್ರಿಸ್ತಿಯತ್ವದ ಸತ್ಯತ್ವಕ್ಕೆ ಜೀವಂತ ಸಾಕ್ಷಿಯಾಗಿದೆ.— ಹಬಶಿ ಎಂಬುವ ಅಬಿಸೀನ್ಯ ದೇಶದ ಅರಸನಾದ ಯೋಹಾನನು ಯುದ್ಧದಲ್ಲಿ ಮುಸಲ್ಮಾನರ ಕೈಯಿಂದ ಹತವಾದನಂತೆ.

ಇಂಗ್ಲಾಂಡು. ಪಾರ್ಲಿಮೆಂಟ ಸಭೆಯಲ್ಲಿ ಪ್ರೊತಸ್ತ್ಯಂತರಿಗೂ ರೋಮನ ಕಥೋಲಿಕರಿಗೂ ಮಹಾ ವಿವಾದವು ಸಂಭವಿಸುವ ಹೋಲುವೆ ತೋರುತ್ತದೆ. ಇಂಗ್ಲಾಂಡಿನ ಲೊರ್ಡ ಚನ್ಸಲರ್ ಅಂದರೆ ರಾಜ್ಯದ ಮುಖ್ಯ ಕರಣಿಕತನವೂ ಐರ್ಲಾಂಡಿನ ಉಪರಾಜತ್ವವೂ ಇವೆರಡು ಶ್ರೇಷ್ಠ ಉದ್ಯೋಗಗಳು ರೋಮನಕಥೋಲಿಕರಿಗೆ ಸಿಕ್ಕಬಾರದೆಂದು ಪೂರ್ವದ ರಾಜಶಾಸನವದೆ. ಈ ಶಾಸನವನ್ನು ದುರ್ಬಲ ಪಡಿಸಬೇಕೆಂದು ಕೆಲ ಸಾಮಾಧಿಕರು ಸಭೆಯ ಮುಂದೆ ಪತ್ರಿಕೆ ತಂದಿದ್ದಾರೆ. ರೋಮನ ಕಥೋಲಿಕರಿಗೆ ಈ ಉದ್ಯೋಗಗಳು ಸಿಕ್ಕುವ ಹಾಗಾದರೆ ಸ್ವಮತಸ್ಥರಿಗೆ ಅನುಕೂಲವಾಗಿ ತಮ್ಮ ಅಧಿಕಾರವನ್ನು ಪ್ರಯೋಗಿಸುವರು. ಲೊರ್ಡ ಚನ್ಸಲರ್ ಮಂತ್ರಿಗೆ ಇಂಗ್ಲಿಷ ಸಭೆಯ ಮೇಲಧಿಕಾರವೂ ಬಾಧ್ಯಸ್ತರಿಲ್ಲದ ಆಸ್ತಿಪಾಸ್ತಿಯ ಪಾರುಪತ್ಯವೂ ಮೆಜಿಸ್ಟ್ರೇಟರನ್ನು ನೇಮಿಸುವ ಅಧಿಕಾರವೂ ಅವೆ. ಹೀಗಿರುವದರಿಂದ ಆ ಪತ್ರಿಕೆಯು ನಿರರ್ಥಕವಾಗಿ ಪೂರ್ವದ ಶಾಸನವೇ ಸಿಂಧುವಾಗುವಂತೆ ಅನೇಕರು ಪ್ರಯತ್ನ ಮಾಡುತ್ತಾರೆ. ಪಾರ್ಲಿಮೆಂಟನಲ್ಲಿ ಒಬ್ಬ ಸಾಮಾಧಿಕನು ಮಧುಪಾನದ ಪ್ರಾಬಲ್ಯವನ್ನು ನಿಗ್ರಹಿಸುವದಕ್ಕೆ ನವೀನ ಪತ್ರಿಕೆಯನ್ನು ಸಭೆಯಲ್ಲಿ ತಂದಿದ್ದಾನೆ. ಅದರಲ್ಲಿ ಸೂಚಿತವಾದ ಉಪಾಯಗಳು ಉತ್ತಮವಾದವುಗಳು, ಅವು ಕಾನೂನಾಗಿ ಇಂಗ್ಲಾಂಡಿನಲ್ಲಿಯೂ ಈ ದೇಶದಲ್ಲಿಯೂ ಪ್ರಚಲಿತವಾದರೆ ಪ್ರಜೆಗೆಲ್ಲಾ ಶುಭವಾಗುವದು. ಹಿಂದುಸ್ಥಾನದ ಬೇರೆ ಬೇರೆ ಪಟ್ಟಣಗಳಿಂದ ಇಪ್ಪತ್ತು ಅರ್ಜಿಗಳು ಪಾರ್ಲಿಮೆಂಟಿಗೆ ಹೋಗಿಯವೆ. ಹಿಂದುಸ್ಥಾನದ ಕರಣಿಕರಾದ ಕ್ರೊಸ್ ಪ್ರಭುವು ಏರ್ಪಡಿಸಿದಂಥಾ ಈ ದೇಶದ ನ್ಯಾಯವಿಧಾಯಕಮಂಡಲಿಗಳನ್ನು ಕುರಿತ ಪತ್ರಿಕೆಯನ್ನು ತಳ್ಳಿ ಮಿ. ಬ್ರೈಡ್‌ಲೊ ಏರ್ಪಡಿಸಿದ ಪತ್ರಿಕೆಯನ್ನು ಸಿಂಧು ಮಾಡ ಬೇಕೆಂಬುವದು ಅರ್ಜಿಗಳ ಮುಖ್ಯ ತಾತ್ಪರ್ಯವು. ಇದಕ್ಕೆ ಕೇವಲ ವಿರೋಧವಾಗಿ ಹತ್ತು ಸಾವಿರ ಮುಸಲ್ಮಾನರು ಒಪ್ಪಿತ ಹಾಕಿದ ಇನ್ನೊಂದು ಅರ್ಜಿ ಪಾರ್ಲಿಮೆಂಟಿಗೆ ಮುಟ್ಟಿಯದೆ. ಕ್ರೊಸ್ ಪ್ರಭುವಿನ ಪತ್ರಿಕೆಯಲ್ಲಿ ಈ ದೇಶದ ನ್ಯಾಯವಿಧಾಯಕಮಂಡಲಿಗಳ ಸಾಮಾಧಿಕರನ್ನೆಲ್ಲಾ ಸರಕಾರದವರೇ ನಿಶ್ಚಯಿಸ ಬೇಕು, ರಾಜ್ಯಭಾರದ ಕಾರ್ಯಕಾರಣಗಳಲ್ಲಿ ಪ್ರಶ್ನೆ ಮಾಡುವ ಅಧಿಕಾರವೂ ಅವರಿಗೆ ಇರ ಬೇಕು ಎಂದು ಇರುತ್ತದೆ; ಮಿ. ಬ್ರೈಡ್‌ಲಾ ರಚಿಸಿದ್ದರಲ್ಲಿ ಸಾಮಾಧಿಕರಲ್ಲಿ ಅರೆವಾಶಿ ಮಂದಿಯನ್ನು ಪ್ರಜೆಗಳು ಆದುಕೊಂಡು ನಿಶ್ಚಯಿಸ ಬೇಕೆಂದು ಇರುತ್ತದೆ. ರಾಜ್ಯಭಾರದಲ್ಲಿ ಹೆಚ್ಚಿನ ಅಧಿಕಾರ

ವನ್ನು ದೇಶಸ್ಥರಿಗೆ ಕೊಡಿಸ ಬಾರದೆಂದು ಮುಸಲ್ಮಾನರ ಪಕ್ಷವು. ಪಾರ್ಲಿಮೆಂಟಿಗೆ ಅರ್ಜಿ ಮಾಡಿದ ಹಿಂದು ಜನರು ತಮ್ಮ ಪಕ್ಷವು ಕೈಸಾರುವಂತೆ ಇಂಗ್ಲಾಂಡಿನಲ್ಲಿ ಭಾಷಣಗಳನ್ನು ಮಾಡಿ ಜನರನ್ನು ಒಲಿಸುವದಕ್ಕೆ ಇಬ್ಬರು ನಿಯುಕ್ತರನ್ನು ಕಳುಹಿಸಿದ್ದಾರೆ. ಪ್ರಿನ್ಸ್ ಅಫ್ ವೇಲ್ಸ್ ಯುವರಾಜರ ಹಿರೇ ಕುಮಾರ್ತೆಯನ್ನು ಸ್ಕೊತ್ಲಂಡಿನ ಮಹಾ ಧನಿಕನಾದ ಒಬ್ಬ ಪ್ರಭು ವಿವಾಹವಾದರು. ರಾಜಕುಮಾರ್ತೆಯು ಸ್ವದೇಶಸ್ಥನನ್ನೇ ವಿವಾಹವಾಗುವರೆ ಮನಸ್ಕರಿಸಿದ್ದಕ್ಕೆ ಇಂಗ್ಲಿಷರಿಗೆಲ್ಲಾ ಸಂತೋಷವಾಯಿತು. ಲಂಡನ ಪಟ್ಣದಲ್ಲಿ ಕಾರಖಾನೆಗಳಲ್ಲಿಯೂ ಇತರ ಸ್ಥಳಗಳಲ್ಲಿಯೂ ಕೂಲಿಪಾಲಿ ಮಾಡುವ ಜನರು ಹೆಚ್ಚುಕಡಿಮೆ ಒಂದು ಲಕ್ಷ ಮೂವತ್ತು ಸಾವಿರ ಮಂದಿ ಸಂಬಳ ಸಾಲುವದಿಲ್ಲಾ, ಕೆಲಸ ಮಾಡಲೊಲ್ಲೆವೆಂದು ಚಾಲಿವರಿತದ್ದರಿಂದ ಹೇರಳ ಜನರಿಗೆ ಬಹಳ ತತಂಗಕ್ಕೆ ಕಾರಣವಾಯಿತು. ಅವರ ಹಿಂದೆ ಬಂದರಿನಲ್ಲಿ ಗೇಯುವ ದೋಣಿಯವರೂ ಹೊರೆಯಾಳುಗಳೂ ಸಹಾ ಕೆಲಸ ಮಾಡಲೊಲ್ಲೆವೆಂದು ಛಲ ಮಾಡುವವರಾದರು. ಆ ಮಹಾ ಪಟ್ಣದ ವಾಸಸ್ಥರಿಗೆ ಸರ್ವ ಸಾಹಿತ್ಯಗಳೂ ಪರದೇಶಗಳಿಂದ ಬರುವದಾದ ಕಾರಣ ವ್ಯಾಪಾರಕ್ಕೆ ವಿಡ್ಡೂರವಾಯಿತು. ತನ್ಮಧ್ಯೆ ಈ ಬಡ ಜನರ ಮೇಲೆ ಕನಿಕರ ಪಡುವವರು ಪರದೇಶಗಳಿಂದ ಸಹಾಯಾರ್ಥವಾಗಿ ಹಣ ಕಳುಹಿಸಿದ್ದರಿಂದ ಅವರ ಕೆಟ್ಟ ಒಕ್ಕಟ್ಟು ಬಲವಾಯಿತು. ಕಡೆಗೆ ಮಹಾನುಭಾವರು ಕೂಡಿ ಅವರ ನ್ಯಾಯವನ್ನು ಅರೈದು ಹೆಚ್ಚು ಪ್ರಯಾಸದಿಂದ ಅವರನ್ನೂ ಧನಿಗಳನ್ನೂ ಒಡಂಬಡಿಸಿದ ಮೇಲೆ ಸರ್ವರೂ ಯಥಾ ಪ್ರಕಾರ ಕೆಲಸಕ್ಕೆ ಬರುವವರಾದರು. ವೇಲ್ಸ ಸೀಮೆಯಲ್ಲಿ ಕಲ್ಲಿದ್ದಲಿನ ಖನಿಯಲ್ಲಿ ಗಾಸು ಎಂಬ ವಾಯುವಿಗೆ ಬೆಂಕಿ ತಾಗಿ ಉತ್ಪಾತವಾಗಿ ಒಳಗಿರುವ ನೂರೈವತ್ತು ಜನರು ಸತ್ತು ಹೋದರು. ಮಹಾ ಬ್ರಿತಾನ್ಯ ಐರ್ಲಾಂಡು ದ್ವೀಪಗಳ ಕರಾವಳಿಯಲ್ಲಿ ಭಯಂಕರ ಬಿರುಗಾಳಿ ಬೀಸಿ ಹೇರಳ ನಷ್ಟವಾಯಿತು. ಇಂಥಾ ಬಿರುಗಾಳಿ ಹಿಂದೆ ಯಾವಾಗಲೂ ಆದದ್ದಿಲ್ಲಾ.

ಜರ್ಮನಿ. ಬಹಳ ವರ್ಷಗಳಿಂದ ಸಾಮ್ರಾಜ್ಯದ ಮುಖ್ಯ ಮಂತ್ರಿಯಾಗಿದ್ದ ಬಿಸ್ಮಾರ್ಕ ಪ್ರಭುವು ವೃದ್ಧಾಪ್ಯದ ಕಾರಣದಿಂದ ಉದ್ಯೋಗಕ್ಕೆ ರಾಜಿನಾಮೆ ಕೊಟ್ಟರು. ಚಕ್ರವರ್ತಿಯವರು ಅವರ ಬಿನ್ನಹವನ್ನು ಮಾನ್ಯ ಮಾಡಿದರು. ಮಹಾ ಅನುಭವಶಾಲಿಯಾದ ಮಂತ್ರಿವರನಿಗೂ ಎಳೇ ವಯಸ್ಸಿನ ಚಕ್ರವರ್ತಿಯವರಿಗೂ ಆಯಾ ವಿಷಯಗಳಲ್ಲಿ ಮತಭೇದವಾದದ್ದೇ ಬಿಸ್ಮಾರ್ಕರು ರಾಜಿ ಕೊಡುವದಕ್ಕೆ ಮುಖ್ಯ ಕಾರಣವು. ಬಿಸ್ಮಾರ್ಕರ ಬದಲಿಗೆ ಕಪ್ರಿವಿ ಪ್ರಭುವು ನೇಮಕವಾಗಿದ್ದಾರೆ. ಇವರು ಜರ್ಮನ ರಾಜಸಭೆಯಲ್ಲಿ ಭಾಷಣ ಮಾಡುವಾಗ್ಯೆ ಬಿಸ್ಮಾರ್ಕರು ಕೈಕೊಂಡ ಸಮಾಧಾನದ ರಾಜನೀತಿ ಸೂತ್ರವನ್ನೇ ತಾನೂ ಬಲಪಡಿಸಿ ಕಾಪಾಡುವೆನೆಂದು ಹೇಳಿದರು. ಕೈಗಾರಿಕೆಯ ಬದುಕು ಮಾಡಿ ಕೂಟ್ಟೆ ಹೊರೆಯುವ ಜನರು ಆಗಾಗ್ಯೆ ಸಂಬಳ ಸಾಲದೆಂದು ಚಾಲಿವರಿಯುವದುಂಟು. ಒಂದು ಊರಿನಲ್ಲಿ ಕೆಲಸದವರು ಒಕ್ಕಟ್ಟಾಗಿ ಕೆಲಸ ನಿಲ್ಲಿಸಿದರೆ ಈ ಭ್ರಮೆ ಬೇಗನೆ ಹಬ್ಬಿ ಬೇರೆ ಊರಿನಲ್ಲಿಯೂ ಕೆಲಸದವರು ಚಾಕರಿ ಬಿಟ್ಟು ಮನೆಯಲ್ಲಿ ಕೂಡ್ರುತ್ತಾರೆ, ಹೀಗಾಗಿ ದೊಡ್ಡವರಿಗೂ ಬಡವರಿಗೂ ಬಂಡಾಟಕ್ಕೆ ಕಾರಣವಾಗುತ್ತದೆ. ಇಂಥಾ ಒಕ್ಕಟುಗಳಿಗೆ ಕಾರಣವಾಗದಂತೆ ಬಡವರ ಮೊರೆಯನ್ನು ಕೇಳಿ ಕಷ್ಟವನ್ನು ಉಪಶಮನ ಮಾಡ ಬೇಕೆಂಬುವ

ತಾತ್ಪರ್ಯದಿಂದ ಜರ್ಮನಿ ಚಕ್ರವರ್ತಿಯವರು ಯುರೋಪಿನ ಅರಸರೆಲ್ಲರಿಗೆ ತಮ್ಮ ಅಭಿಪ್ರಾಯ ತಿಳಿಸಿ ಅವರ ಕಡೆಯಿಂದ ಪ್ರತಿನಿಧಿಗಳನ್ನು ಬೆರ್ಲಿನಿಗೆ ಬರಿಸಿಕೊಂಡು ಆಲೋಚನೆ ಮಾಡಿಸಿದರು. ಈ ಪ್ರತಿನಿಧಿಗಳು ಮಾಡಿದ ನಿರ್ಣಯಗಳು: ೧ ಕೈಗಾರಿಕೆಯವರಿಗೂ ಧನಿಗಳಿಗೂ ಉಂಟಾಗುವ ವಿವಾದಗಳನ್ನು ತೀರಿಸುವದಕ್ಕೆ ಪಂಚಾಯತರನ್ನು ನೇಮಿಸ ಬೇಕು. ೨ ಎಲ್ಲಾ ರಾಜ್ಯಗಳ ಪ್ರತಿನಿಧಿಗಳು ವರ್ಷವರ್ಷಕ್ಕೆ ನೆರೆದು ಬಂದು ಎಲ್ಲಾ ರಾಜ್ಯಗಳಲ್ಲಿಯೂ ಕೈಗಾರಿಕೆಯವರಿಗಿರುವ ನೇಮಗಳ ಮುಖ್ಯ ವಿಷಯಗಳನ್ನು ಒಂದೇ ಪ್ರಕಾರ ನಿಶ್ಚಯಿಸ ಬೇಕು. ೩ ಹೆಂಗಸರು ಮಕ್ಕಳು ಕೆಲಸ ಮಾಡತಕ್ಕ ತಾಸು ಕಡಮೆ ಮಾಡ ಬೇಕು. ೪ ಆದಿತ್ಯವಾರ ಕೆಲಸವಿರಬಾರದು. ೫ ಈ ನಿಯಮಗಳನ್ನು ಆಯಾ ರಾಜ್ಯಗಳವರು ತಮಗೆ ಹಿತವೆಂದು ಕಾಣುವ ಮೇರೆಗೆ ನಡಿಸ ಬೇಕು.—ಜರ್ಮನ ಚಕ್ರವರ್ತಿಯವರು ಮಹಾರಾಣಿ ಚಕ್ರವರ್ತಿನಿಯವರ ಸಂದರ್ಶನಾರ್ಥವಾಗಿ ಇಂಗ್ಲಾಂಡಿಗೆ ಹೋಗಿದ್ದರು. ಚಕ್ರವರ್ತಿನಿಯವರು ತಮ್ಮ ಮಗಳ ಕುಮಾರರಾದ ಅವರನ್ನು ಪ್ರೀತಿಯಿಂದ ಆಗತಸ್ವಾಗತ ಮಾಡಿ ಸೈನ್ಯದ ಕವಾತು ಹಡಗಗಳ ಕವಾತು ಮೊದಲಾದವುಗಳಿಂದ ಅವರನ್ನು ಸಂತೋಷ ಪಡಿಸಿದರು. ಬಳಿಕ ಜರ್ಮನ ಚಕ್ರವರ್ತಿಯವರು ತಮ್ಮ ಸಹೋದರಿಯನ್ನು ಗ್ರೀಕದೇಶದ ಯುವರಾಜನಿಗೆ ವಿವಾಹ ಮಾಡಿಕೊಡುವರೆ ಅಥೇನೆಗೆ ಹೋಗಿದ್ದವರು ವಿವಾಹೋತ್ಸವವು ಮುಗಿದ ಮೇಲೆ ತುರ್ಕಿ ಸುಲ್ತಾನರ ಭೇಟಿಗಾಗಿ ಕೊನ್ಸ್ತಂತಿನೊಪೊಲಿಗೆ ತೆರಳಿದರು. ಅಲ್ಲಿ ಜರ್ಮನರೂ ಒಸ್ಟ್ರಿಯರೂ ಇತಲಿಯರೂ ಕೂಡಿ ಮಾಡಿದ ಸಖ್ಯದಲ್ಲಿ ಸುಲ್ತಾನರನ್ನು ಕೂಡಿಸಿಕೊಂಡದ್ದು ಮುಖ್ಯ ಸಂಗತಿಯಾಗಿತ್ತು. ಹಾಗಂದರೆ ಈ ನಾಲ್ಕು ರಾಜ್ಯಗಳಲ್ಲಿ ಯಾವದರ ಮೇಲಾದರೂ ಶತ್ರುವು ಅಭಿಯೋಗ ಮಾಡುವದಾದರೆ ಉಳಿದ ಮೂವರೂ ಕೂಡಿ ಆ ರಾಜ್ಯಕ್ಕೆ ನೆರವಿ ಮಾಡ ಬೇಕು.

ಪೊರ್ತುಗಾಲ್ ದೇಶದ ಅರಸರು ಕಠಿಣವಾದ ರೋಗದಲ್ಲಿ ಬಿದ್ದು ಮರಣ ಪಟ್ಟರು. ಮೊದಲನೆ ಕರ್ಲೊಸ ಎಂಬ ರಾಜಮಂತ್ರಿಯು ಅವರ ಉತ್ತರಾಧಿಕಾರಿಯಾಗಿ ಪಟ್ಟದಲ್ಲಿ ಕುಳಿತಿದ್ದಾರೆ. ಪ್ರಜಾಧಿಪತ್ಯವನ್ನು ಕಾಂಕ್ಷಿಸುವವರು ಪ್ರಜೆಗಳಲ್ಲಿರುವದರಿಂದ ಅರಸನಿಗೆ ಹೆಚ್ಚು ಸಮಾಧಾನವಿಲ್ಲಾ. ಪೊರ್ತುಗೀಸರಿಗೂ ಇಂಗ್ಲಿಷರಿಗೂ ಕಠಿಣ ವಿವಾದಕ್ಕೆ ಆಸ್ಪದವಾಯಿತು, ಹ್ಯಾಗಂದರೆ ಅಫ್ರಿಕದ ಒಳಸೀಮೆಯಲ್ಲಿ ಸಂಬೆಸಿ ನದಿಯ ಕರೆಯಲ್ಲಿ ಪೊರ್ತುಗೀಸರು ಹೊಸ ಪ್ರದೇಶಗಳನ್ನು ತಮ್ಮ ಸೀಮೆಗೆ ಕೂಡಿಸಿಕೊಂಡು ಕೆಲವು ಕಡೆಗಳಲ್ಲಿ ಇಂಗ್ಲಿಷರ ಧ್ವಜಗಳನ್ನು ಕಿತ್ತಾಕಿ ತಮ್ಮ ಧ್ವಜಗಳನ್ನು ಏರಿಸಿದರು. ಇಂಗ್ಲಿಷರು ಇದಕ್ಕೆ ವಿರೋಧ ಮಾಡಿ ಬಾವಟಿಗಳನ್ನೆಲ್ಲಾ ಎಲ್ಲೆಲ್ಲಿದ್ದವೋ ಅಲ್ಲಲ್ಲೇ ತಿರಿಗಿ ನೆಡ ಬೇಕೆಂದು ಅವರಿಗೆ ಗಡು ನೇಮಿಸಿದರು. ಪೊರ್ತುಗೀಸರು ಹಾಗೆ ಮಾಡದ್ದರಿಂದ ಇಂಗ್ಲಿಷರು ಖಂಡಿತವಾಗಿ ಮತ್ತೂ ಬರೆದದ್ದಕ್ಕೆ ಪೊರ್ತುಗೀಸರು ಕೋಪ ಪರವಶರಾಗಿ ಆ ಸೀಮೆಯಲ್ಲಿರುವ ಇಂಗ್ಲಿಷರನ್ನು ಉಪದ್ರವ ಮಾಡುವವರಾದ್ದರಿಂದ ಉಭಯಪಕ್ಷದಲ್ಲಿ ವೈಮನಸ್ಸು ಬಲಿತು ಯುದ್ಧಕ್ಕೆ ಅನುಕೂಲವಾಗುವಾಗ ಜರ್ಮನ ಚಕ್ರವರ್ತಿಯವರು ಮಧ್ಯಸ್ತಿಕೆ ಮಾಡಿ ಸಮಾಧಾನ ಪಡಿಸಿದರು. ಪೊರ್ತುಗೀಸರಿಗೆ ನೆರೆಯಲ್ಲಿರುವ ಸ್ಪೇನ ರಾಜ್ಯದಲ್ಲಿ ನಾಲ್ಕು

ವರ್ಷ ಪ್ರಾಯದ ಅರಸನು ಕೆಲವು ಕಾಲ ಜ್ವರದಲ್ಲಿ ಬಿದ್ದು ಮರಣಾಂತಿಕವಾಗಿ ದ್ದಾಗ್ಯೆ ರಾಜ್ಯದಲ್ಲಿರುವ ಅರಸನ ವೈರಿ ಪಕ್ಷದವರು ಅರಸನು ಪ್ರಾಣ ಬಿಟ್ಟ ಕೂಡಲೇ ಕಾಟಕಾಯಿ ಮಾಡ ಬೇಕೆಂದು ಸವಣಿಸುತ್ತಿದ್ದರು. ಆದರೆ ದೇವರ ದಯೆಯಿಂದ ಅರಸನು ಕ್ಷೇಮ ಹೊಂದಿದ್ದಲ್ಲಿ ಅವರ ಮದಿವು ನಿರರ್ಥಕವಾಯಿತು. ಅರಸನ ಹೆಸ ರಿನಲ್ಲಿ ರಾಜ್ಯವಾಳುವ ರಾಜಮಾತೆಗೆ ನಾನಾ ಉಪಟಲಗಳು ಬರುತ್ತವಾದರೂ ಆಕೆ ಸ್ಥೈರ್ಯದಿಂದ ಸೈರಣೆ ಮಾಡಿಕೊಂಡಿರುತ್ತಾಳೆ.

ರುಸ್ಯ ಸಾಮ್ರಾಜ್ಯದಲ್ಲಿ ಪ್ರಜೆಗಳಿಗೆ ತೃಪ್ತಿ ಇಲ್ಲಾ. ಆಯಾ ಊರುಗಳಲ್ಲಿ ಜನರು ಕಲಹ ಮಾಡಿದ್ದೂ ಉಂಟು. ನಿಹಿಲಿಸ್ತರೆಂಬ ರಾಜವೈರಿಗಳು ಮತ್ತು ತಲೆ ಎತ್ತಿ ಚಕ್ರವರ್ತಿಯನ್ನು ಹೆದರಿಸುತ್ತಾರೆ. ದಳವಾಯಿಗಳಲ್ಲಿಯೂ ವಿದ್ಯಾರ್ಥಿಗಳ ಲ್ಲಿಯೂ ಚಕ್ರವರ್ತಿಯನ್ನು ಕೊಲೆ ಮಾಡ ಬೇಕೆಂಬುವ ಒಳಸಂಚು ಇರುವದಾಗಿ ಪ್ರಕಟವಾಯಿತು. ಆದದರಿಂದ ಸರ್ವಶಾಲೆಗಳನ್ನು ಒಂದು ವರ್ಷದ ವರೆಗೆ ಮುಚ್ಚ ಬೇಕೆಂದು ರಾಜಾಜ್ಞೆಯಾಯಿತು. ವಿಚಾರಣೆಯಲ್ಲಿ ಅಪಾದನೆ ಪಟ್ಟ ಕೆಲವರಿಗೆ ಚಕ್ರವರ್ತಿಯವರು ಕ್ಷಮೆ ಮಾಡಿದರು. ಹೆಚ್ಚಿನ ಅಪರಾಧಿಗಳನ್ನು ಸಿಬೀರ್ಯಕ್ಕೆ ಗಡಿಪಾರು ಮಾಡಿಸುತ್ತಾರೆ. ಅಲ್ಲಿ ಅಪರಾಧಿಗಳು ಸರಕಾರಿ ಉದ್ಯೋಗಸ್ಥರ ಕೈ ಯಿಂದ ಅನೇಕ ಕೋಟಲೆ ಅನುಭವಿಸುತ್ತಾರೆಂದು ಪರರಾಜ್ಯಗಳಲ್ಲಿ ಬೊಬ್ಬಾಟವಾ ದದರಿಂದ ಅದನ್ನು ವಿಚಾರಣೆ ಮಾಡಿ ತಕ್ಕ ಉಪಶನ ಪಡಿಸುವದಕ್ಕೆ ಚಕ್ರವರ್ತಿಯ ವರು ಪಂಚಾಯತರನ್ನು ಕಳುಹಿಸಿದ್ದಾರೆ. ಸ್ವಾಮಿಭಕ್ತಿಯುಳ್ಳ ಪ್ರೊತಸ್ತಂತ ಕ್ರೈಸ್ತ ರನ್ನು ಪ್ರೀತಿ ಮಾಡುವದನ್ನು ಬಿಟ್ಟು ಅವರನ್ನು ಉಪದ್ರ ಪಡಿಸುವ ಕೆಲಸವನ್ನು ನಾ ಲ್ಕೈದು ವರ್ಷಗಳಿಂದ ನಡಿಸುತ್ತಾ ಬರುವದಲ್ಲದೆ ಪ್ರಜೆಗಳಲ್ಲಿರುವ ಅವತೃಪ್ತಿಯನ್ನು ಯುದ್ಧದ ಮೂಲವಾಗಿ ಉಪಶಮನ ಮಾಡ ಬಹುದೆಂದು ಹೇರಳ ಯುದ್ಧ ಸನ್ನಾಹ ವನ್ನು ಮಾಡಿಸುತ್ತಾರೆ. ರುಸ್ಯ ಚಕ್ರವರ್ತಿಯು ಜರ್ಮನಿ ಚಕ್ರವರ್ತಿಯ ಭೇಟಿ ಗಾಗಿ ಬೆರ್ಲಿನ ಪಟ್ಣಕ್ಕೆ ಹೋಗಿದ್ದಾಗ್ಯೆ ಅವರಿಗೆ ಆಗತಸ್ವಾಗತವಾದರೂ ಅವರಿಗೆ ಮೊದಲು ಒಸ್ತ್ರಿಯ ಚಕ್ರವರ್ತಿಗೂ ಇತಲಿ ಅರಸನಿಗೂ ಮಾಡಿದಷ್ಟು ಬಹುಮಾನ ವನ್ನು ಇವರಿಗೆ ಮಾಡಲಿಲ್ಲವಾಗಿ ತೋರುತ್ತದೆ. ಉಭಯ ಚಕ್ರವರ್ತಿಗಳೂ ಬಿಸ್ಮಾ ರ್ಕ ಪ್ರಭುವೂ ಯಾವ ಯಾವ ಸಂಗತಿಗಳನ್ನು ಕುರಿತು ಆಲೋಚನೆ ಮಾಡಿದರೆಂದು ತಿಳಿದು ಬರಲಿಲ್ಲಾ. ರುಸ್ಯ ಸಾಮ್ರಾಜ್ಯಕ್ಕೆ ತೆಂಕಲಲ್ಲಿರುವ ಬುಲ್ಗರ್ಯ ಸೆರ್ವ್ಯ ಮೊದಲಾದ ಚಿಕ್ಕ ಸಂಸ್ಥಾನಗಳನ್ನು ನುಂಗ ಬೇಕೆಂದು ರುಸ್ಯರಿಗೆ ಹೆಚ್ಚು ಕಾಂಕ್ಷೆ ಯದೆ. ಈ ಸಂಸ್ಥಾನಗಳು ಒಸ್ತ್ರಿಯ ಸಾಮ್ರಾಜ್ಯಕ್ಕೆ ನೆರೆಯಲ್ಲಿರುವದರಿಂದ ಒಸ್ತ್ರಿ ಯರು ಅದಕ್ಕೆ ವಿರೋಧ ಮಾಡುತ್ತಾರೆ. ಹೀಗಾಗಿ ಒಸ್ತ್ರಿಯಕ್ಕೂ ರುಸ್ಯಕ್ಕೂ ಸಖ್ಯವಿಲ್ಲಾ. ಒಸ್ತ್ರಿಯರ ಮೇಲೆ ಕಾಳಗ ಮಾಡಿದರೆ ಒಕ್ಕಟ್ಟಿನಲ್ಲಿ ಸೇರಿದ ಜರ್ಮ ನರೂ ಇತಲಿಯರೂ ಅವರ ಒತ್ತಾಸೆಗೆ ಬರುವದರಿಂದ ರುಸ್ಯರು ಆ ಚಿಕ್ಕ ಸಂಸ್ಥಾ ನಗಳಲ್ಲಿ ಕುಯುಕ್ತಿಗಳನ್ನು ಮಾಡುತ್ತಾ ಸುಮ್ಮನಿದ್ದಾರೆ. ಒಮ್ಮೆ ಒಸ್ತ್ರಿಯರೂ ರುಸ್ಯ ರೂ ತಮ್ಮ ತಮ್ಮ ಎಲ್ಲೆಕಟ್ಟಿನಲ್ಲಿ ಮಹಾ ದಳಗಳನ್ನು ಕೂಡಿಕೆ ಮಾಡಿಸಿದಾಗ್ಯೆ ಯು ದ್ಧದ ಸಂಭವಾದೀತೋ ಎಂದು ಭಯಕ್ಕೆ ಕಾರಣವಾಯಿತು. ಸೆರ್ವ್ಯ ಎಂಬ ಸೀಮೆ ಯ ಅರಸನು ದುಂದುತನ ಮಾಡಿ ಸಾಲದಲ್ಲಿ ಮುಳುಗಿದವನಾಗಿ ಪ್ರಜೆಗಳ ದಂಗೆಗೆ

ಹೆದರಿಕೊಂಡು ಮಗನಿಗೆ ಪಟ್ಟವನ್ನು ಕೊಟ್ಟು ಪರದೇಶಕ್ಕೆ ಹೋದನು. ಈ ಮೊದಲು ಅರಸನಿಗೂ ರಾಣಿಗೂ ವಿಷಮ ಹುಟ್ಟಿದ್ದರಿಂದ ರಾಣಿಯನ್ನು ತ್ಯಾಜ್ಯ ಮಾಡಿದ್ದನು.

ದಕ್ಷಿಣ ಅಮೇರಿಕದಲ್ಲಿ ಬ್ರಸಿಲ್ ಎಂಬುವ ಸಾಮ್ರಾಜ್ಯವದೆ. ಅದು ರಸವತ್ತಾದ ಸೀಮೆ. ಅದರಲ್ಲಿ ಹೆಗ್ಗಾಡುಗಳೂ ಪಶುಗಳ ಹಿಂಡುಗಳು ಮೇಯುವ ಬೈಲುಗಳೂ ಅವೆ. ಬೂಂದು ಮರಗಳ ತೋಟಗಳು ಹೇರಳ ಅವೆ. ನಿವಾಸಿಗಳು ಬಹುಶಃ ಪೊರ್ತುಗೀಸ ವಂಶಸ್ಥರು. ಮೊದಲು ಆ ಸಾಮ್ರಾಜ್ಯವು ಪೊರ್ತುಗಲ್ ಅರಸನ ಅಧೀನದಲ್ಲಿತ್ತು. ಬಳಿಕ ಪೊರ್ತುಗೀಸ ರಾಜವಂಶದ ಅರಸನು ಅದನ್ನು ಸ್ವತಂತ್ರವಾದ ಸಾಮ್ರಾಜ್ಯ ಮಾಡಿ ಆಳುವವನಾದನು. ಇತ್ತಲಾಗೆ ಅಲ್ಲಿ ರಾಜ್ಯಪಲ್ಲಟವಾಯಿತು. ಹ್ಯಾಗಂದರೆ ದಂಡಿನ ಒಬ್ಬ ದಳವಾಯಿಗೆ ಶಿಕ್ಷೆ ವಿಧಿಸೋಣವಾದದರಿಂದ ಅವನು ದುಮ್ಮಾನಗೊಂಡು ಅರಸನಿಗೆ ಪ್ರತೀಕಾರ ಮಾಡ ಬೇಕೆಂದು ದಂಡಿನವರನ್ನು ಪ್ರೇರೇಪಿಸಿ ಅಕಸ್ಮಾತ್ತಾಗಿ ಒಂದು ದಿನ ಅರಮನೆಯೊಳಗೆ ಹೊಕ್ಕು ಮಹಾರಾಜನನ್ನೂ ರಾಜಮಂತಾನವನ್ನೂ ಕೈಶೆರೆ ಮಾಡಿ ರೇವಿನಲ್ಲಿದ್ದ ಹಡಗದಲ್ಲಿ ಹತ್ತಿಸಿ ಯುರೋಪಿಗೆ ಕಳುಹಿಸಿ ಬಿಟ್ಟರು. ಯಾವದೊಂದು ಅನ್ಯಾಯವೋ ಕ್ರೂರ ಕೃತ್ಯವೋ ಮಾಡದ ಸಾಧುವಾದ ಮುದುಕ ಅರಸನನ್ನು ಈ ರೀತಿಯಲ್ಲಿ ನಡಿಸಿದ್ದು ಕೆಟ್ಟ ರಾಜದ್ರೋಹವು. ಮಹಾರಾಜನನ್ನು ಹಡಗದಲ್ಲಿ ಹತ್ತಿಸುವಾಗ ನಿಮ್ಮ ಸರ್ವಸ್ವವನ್ನೂ ಕೊಡಿಸುತ್ತೇವೆ, ಅಶನಾರ್ಥಕ್ಕೆ ಸಂಬಳವನ್ನೂ ಕೊಡುತ್ತೇವೆಂದು ಮಾತು ಕೊಟ್ಟರೂ ಅವನು ಯುರೋಪಿಗೆ ಮುಟ್ಟಿದ ಕೂಡಲೇ ಆ ಮಾತನ್ನು ನಿರಾಕರಿಸಿದರು. ರಾಣಿಯು ಈ ಸಂಭವದಿಂದ ಸಂಕಟದಲ್ಲಿ ಬಿದ್ದು ಮರಣ ಪಟ್ಟಳು. ಮಹಾರಾಜನು ಸುಕೃತರಲ್ಲದ ಪ್ರಜೆಗಳಿಗೆ ಮಿಗಿಲಾದ ಸ್ವತಂತ್ರಗಳನ್ನು ಕೊಟ್ಟದ್ದೇ ಅರಸನಿಗೆ ಕೇಡಾಯಿತು. ಬ್ರಸಿಲ್ ದೇಶದವರು ಏಕಾಧಿಪತ್ಯವನ್ನು ತೆಗಧಾಕಿದ ಬಳಿಕ ಈಗ ಪ್ರಜಾಧಿಪತ್ಯವನ್ನು ಸ್ಥಾಪಿಸಿದ್ದಾರೆ. ಮಹಾರಾಜನ ಪಕ್ಷದವರೆಂದು ಗುಮಾನಿ ಇದ್ದವರನ್ನೆಲ್ಲಾ ಕೊಲೆ ಮಾಡಿದರು. ಅವರು ಆದಿತ್ಯವಾರ ಮೊದಲಾದ ವಾರಗಳ ಹೆಸರುಗಳನ್ನು ಜನವರಿ ಮೊದಲಾದ ತಿಂಗಳುಗಳ ಹೆಸರುಗಳನ್ನೂ ಬದಲಿಸಿ ಹೊಸ ಹೆಸರಿಟ್ಟು ಪಂಚಾಂಗವನ್ನು ಬೇರ್ಪಡಿಸಿದ್ದಾರೆ.—ಉತ್ತರ ಅಮೇರಿಕದ ಸಂಯುಕ್ತ ಸಂಸ್ಥಾನಗಳ ಕೆಲ ಊರುಗಳಲ್ಲಿ ಕೆರೆ ಒಡದು ನೀರು ಒಳಗೆ ಬಂದದರಿಂದಲೂ ಮಿಸಿಸಿಪ್ಪಿ ಮಹಾನದಿಯ ನೀರು ಒಳಗೆ ಬಂದದರಿಂದಲೂ ಅನೇಕ ಜೀವನಷ್ಟವೂ ಊರುಗಳಿಗೆ ಹಾವಳಿಯೂ ಸಂಭವಿಸಿತು. ಇನ್ನೊಂದು ಊರಿನಲ್ಲಿ ಭಯಂಕರ ತುಫಾನು ಬೀಸಿ ಹೇರಳ ಮನೆಗಳು ಬಿದ್ದದ್ದಲ್ಲದೆ ದೊಡ್ಡ ಕಾರಖಾನೆಯ ಕಟ್ಟಡವು ಗಾಳಿಯಿಂದ ಹಾರಿ ಹೊಳೆಯಲ್ಲಿ ಬಿತ್ತು.

ಇನ್‌ಫ್ಲುವೆಂಜವೆಂಬುವ ಕೆಟ್ಟ ಜ್ವರದೋಷವೂ ಸಾಂಕ್ರಾಮಿಕ ರೋಗವಾಗಿ ಯುರೋಪಿನಲ್ಲೆಲ್ಲಾ ಹಬ್ಬುವಂತಾಯಿತು. ಅದು ಮೊದಲಾಗಿ ರುಸ್ಯ ದೇಶದಲ್ಲಿ ಹುಟ್ಟಿ ಅಲ್ಲಿಂದ ಬೇಗನೇ ಜರ್ಮನಿಗೂ ಫ್ರಾನ್ಸ ಸ್ಪೇನ ಪೊರ್ತುಗಲ್ ದೇಶಗಳಿಗೂ ವ್ಯಾಪಿಸಿ ಇಂಗ್ಲಾಂಡಿಗೆ ಬಂತು. ಅಲ್ಲಿಂದ ಅಂತ್ಲಂತಿಕ ಮಹಾಸಾಗರವನ್ನು ದಾಟಿ ಅಮೇರಿಕಕ್ಕೂ ಗಮಿಸಿತು. ಆ ರೋಗದಿಂದಲೇ ಅಷ್ಟು ಜನರು ಸಾಯುವದಿಲ್ಲವಾದರೂ ಅದರಿಂದ ಬೇರೆ ಸಂಕಟಗಳು ಹುಟ್ಟುವದರಿಂದಲೂ ನಿತ್ರಾಣಿಗಳು ಅದನ್ನು ಸಹಿಸ

ಲಾರದಿರುವದರಿಂದಲೂ ಪ್ರಾಣಾಂತಿಕವಾಗುತ್ತದೆ. ವಿಲಾಯತಿಯಲ್ಲಿ ಶ್ರೀಮಂತರೂ ಪ್ರಭುಗಳೂ ಇದರಿಂದ ಸತ್ತರು. ಆ ರೋಗವು ಪಾರ್ಸಿಸ್ಥಾನದಲ್ಲಿ ಬಹು ಘೋರವಾಗಿ ವ್ಯಾಪಿಸಿ ಹಿಂದುಸ್ಥಾನಕ್ಕೂ ತಲಪಿತು. ಮನೆಮನೆ ಬಿಡದೆ ಈ ವ್ಯಾಧಿಯು ಮನುಷ್ಯರನ್ನು ಹಿಡಿಯಿತು. ಹೆಚ್ಚು ಜನರು ಗೇಯುವ ಕಾರಖಾನೆಗಳಲ್ಲಿ ಜನರು ಕಡಿಮೆಯಾಗಿ ಕೆಲಸಕ್ಕೆ ಅಟಕು ಉಂಟಾಯಿತು. ಇಂಥಾ ವ್ಯಾಧಿಗಳ ಮುಖಾಂತರವಾಗಿ ದೇವರು ಭೂಮಂಡಲದ ನಿವಾಸಿಗಳನ್ನು ಎಚ್ಚರಿಸಿ ಕೊಲೆಗಳನ್ನೂ ತಂತ್ರಗಳನ್ನೂ ಜಾರತ್ವಗಳನ್ನೂ ಭಕ್ತಿಹೀನತ್ವವನ್ನೂ ಬಿಟ್ಟು ಮಾನಸಾಂತರ ಪಡುವ ಹಾಗೆ ಬೋಧನೆ ಮಾಡುತ್ತಾನೆ. ದೇವರ ಬೋಧನೆಗೆ ಮನಸ್ಸಿಟ್ಟು ಸರ್ವಲೋಕದಲ್ಲಿ ಸಾರಲ್ಪಡುವ ಯೇಸು ಕ್ರಿಸ್ತನ ಸುವಾರ್ತೆಯನ್ನು ಅಂಗೀಕರಿಸಿ ದೇವರ ಪ್ರೀತಿಗೆ ಯೋಗ್ಯನಾಗುವವನೇ ಧನ್ಯನು.

ಅಪೂರ್ವ ಸ್ವಪ್ನವು.

ಒಂದು ದೊಡ್ಡ ಪಟ್ಟಣದಲ್ಲಿ ಧನಿಕನಾದ ಗೃಹಸ್ಥನಿದ್ದನು. ಅವನು ವೃದ್ಧಾಪ್ಯದಲ್ಲಿದ್ದು ಆ ಲೋಕಕ್ಕೆ ಹತ್ತರವಾದಾಗ ಒಂದು ರಾತ್ರಿ ಕನಸು ಕಂಡನು. ಅವನು ತಿಳಿಯದ ಊರಿಗೆ ಪಯಣ ಮಾಡುತ್ತಿರುವಾಗ ಮೇಲ್ಲೋಕದವನೊಬ್ಬನು ಬಂದು ನೀನು ಇಲ್ಲಿಗೆ ಬರ ಬೇಕಾದರೆ ಈ ವಸ್ತ್ರವನ್ನು ತೊಟ್ಟುಕೊಳ್ಳ ಬೇಕೆಂದು ಅವನಿಗೆ ವಸ್ತ್ರ ಕೊಟ್ಟನು. ಅದಕ್ಕೆ ಮೂರು ಗಂಟುಗಳಿದ್ದವು. ಅವನ್ನು ಬಿಚ್ಚುವದಕ್ಕೆ ಅವನಿಂದಾಗಲಿಲ್ಲಾ. ಮೊದಲನೆ ಗಂಟಿನ ಮೇಲೆ ದೇವರನ್ನು ತಿಳಿ ಎಂದೂ ಎರಡನೇದರ ಮೇಲೆ ದೇವರನ್ನು ಯಾರು ತಿಳಿಯ ಬಹುದು ಎಂದೂ, ಮೂರನೇದರ ಮೇಲೆ ದೇವರನ್ನು ದೇವರಲ್ಲದೆ ಯಾರೂ ತಿಳಿಯನೆಂದೂ ಬರಹವಿತ್ತು. ಮುದುಕನು ಎಚ್ಚತ್ತು ಆಲೋಚಿಸಿ ಕನಸಿನ ಅರ್ಥವನ್ನು ತಿಳಿಯಲಿಲ್ಲಾ. ಮಕ್ಕಳಿಗೆ ಹೇಳಿದಾಗ ಅವರೂ ಅರ್ಥ ಮಾಡಲಾರದೆ ಹೋದರು. ಹಾಗೆಯೇ ಅವನು ಸತ್ತು ಹೋದನು. ಈ ಸ್ವಪ್ನದ ಅರ್ಥವೇನು? ಒಬ್ಬನೇ ನಿಜವಾದ ದೇವರಾಗಿರುವವನನ್ನೂ ಆತನು ಕಳುಹಿಸಿದ ಯೇಸು ಕ್ರಿಸ್ತನನ್ನೂ ಅರಿಯುವದೇ ನಿತ್ಯಜೀವವು. ಯೇಸು ಕ್ರಿಸ್ತನು ಒಮ್ಮೆ ಹೇಳಿದ್ದು: ಎಲ್ಲವನ್ನು ತಂದೆ ನನಗೊಪ್ಪಿಸಿದ್ದಾನೆ. ತಂದೆಯಲ್ಲದೆ ಯಾವನೂ ಮಗನನ್ನು ಅರಿಯನು; ಮತ್ತು ಮಗನಲ್ಲದೆ, ಮಗನು ಯಾವನಿಗೆ ಪ್ರಕಟ ಮಾಡುವದಕ್ಕೆ ಮನಸ್ಸಾಗಿದ್ದಾನೋ ಅವನಲ್ಲದೆ ಯಾವನೂ ತಂದೆಯನ್ನು ಅರಿಯನು. ಈ ಜೀವಪ್ರದವಾದ ಜ್ಞಾನವನ್ನು ಹೊಂದ ತಕ್ಕ ಅಧಿಕಾರಿಗಳು ಯಾರು? ಯೇಸು ಕ್ರಿಸ್ತನು ಹೇಳಿದಂತೆ ಜ್ಞಾನಿಗಳಿಗೂ ಬುದ್ಧಿವಂತರಿಗೂ ಇದು ಮರೆಯಾಗಿದೆ, ಬಾಲಕರಿಗೆ ದೇವರು ಪ್ರಕಟ ಮಾಡುತ್ತಾನೆ. ಆದದರಿಂದ ಸ್ವಂತ ಜ್ಞಾನವನ್ನು ತೊರೆದು ಬಾಲಕನಾಗಿ ಸುವಾರ್ತೆಯನ್ನು ಕೈಕೊಳ್ಳುವವನೇ ದಿವ್ಯ ಜ್ಞಾನವನ್ನು ಪಡಿಯುವನು. ಆತ್ಮದಲ್ಲಿ ದೀನರು ಭಾಗ್ಯವಂತರು; ಪರಲೋಕ ರಾಜ್ಯವು ಅವರದು.

ದಕ್ಷಿಣ ಹಿಂದುಸ್ಥಾನದಲ್ಲಿ ರೂಢಿಯಾಗಿ ಎಣಿಸುವ

ಶಕಗಳ ಮೊಕಾಬಿಲೆ ಪಟ್ಟಿ.

ಕ್ರಿಸ್ತಶಕ A. D.		ಹಿಂದು ಶಕಗಳು				ಫಸಲಿ		ಮಹಮ್ಮದಿ ಹಿಜರಿ	
		ಚಾಂದ್ರಮಾನ		ಸೌರಮಾನ					
		ಸಂವತ್ಸರಗಳು	ಶಾಲಿವಾಹನ ಶಕ	ಮಲಯಾಳ ಕೊಲ್ಲಮ್					
1807	1867	ಪ್ರಭವ	1729	1789	982	1042	1216	1276	1222	1284
1808	1868	ವಿಭವ	1730	1790	983	1043	1217	1277	1223	1285
1809	1869	ಶುಕ್ಲ	1731	1791	984	1044	1218	1278	1224	1286
1810	1870	ಪ್ರಮೋದೂತ	1732	1792	985	1045	1219	1279	1225	1287
1811	1871	ಪ್ರಜೋತ್ಪತ್ತಿ	1733	1793	986	1046	1220	1280	1226	1288
1812	1872	ಆಂಗೀರಸ	1734	1794	987	1047	1221	1281	1227	1289
1813	1873	ಶ್ರೀಮುಖ	1735	1795	988	1048	1222	1282	1228-29	1290
1814	1874	ಭಾವ	1736	1796	989	1049	1223	1283	1230	1291
1815	1875	ಯುವ	1737	1797	990	1050	1224	1284	1231	1292
1816	1876	ಧಾತು	1738	1798	991	1051	1225	1285	1232	1293
1817	1877	ಈಶ್ವರ	1739	1799	992	1052	1226	1286	1233	1294-95
1818	1878	ಬಹುಧಾನ್ಯ	1740	1800	993	1053	1227	1287	1234	1296
1819	1879	ಪ್ರಮಾಥಿ	1741	1801	994	1054	1228	1288	1235	1297
1820	1880	ವಿಕ್ರಮ	1742	1802	995	1055	1229	1289	1236	1298
1821	1881	ವಿಷು	1743	1803	996	1056	1230	1290	1237	1299
1822	1882	ಚಿತ್ರಭಾನು	1744	1804	997	1057	1231	1291	1238	1300
1823	1883	ಸ್ವಭಾನು	1745	1805	998	1058	1232	1292	1239	1301
1824	1884	ತಾರಣ	1746	1806	999	1059	1233	1293	1240	1302
1825	1885	ಪಾರ್ಥಿವ	1747	1807	1000	1060	1234	1294	1241	1303
1826	1886	ವ್ಯಯ	1748	1808	1001	1061	1235	1295	1242	1304
1827	1887	ಸರ್ವಜಿತು	1749	1809	1002	1062	1236	1296	1243	1305
1828	1888	ಸರ್ವಧಾರಿ	1750	1810	1003	1063	1237	1297	1244	1306
1829	1889	ವಿರೋಧಿ	1751	1811	1004	1064	1238	1298	1245	1307
1830	1890	ವಿಕೃತಿ	1752	1812	1005	1065	1239	1299	1246	1308
1831	1891	ಖರ	1753	1813	1006	1066	1240	1300	1247	1309
1832	1892	ನಂದನ	1754	1814	1007	1067	1241	1301	1248	1310
1833	1893	ವಿಜಯ	1755	1815	1008	1068	1242	1302	1249	1311
1834	1894	ಜಯ	1756	1816	1009	1069	1243	1303	1250	1312

ಕ್ರಿಸ್ತಶಕ		ಸಂವತ್ಸರಗಳು	ಶಾಲಿವಾಹನ ಶಕ		ಮುಲಯಾಳ ಕೊಲ್ಲಮ್		ಫಸಲಿ		ಮಹಮ್ಮದಿ ಹಿಜರಿ	
1835	1895	ಮನ್ಮಥ	1757	1817	1010	1070	1244	1304	1251	1313
1836	1896	ದುರ್ಮುಖಿ	1758	1818	1011	1071	1245	1305	1252	1314
1837	1897	ಹೇವಿಳಂಬಿ	1759	1819	1012	1072	1246	1306	1253	1315
1838	1898	ವಿಳಂಬಿ	1760	1820	1013	1073	1247	1307	1254	1316
1839	1899	ವಿಕಾರಿ	1761	1821	1014	1074	1248	1308	1255	1317
1840	1900	ಶಾರ್ವರಿ	1762	1822	1015	1075	1249	1309	1256	1318
1841	1901	ಪ್ಲವ	1763	1823	1016	1076	1250	1310	1257	1319
1842	1902	ಶುಭಕೃತು	1764	1824	1017	1077	1251	1311	1258	1320
1843	1903	ಶೋಭಕೃತು	1765	1825	1018	1078	1252	1312	1259	1321
1844	1904	ಕ್ರೋಧಿ	1766	1826	1019	1079	1253	1313	1260	1322
1845	1905	ವಿಶ್ವಾವಸು	1767	1827	1020	1080	1254	1314	1261-62	1323
1846	1906	ಪರಾಭವ	1768	1828	1021	1081	1255	1315	1263	1324
1847	1907	ಪ್ಲವಂಗ	1769	1829	1022	1082	1256	1316	1264	1325
1848	1908	ಕೀಲಕ	1770	1830	1023	1083	1257	1317	1265	1326
1849	1909	ಸೌಮ್ಯ	1771	1831	1024	1084	1258	1318	1266	1327-28
1850	1910	ಸಾಧಾರಣ	1772	1832	1025	1085	1259	1319	1267	1329
1851	1911	ವಿರೋಧಿಕೃತು	1773	1833	1026	1086	1260	1320	1268	1330
1852	1912	ಪರಿಧಾವಿ	1774	1834	1027	1087	1261	1321	1269	1331
1853	1913	ಪ್ರಮಾದೀಚ	1775	1835	1028	1088	1262	1322	1270	1332
1854	1914	ಆನಂದ	1776	1836	1029	1089	1263	1323	1271	1333
1855	1915	ರಾಕ್ಷಸ	1777	1837	1030	1090	1264	1324	1272	1334
1856	1916	ನಳ	1778	1838	1031	1091	1265	1325	1273	1335
1857	1917	ಪಿಂಗಳ	1779	1839	1032	1092	1266	1326	1274	1336
1858	1918	ಕಾಳಯುಕ್ತಿ	1780	1840	1033	1093	1267	1327	1275	1337
1859	1919	ಸಿದ್ಧಾರ್ಥಿ	1781	1841	1034	1094	1268	1328	1276	1338
1860	1920	ರೌದ್ರಿ	1782	1842	1035	1095	1269	1329	1277	1339
1861	1921	ದುರ್ಮತಿ	1783	1843	1036	1096	1270	1330	1278	1340
1862	1922	ದುಂದುಭಿ	1784	1844	1037	1097	1271	1331	1279	1341
1863	1923	ರುಧಿರೋದ್ಗಾರಿ	1785	1845	1038	1098	1272	1332	1280	1342
1864	1924	ರಕ್ತಾಕ್ಷಿ	1786	1846	1039	1099	1273	1333	1281	1343
1865	1925	ಕ್ರೋಧನ	1787	1847	1040	1100	1274	1334	1282	1344
1866	1926	ಕ್ಷಯ	1788	1848	1041	1101	1275	1335	1283	1345

ಸೂಚನೆ: 1. ಕ್ರಿಸ್ತಶಕವೆಂಬ ಇಸವಿ ಜನವರಿ 1ನೇ ತಾರೀಕಿಗೆ ಪ್ರಾರಂಭವಾಗುವದು.

2. ಸಂವತ್ಸರವೂ ಶಾಲಿವಾಹನ ಶಕವೂ (ಒಂದೇ ದಿವಸ) ಮಾರ್ಚ್-ಏಪ್ರಿಲಲ್ಲಿ ಪ್ರಾರಂಭವಾಗುವದು

3. ಮಲಯಾಳ ಕೊಲ್ಲಮ್ ಎಂಬ ಕೇರಳ ಶಕವು ಸಪಟಂಬರ ತಿಂಗಳಲ್ಲಿ "

4. ಫಸಲಿ ಜುಲಾಯಿ 1ನೇ ತಾರೀಕಿಗೆ "

5. ಮಹಮ್ಮದಿ ಹಿಜರಿ ಸಾಮಾನ್ಯವಾಗಿ ವರ್ಷ ವರ್ಷ ೧೫ ದಿವಸಕ್ಕೆ ಮುಂದಾಗಿ "

ಪಂಡಿತೆ ರಮಾಬಾಯಿ ಸರಸ್ವತಿ.

ಪಂಚಾಂಗದ ಎರಡನೆ ಪಾನಿನಲ್ಲಿ ಜಗದ್ವಿಖ್ಯಾತೆಯಾದ ರಮಾಬಾಯಿಯ ಚಿತ್ರವು ಅದೆ. ಈ ಆರ್ಯ ಮಹಿಳೆಯ ವೃತ್ತಾಂತವನ್ನು ಸಂಕ್ಷೇಪವಾಗಿ ಇಲ್ಲಿ ಬರೆಯುತ್ತೇವೆ. ಮಂಗಳೂರಿಗೆ ಸಮೀಪವಾದ ಕಾರ್ಕಳದಲ್ಲಿ ಹೆಚ್ಚುಕಡಿಮೆ ಐವತ್ತು ವರ್ಷಗಳ ಹಿಂದೆ ಅನಂತಶಾಸ್ತ್ರಿ ಎಂಬ ಚಿತ್ತಪಾವನ ಬ್ರಾಹ್ಮಣನು ಹುಟ್ಟಿದನು. ಈತನು ದೇಶದ ವಾಡಿಕೆಯ ಪ್ರಕಾರ ಚಿಕ್ಕತನದಲ್ಲಿಯೇ ಮದುವೆಯಾದನಂತರ ಪುಣೆಯಲ್ಲಿರುವ ರಾಮಚಂದ್ರನೆಂಬ ಶಾಸ್ತ್ರಿಯು ಮಹಾ ವಿದ್ವಾಂಸನೆಂದು ಕೇಳಿ ಅವನ ಬಳಿಯ ಬ್ರಹ್ಮಚಾರಿಯಾಗಿ ವಿದ್ಯಾಭ್ಯಾಸ ಮಾಡ ಬೇಕೆಂದು ಅಲ್ಲಿಗೆ ತೆರಳಿದನು. ಆ ಶಾಸ್ತ್ರಿಯನ್ನು ಕಂಡು ತನ್ನ ಮನೋಗತವನ್ನು ಅವನಿಗೆ ವೇದವರಿಸಿದ್ದಲ್ಲಿ ಅವನೂ ಒಪ್ಪಿಕೊಂಡನು. ಆ ಮಹಾ ವಿದ್ವಾಂಸನು ಪುಣೆಯಲ್ಲಿ ಆಳುತ್ತಿದ್ದ ಪೇಶ್ವೆಯ ಮುದ್ದು ರಾಣಿಗೆ ವಿದ್ಯೆ ಹೇಳುತ್ತಾನೆಂದು ಕೇಳಿ ಒಂದು ದಿನ ಆ ವಿದ್ವಾಂಸನೊಂದಿಗೆ ಅರಮನೆಗೆ ಹೋಗಿರಲು, ಆ ರಾಣಿಯು ಸಂಸ್ಕೃತ ಶ್ಲೋಕಗಳನ್ನು ಹೇಳುವದನ್ನು ಕೇಳಿ ಬಹಳ ಆಶ್ಚರ್ಯ ಪಟ್ಟವನಾದನು. ಸಂಗಡಲೇ ತನ್ನ ಎಳೇ ಪ್ರಾಯದ ಹೆಂಡತಿಗೂ ವಿದ್ಯಾಭ್ಯಾಸ ಮಾಡಿಸ ಬೇಕು ಎಂದು ಅವನಲ್ಲಿ ಆಲೋಚನೆ ಹುಟ್ಟಿತು. ಅವನು ಇಪ್ಪತ್ತಮೂರನೇ ವಯಸ್ಸಿನಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ ಸ್ವದೇಶಕ್ಕೆ ಮರಳಿ ಬಂದು ಗೃಹಸ್ಥಧರ್ಮವನ್ನು ಕೈಕೊಂಡು ತನ್ನ ನಿರ್ಣಯದ ಪ್ರಕಾರವೇ ಹೆಂಡತಿಗೆ ಬೋಧನೆ ಮಾಡುವವನಾದನು. ಆದರೆ ಅವಳಿಗೆ ಕಲಿಯುವದರಲ್ಲಿ ಏನೂ ತಾತ್ಪರ್ಯವಿರಲಿಲ್ಲಾ. ಅವನ ತಾಯಿಯೂ ಇತರ ಬಂಧುಗಳೂ ಕೇವಲ ವಿರೋಧ ಮಾಡಿದ ಕಾರಣ ಅವನು ಆಶೆ ತೊರದು ಹೆಂಡತಿಗೆ ಕಲಿಸಿ ಕೊಡುವದನ್ನು ಬಿಟ್ಟುಬಿಟ್ಟನು. ಕಾಲಾನುಗತವಾಗಿ ಅವರಿಗೆ ಮಕ್ಕಳು ಆದರು; ಕಡೆಗೆ ಹೆಂಡತಿ ಸತ್ತು ಹೋದಳು. ಬಳಿಕ ಅನಂತಶಾಸ್ತ್ರಿಯು ಪುಣೆಯ ಪೇಶ್ವೆಯ ಅರಮನೆಯಲ್ಲಿ ಕಂಡ ಸ್ತ್ರೀ ವಿದ್ಯಾಭ್ಯಾಸವನ್ನು ಮತ್ತೂ ನೆನಸಿ ಬೇಗನೇ ತಾನು ಅದಕ್ಕಾಗಿ ಪರಿಶ್ರಮ ಮಾಡ ಬೇಕೆಂದು ನಿಶ್ಚಯಿಸಿದನು. ಹೀಗಿರುವಾಗ್ಯೆ ಅವನು ಊರನ್ನು ಬಿಟ್ಟು ತೀರ್ಥಯಾತ್ರೆಗೆ ಹೊರಟು ಗೋದಾವರಿ ತೀರಕ್ಕೆ ಮುಟ್ಟಿದನು. ಒಂದು ದಿನ ಮುಂಜಾನೆ ಹೊಳೆಯಲ್ಲಿ ಸ್ನಾನ ಮಾಡುವದಕ್ಕೆ ಹೋದಾಗ ಇನ್ನೊಬ್ಬ ಬ್ರಾಹ್ಮಣನು ಹೆಂಡತಿ ಎರಡು ಮಕ್ಕಳು ಕೂಡ ಅಲ್ಲಿಗೆ ಬಂದದ್ದನ್ನು ಕಂಡು ಮಾತಾಡಿಸುವಲ್ಲಿ ಅವರು ಕೂಡ ತೀರ್ಥಯಾತ್ರೆಗೆ ಹೊರಟವರೆಂದೂ ಸಮೀಪದಲ್ಲಿರುವ ಊರಿನಲ್ಲಿ ಬಿಡಾರವಿದ್ದಾರೆಂದೂ ತಿಳಿದವನಾದನು. ಸ್ನಾನ ಸಂಧ್ಯಾವಂದನೆಗಳು ತೀರಿದ ಬಳಿಕ ಆ ಗೃಹಸ್ಥನು ಅನಂತಶಾಸ್ತ್ರಿಯನ್ನು ನೀವು ಯಾವ ಊರಿನವರು, ಯಾವ ಜಾತಿಯವರು ಎಂದು ವಿಚಾರಿಸಲು ಅವನು ಪೂರ್ವೋತ್ತರವನ್ನೆಲ್ಲಾ ತಿಳಿಸಿದನು. ಆಗ ಅವನು ಒಂಭತ್ತು ವಯಸ್ಸುಳ್ಳ ಲಕ್ಷ್ಮೀಬಾಯಿ ಎಂಬ ತನ್ನ ಮಗಳನ್ನು ನಿನಗೆ ಮದಿವೆ ಮಾಡಿ ಕೊಡುತ್ತೇನೆಂದು ಹೇಳಿದ್ದಕ್ಕೆ ಅನಂತನು ಅಸ್ತು ಪಟ್ಟು ಆ ದಿನದಲ್ಲಿಯೇ ಆ ಕಾರ್ಯವನ್ನು ನಿರ್ಣಯಿಸಿ

ಆದರೆ ಮೂಢಳು ಸ್ವಂತ ಕೈಗಳಿಂದ ಆದನ್ನು ಕೆಡವುತ್ತಾಳೆ. ಸಾಮ. ೧೪, ೧. ೪೫

ಮಾರನೆ ದಿವಸ ವಿಧಾನಪೂರ್ವಕವಾಗಿ ಆ ಕನ್ಯೆಯನ್ನು ವಿವಾಹವಾದನು. ಈ ಚಿಕ್ಕ ಹುಡುಗಿಯನ್ನು ಇವನಿಗೆ ಒಪ್ಪಿಸಿ ಆ ಬ್ರಾಹ್ಮಣನು ತೀರ್ಥಯಾತ್ರೆಗೆ ತೆರಳಿ ಹೋದನು. ಅನಂತಶಾಸ್ತ್ರಿಯು ಹೆಂಡತಿಯನ್ನು ಕರಕೊಂಡು ಒಂಭೈನೂರು ಮೈಲು ದೂರವಿರುವ ತನ್ನ ದೇಶಕ್ಕೆ ಮರಳಿ ಬಂದನು.

ಈ ದಂಪತಿಗಳೇ ರಮಾಬಾಯಿಯ ತಾಯಿತಂದೆಗಳು. ಅನಂತಶಾಸ್ತ್ರಿಯು ಮನೆಗೆ ತಲಪಿ ಎಳೇ ಹೆಂಡತಿಯನ್ನು ತಾಯಿಗೆ ಕೈವರ್ತಿಸಿದ ಮೇಲೆ ಕೂಡಲೇ ಅವಳಿಗೆ ಸಂಸ್ಕೃತ ಹೇಳುವದಕ್ಕೆ ಪ್ರಾರಂಭ ಮಾಡಿದನು. ಆದರೆ ಬಂಧುಗಳು ಪುನಹ ವಿರೋಧ ಮಾಡಿದ್ದರಿಂದಲೂ ತನ್ನ ಸಂಕಲ್ಪವನ್ನು ತ್ಯಜಿಸುವದಕ್ಕೆ ಮನಸ್ಸಿಲ್ಲದ್ದರಿಂದಲೂ ಅನಂತಶಾಸ್ತ್ರಿಯು ಹೆಂಡತಿಯ ಕೂಡ ಮನೆಯಿಂದ ಹೊರಟು ಗಂಗಾ ಮೂಲವೆಂಬಲ್ಲಿಗೆ ಹೋಗಿ ವಸ್ತಿ ಮಾಡುವವನಾದನು. ಅಲ್ಲಿಗೆ ಮುಟ್ಟಿದಂದು ರಾತ್ರಿಯಲ್ಲಿ ಅವರಿಗೆ ಬಿಡಾರವು ಸಿಕ್ಕಲಿಲ್ಲಾ. ಕತ್ತಲಾದಾಗ ದೊಡ್ಡದೊಂದು ಹುಲಿ ಬಂದು ಹಳ್ಳದ ಆಚೆ ಕರೆಯಲ್ಲಿ ಹೆಕ್ಕಳಿಸುತ್ತಾ ಇತ್ತು. ಈ ಲಕ್ಷ್ಮೀಬಾಯಿ ಹಚ್ಚಡವನ್ನು ಹೊದ್ದುಕೊಂಡು ದಿಗುಲಿನಿಂದ ನಡುಗುತ್ತಿರಲು ಗಂಡನು ರಾತ್ರಿ ಎಲ್ಲಾ ಜಾಗರವಿದ್ದು ಬೆಳಗಾಗುವ ವರೆಗೆ ಕಾವಲಿಯಾಗಿದ್ದನು. ಬೆಳಗಿನ ಜಾವಕ್ಕೆ ಹುಲಿಯು ಹೋಗಿತ್ತು. ಈ ರೀತಿಯಲ್ಲಿ ಸುತ್ತುಮುತ್ತಲೂ ದಿನೇ ದಿನೇ ಕೇಳುತ್ತಾ ಕಾಣುತ್ತಾ ಇದ್ದ ಕಾಡ ಮೃಗಗಳ ಕಾಟದಿಂದ ಲಕ್ಷ್ಮೀಬಾಯಿ ಕಕ್ಕಾಬಿಕ್ಕಿಯಾಗುತ್ತಿದ್ದರೂ ಅವಳ ವಿದ್ಯಾಭ್ಯಾಸಕ್ಕೆ ವಿಡ್ಡೂರವಾಗಲಿಲ್ಲಾ. ಅವಳು ಹ್ಯಾಗೆ ಹ್ಯಾಗೆ ದೊಡ್ಡವಳಾಗುತ್ತಾ ಬಂದಳೋ ಹಾಗೆಯೇ ವಿದ್ಯೆಯಲ್ಲಿಯೂ ವೃದ್ಧಿ ಪಡುವವಳಾದಳು. ಅನಂತಶಾಸ್ತ್ರಿಯು ಅಲ್ಲಿ ಮನೆಯನ್ನು ಕಟ್ಟಿಸಿಕೊಂಡು ಇರುತ್ತಿದ್ದನು. ಹೀಗಿರುವಾಗ್ಯೆ ಅವರಿಗೆ ಮೂವರು ಮಕ್ಕಳು ಹುಟ್ಟಿದರು. ಅವರಲ್ಲಿ ಕಿರಿಯಳಾದ ರಮಾಬಾಯಿ ೧೮೫೮ನೇ ಇಸವಿ ಎಪ್ರೆಲ್ ತಿಂಗಳಲ್ಲಿ ಜನನವಾದಳು. ಅನಂತಶಾಸ್ತ್ರಿಯ ಪಾಂಡಿತ್ಯದ ಕೀರ್ತಿ ನಾಲ್ಕು ದಿಕ್ಕುಗಳಲ್ಲಿ ಹಬ್ಬಿ ವಿದ್ಯಾರ್ಥಿಗಳು ಅವನಲ್ಲಿಗೆ ಬಂದು ಕಲಿಯುವವರಾದ್ದರಿಂದಲೂ ತನ್ನ ಹಿರೇ ಮಕ್ಕಳಿಗೆ ಹೇಳಿ ಕೊಡ ಬೇಕಾದ್ದರಿಂದಲೂ ಕಿರಿಯಳಾದ ರಮಾಬಾಯಿಗೆ ಕಲಿಸುವದಕ್ಕೆ ತಂದೆಗೆ ತೆರವು ಸಾಲದೆ ಇರುತ್ತಿತ್ತು. ಆದ್ದರಿಂದ ಲಕ್ಷ್ಮೀಬಾಯಿಯು ಹೊತ್ತುಂಟ್ಟೀ ರಮಾಬಾಯಿಯನ್ನು ಎಬ್ಬಿಸಿ ಪಾಠ ಹೇಳುತ್ತಿರುವಳು. ಅನಂತಶಾಸ್ತ್ರಿ ಹಿರೇ ಮಗಳನ್ನು ಚಿಕ್ಕ ವಯಸ್ಸಿನಲ್ಲಿ ಮದುವೆ ಮಾಡಿ ಕೊಟ್ಟು ಸಾಲದಲ್ಲಿ ಬಿದ್ದನು. ಸಾಲ ಮುಟ್ಟಿಸುವ ಬಗ್ಯೆ ತನ್ನ ಪಾಲಿಗೆ ಬಂದ ಆಸ್ತಿಯನ್ನು ಮಾರ ಬೇಕಾಯಿತು. ಹಿರೇ ಮಗಳನ್ನು ಮದುವೆ ಮಾಡಿ ಕೊಡುವಾಗಲೇ ಅವಳು ತನ್ನಲ್ಲಿದ್ದು ವಿದ್ಯಾಭ್ಯಾಸ ಮಾಡ ಬೇಕೆಂದು ಅಳಿಯನ ಸಂಗಡ ಒಪ್ಪಂದ ಮಾಡಿದ್ದನು. ಆದರೆ ಅಳಿಯನ ಕಡೆಯವರು ಈ ಒಪ್ಪಂದ ವಿಾರಿದ್ದರಿಂದ ರಮಾಬಾಯಿಯನ್ನು ಸರ್ವಥಾ ವಿವಾಹ ಮಾಡಿ ಕೊಡೆನೆಂದು ಅನಂತಶಾಸ್ತ್ರಿಯು ಶಪಥ ಮಾಡಿದನು. ರಮಾಬಾಯಿ ಒಂಭತ್ತು ವರ್ಷದವಳಾಗಿದ್ದಾಗ ಅನಂತಶಾಸ್ತ್ರಿಯು ಕುಟುಂಬವನ್ನು ಕರಕೊಂಡು ತೀರ್ಥಯಾತ್ರೆಗೆ ಹೊರಟನು. ಅವರು ಒಂದು ಠಾವಿನಲ್ಲಿ ಸ್ಥಿರವಾಗಿರದೆ ಒಂದು ತೀರ್ಥದಿಂದ ಇನ್ನೊಂದು ತೀರ್ಥಕ್ಕೆ ಪಯಣವಾಗುತ್ತಿದ್ದರೂ ರಮಾಬಾಯಿಯ ಅಭ್ಯಾಸಕ್ಕೆ ಅಡ್ಡಿಯಾಗಲಿಲ್ಲಾ, ತಾಯಿತಂದೆಗಳ ಬೋಧನೆಯಿಂದ ಅವಳ

ಬುದ್ಧಿ ಪ್ರಕಾಶಿತವಾಗುತ್ತಾ ಬಂದು ಅವಳು ಮಹಾ ವ್ಯುತ್ಪನ್ನೆಯಾದಳು. ನನ್ನ ತಾಯಿ ತಂದೆಗಳು ನನಗೆ ಚಿಕ್ಕಂದಿನಲ್ಲಿಯೇ ಮದುವೆ ಮಾಡಿಸಿ ಅಜ್ಞಾನವೆಂಬ ಭಾವಿಯಲ್ಲಿ ನನ್ನನ್ನು ನೂಕಲಿಲ್ಲಾ ಎಂದು ರಮಾಬಾಯಿ ಹೇಳುತ್ತಾಳೆ. ಹದಿನಾರನೇ ಪ್ರಾಯದ ಮಟ್ಟಿಗೂ ಅವಳು ಮದುವೆಯಾಗದೆ ಇದ್ದಳು. ಹೀಗಿರುತ್ತಾ ಒಂದೇ ತಿಂಗಳಿನಲ್ಲಿ ಅನಂತ ಶಾಸ್ತ್ರಿಯೂ ಲಕ್ಷ್ಮೀಬಾಯಿಯೂ ಮರಣ ಪಟ್ಟರು. ಅನಾಥರಾದ ಮಕ್ಕಳ ಕೈಯಲ್ಲಿ ರೊಕ್ಕವಿಲ್ಲದ್ದರಿಂದ ತಾಯಿತಂದೆಗಳ ಉತ್ತರಕ್ರಿಯೆ ಮಾಡುವದಕ್ಕೆ ಪುರೋಹಿತನು ಸಿಕ್ಕುವದು ಕಷ್ಟವಾಯಿತು. ಕಡೆಗೆ ಇಬ್ಬರು ಬ್ರಾಹ್ಮಣರು ಇವರ ಬಡತನಕ್ಕೆ ಕರುಣೆ ಪಟ್ಟು ಹ್ಯಾಗೂ ಊರ್ಧ್ವ ಕ್ರಿಯೆಯನ್ನು ಮಾಡಿ ತೀರಿಸಿದರು.

ತಾಯಿತಂದೆಗಳು ಮರಣ ಪಟ್ಟನಂತರ ರಮಾಬಾಯಿಯೂ ಅಣ್ಣನೂ ತೀರ್ಥ ಯಾತ್ರೆ ಮಾಡುತ್ತಾ ಮೂರು ವರ್ಷ ಭರತಖಂಡದ ಮುಖ್ಯ ಮುಖ್ಯ ಸಂಸ್ಥಾನಗ ಳನ್ನೆಲ್ಲಾ ಸಂಚರಿಸುವವರಾದರು. ಅವರು ಅನೇಕಾವರ್ತಿ ತತ್ವಾರದಲ್ಲಿ ಬಿದ್ದರು. ತಮ್ಮ ಪಯಣಗಳಲ್ಲಿ ಅವರು ದೇಶೀಯ ಶಾಸ್ತ್ರಾಧಾರಗಳಿಂದ ಹೆಣ್ಣು ಮಕ್ಕಳು ವಿವಾಹವಾಗುವ ಮೊದಲು ಸಂಸ್ಕೃತದಲ್ಲಿಯೂ ಸ್ವಭಾಷೆಯಲ್ಲಿಯೂ ಅಗತ್ಯವಾದ ತಿಳಿವನ್ನು ಸಂಪಾದಿಸಿಕೊಳ್ಳ ಬೇಕು ಎಂಬುವ ವಿಷಯದಲ್ಲಿ ನಿರೂಪಣ ಮಾಡುತ್ತಿ ದ್ದರು. ಪಯಣಗತಿಯಲ್ಲಿ ಅವರು ಕಲ್ಕತ್ತಕ್ಕೆ ಬಂದು ಸೇರಿದರು. ಅಲ್ಲಿ ರಮಾಬಾ ಯಿಯ ವ್ಯುತ್ಪತ್ತಿಯನ್ನು ಅವಳ ನಿರೂಪಣಗಳ ನೂತನ ವಿಷಯಗಳನ್ನು ಕೇಳಿ ಎಲ್ಲರೂ ಆಶ್ಚರ್ಯ ಪಡುವವರಾದರು. ಪಂಡಿತರು ಸಭೆ ಮಾಡಿ ಅವಳನ್ನು ಕರಸಿ ಪರೀಕ್ಷೆ ಮಾಡಿ ಅವಳ ಪಾಂಡಿತ್ಯಕ್ಕೆ ಮೆಚ್ಚಿ ಸರಸ್ವತಿ ಎಂಬ ಬಿರುದಾಂಕಿತವನ್ನು ಕೊಟ್ಟರು. ಕೊಂಚಕಾಲದ ಮೇಲೆ ಅವಳ ಅಣ್ಣನು ತೀರಿ ಹೋದನು. ಈ ವಿಷ ಯದಲ್ಲಿ ರಮಾಬಾಯಿ ಹೇಳುವದು: ನನ್ನ ಅಣ್ಣನು ಅಸ್ವಸ್ಥವಾಗಿದ್ದಾಗ ನನ್ನ ವಿಷ ಯದಲ್ಲಿ ಬಹಳವಾಗಿ ಹಲುಬುತ್ತಿದ್ದನು. ತಾನು ತೀರಿ ಹೋದರೆ ನೀನು ಅನಾಥೆ ಯಾಗಿ ಉಳಿಯುತ್ತಿಯಲ್ಲಾ ಎಂದು ಶೋಕದಿಂದ ಹೇಳಿದ್ದಕ್ಕೆ: ನಿನ್ನನ್ನೂ ನನ್ನನ್ನೂ ಪರಾಮರಿಕೆ ಮಾಡುವವನು ದೇವರಿದ್ದಾನೆ, ಎಂದು ನಾನು ಹೇಳಿದೆ. ಅದಕ್ಕೆ ಅಣ್ಣನು ದೇವರು ನಮ್ಮನ್ನು ಪರಾಮರಿಕೆ ಮಾಡುತ್ತಾನಾದರೆ ತನಗೆ ಇನ್ನೇನೂ ಭಯವಿಲ್ಲಾ ಎಂದು ಅಂದನು. ದೇವರು ಈ ಅನಾಥೆಯಾದ ರಮಾಬಾಯಿಯನ್ನು ಕೈ ಬಿಡಲಿಲ್ಲ. ಅವಳು ದೇವರ ಪರಿಪಾಲನೆಯನ್ನೂ ದಯೆಯನ್ನೂ ಅನುಭವಿಸಿದಳು. ಆರು ತಿಂಗಳಾದ ಮೇಲೆ ವಿಪಿನ ಏಹಾರಿ ಮೇಧಾವಿ ಎಂದು ಹೆಸರುಳ್ಳ ವಕೀಲನು ಅವಳನ್ನು ಮದುವೆಯಾದನು. ಇವನು ಕಲ್ಕತ್ತದ ಮಹಾ ವಿದ್ಯಾಶಾಲೆಯಲ್ಲಿ ಯುರೋಪೀಯ ವಿದ್ಯಾಭ್ಯಾಸ ಮಾಡಿ ಅನೇಕ ಪರೀಕ್ಷೆಗಳಲ್ಲಿ ಜಯಪತ್ರ ಪಡೆದ ವನೂ ಸಂಸ್ಕೃತದಲ್ಲಿ ವ್ಯುತ್ಪನ್ನನೂ ಆಗಿದ್ದನು. ವಧುವರರಿಬ್ಬರು ಬ್ರಾಹ್ಮಣ ಮತ ದಲ್ಲಿ ವಿಶ್ವಾಸವಿಲ್ಲದವರಾದ್ದರಿಂದ ಸರಕಾರಿ ಉದ್ಯೋಗಸ್ಥನ ಸನ್ನಿಧಿಯಲ್ಲಿ ಲೌಕಿಕ ವಿವಾಹ ಮಾಡಿಕೊಂಡರು. ದಂಪತಿಗಳು ಸಂತೋಷದಿಂದ ಜೀವನ ಮಾಡಿಕೊಂಡಿ ರುವಾಗ ಅವರಿಗೆ ಹೆಣ್ಣು ಕೂಸು ಹುಟ್ಟಿತು. ಹೆಣ್ಣು ಶಿಶುವೇ ಜನನವಾಗ ಬೇಕೆಂದು ಇಬ್ಬರೂ ಕಾಂಕ್ಷೆಯುಳ್ಳವರಾದ್ದರಿಂದ ಮೊದಲನೇ ನಿರ್ಣಯ ಮಾಡಿದ ಮೇರೆಗೆ ಆ ಬಾಲೆಗೆ ಮನೋರಮ ಎಂದು ಹೆಸರಿಟ್ಟರು. ಹೀಗಿರುತ್ತಾ ಒಂದುವರೆ ವರ್ಷದಲ್ಲಿ

ಗಂಡನಿಗೆ ದೇವಾಜ್ಞೆಯಾಯಿತು. ರಮಾಬಾಯಿಯು ಪುನಹಾ ಅನಾಥೆಯಾದಳು. ಈ ವಿಷಯದಲ್ಲಿ ಆಕೆ ಹೇಳುವದು: ದೇವರು ನನಗೆ ಉಪದೇಶ ಮಾಡುತ್ತಾನೆಂದೂ ನಾನು ತನ್ನ ಅಡಿಯನ್ನು ಸೇರುವ ಹಾಗೆ ನನ್ನನ್ನು ಎಳೆಯುತ್ತಾನೆಂದೂ ನಾನು ತಿಳಿದವಳಾದೆ.

ವೈಧವ್ಯ ಪ್ರಾಪ್ತವಾದ ಮೇಲೆ ರಮಾಬಾಯಿ ಮೊದಲಿನ ಕ್ರಮದ ಪ್ರಕಾರ ಹಿಂದೂ ಶಾಸ್ತ್ರಗಳನ್ನು ವ್ಯಾಖ್ಯಾನ ಮಾಡುತ್ತಾ ದೇಶದಲ್ಲಿ ವಾಡಿಕೆಯಾದ ಅನಾಚಾರಗಳನ್ನು ಖಂಡಿಸುತ್ತಾ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೂ ಅಭಿವೃದ್ಧಿಗೂ ಅನುಕೂಲವಾದ ನಿರೂಪಣಗಳನ್ನು ಮಾಡಲಾರಂಭಿಸಿದಳು. ಹೆಣ್ಣುಮಕ್ಕಳ ಅಭ್ಯುದಯಕ್ಕಾಗಿಯೇ ಅವಳು ಪುಣೆಯಲ್ಲಿ ಆರ್ಯಮಹಿಳಾ ಸಮಾಜವೆಂಬುವ ಮಂಡಲಿ ಸ್ಥಾಪಿಸಿದಳು. ಮುಂಬಾಯಿ ಸಂಸ್ಥಾನದಲ್ಲೆಲ್ಲಿಯೂ ಈ ಮಂಡಲಿಗೆ ಉಪಮಂಡಲಿಗಳನ್ನು ಏರ್ಪಡಿಸ ಬೇಕೆಂಬ ಹೇತುವಿನಿಂದ ಅವಳು ಅನೇಕ ಊರುಗಳಲ್ಲಿ ನಿರೂಪಣ ಮಾಡುತ್ತಾ ಜನರನ್ನು ಉತ್ಸಾಹ ಪಡಿಸುವವಳಾದಳು. ದೇಶೀಯ ಹೆಣ್ಣುಮಕ್ಕಳ ಗುಣಕ್ಕಾಗಿ ತಾನು ಮಾಡುವ ಪ್ರಯತ್ನಗಳು ಕೈಸಾರ ಬೇಕಾದರೆ ತನಗೂ ಇನ್ನೂ ವಿದ್ಯಾಭ್ಯಾಸವಾಗ ಬೇಕೆಂದು ತಿಳಿದಳು. ಮತ್ತು ದೇವರ ಜ್ಞಾನವು ತನಗೆ ಬೇಕೆಂಬುವ ಆಶೆಯೂ ಅವಳ ಹೃದಯದಲ್ಲಿ ಉಂಟಾಯಿತು. ಮುಖ್ಯತಾ ಇಂಗ್ಲಾಂಡಿಗೆ ಹೋಗಿ ಬರ ಬೇಕೆಂದು ಮಹಾ ಔತ್ಸುಕ್ಯವುಳ್ಳವಳಾಗಿದ್ದಳು. ದೇವರ ದಯೆಯನ್ನು ಮರೆ ಹೊಕ್ಕು ತಾನು ಅರಿಯದಂಥಾ ಪರದೇಶಕ್ಕೆ ಪಯಣ ಮಾಡುವವಳಾದೆ ಎಂದು ಅವಳು ಹೇಳುತ್ತಾಳೆ. ದೇಶೀಯ ಸ್ತ್ರೀಯರ ಮೇಲೆ ಅವಳಲ್ಲಿದ್ದ ಪ್ರೀತಿಯನ್ನು ನೋಡಿದರೆ ಅವಳು ಈ ಪಯಣಕ್ಕೆ ತೆರಳಿದ್ದು ಹೆಚ್ಚು ಎಂದು ತಿಳಿಯ ಬೇಕು. ಇಂಗ್ಲಾಂಡಿಗೆ ಮುಟ್ಟಿದಾಗ ಕೆಲ ಕ್ರಿಸ್ತೀಯ ಬಾಲೆಯರು ಅವಳನ್ನು ಆದರಪೂರ್ವಕವಾಗಿ ಸ್ವಾಗತ ಮಾಡಿ ಮನೆಯಲ್ಲಿ ಸೇರಿಸಿಕೊಂಡರು. ಇವರ ಬಳಿಯಲ್ಲಿರುವಾಗ ಅವಳು ಕ್ರೈಸ್ತೀಯ ಧರ್ಮದ ಸತ್ಯತ್ವವನ್ನೂ ತತ್ವವನ್ನೂ ಅನುಭವ ಮಾಡಿದಳು. ಯೇಸು ಕ್ರಿಸ್ತನ ಸುವಾರ್ತೆಯಲ್ಲಿ ಬ್ರಾಹ್ಮಣರ ವೇದಪುರಾಣಗಳಿಗಿಂತ ಉತ್ತಮ ಜ್ಞಾನವದೆ, ಅದರಲ್ಲಿ ದೇವರ ಅಪ್ಪಣೆಗಳೂ ಸಂಪೂರ್ಣವಾದ ಸದ್ಗುಣಸ್ವರೂಪವೂ ಅದೆ, ಆ ಅಪ್ಪಣೆಗಳನ್ನೂ ದಿವ್ಯ ದೃಷ್ಟಾಂತಗಳನ್ನು ಕೈಕೊಳ್ಳುವದಕ್ಕೆ ಸುವಾರ್ತೆಯು ನಮಗೆ ಬಲವನ್ನು ಕೊಡುತ್ತದೆ ಎಂದು ಆಕೆಯು ಖಚಿತವಾಗಿ ಗ್ರಹಿಸಿಕೊಂಡಳು. ಹೀಗಿರುತ್ತಾ ತನ್ನ ಸಹಜ ಯಥಾರ್ಥತ್ವದಿಂದ ತಿಳಿದ ಸತ್ಯವನ್ನು ಅನುಸರಿಸ ಬೇಕೆಂದು ಕ್ರೈಸ್ತೀಯ ಧರ್ಮವನ್ನು ಅಂಗೀಕರಿಸಿದಳು. ೧೮೮೩ನೇ ಸಪ್ತಂಬರ ತಿಂಗಳಿನಲ್ಲಿ ರಮಾಬಾಯಿ ಮಗಳೊಂದಿಗೆ ಯೇಸು ಕ್ರಿಸ್ತನ ಹೆಸರಿನಲ್ಲಿ ಸ್ನಾನ ಹೊಂದಿ ಕ್ರಿಸ್ತೀಯ ಸಭೆಯನ್ನು ಸೇರಿದಳು.

ಅಲ್ಲಿರುವಾಗ ಆಕೆ ತನ್ನ ಸಾಮರ್ಥ್ಯವನ್ನೂ ಸವಯವನ್ನೂ ವಿದ್ಯಾಭ್ಯಾಸದಲ್ಲಿಯೇ ಕಳೆಯುವವಳಾದಳು. ಮೊದಲನೇ ವರ್ಷದಲ್ಲಿ ಇಂಗ್ಲಿಷು ಭಾಷೆ ಕಲಿಯ ಬೇಕಾಯಿತು. ೧೮೮೪ನೇ ಸಪ್ತಂಬರ ತಿಂಗಳಿನಲ್ಲಿ ರಮಾಬಾಯಿ ಸ್ತ್ರೀವಿದ್ಯಾಶಾಲೆಯಲ್ಲಿ ಸಂಸ್ಕೃತ ಉಪಾಧ್ಯಾಯೆಯ ಉದ್ಯೋಗಕ್ಕೆ ನೇಮಕವಾದಳು. ಶಾಲೆಯಲ್ಲಿ ಪಾಠ ಹೇಳುವ ಸಮಯದ ಹೊರ್ತಾಗಿ ಉಳಿದ ಸಮಯದಲ್ಲಿ ತಾನೇ ವಿದ್ಯಾರ್ಥಿನಿ

ಯಾಗಿ ಗಣಿತ ಪ್ರಕೃತಿವಿದ್ಯೆ ಇಂಗ್ಲಿಷ ಕಾವ್ಯ ಮೊದಲಾದದ್ದನ್ನು ಕಲಿಯುವವಳಾದಳು. ಭಕ್ತಿವಂತೆಯರಾದ ಆ ಇಂಗ್ಲಿಷ ಬಾಲೆಯರ ಒಡನಾಟದಿಂದ ಅವಳ ಆತ್ಮಿಕ ಜೀವನಕ್ಕೂ ಬೆಳವಣಿಗೆಗೂ ಬಹಳ ಸಹಾಯವಾಯಿತು. ವಿದ್ಯಾಭ್ಯಾಸದಲ್ಲಿ ಆಕೆ ಸ್ವಲ್ಪಕಾಲದೊಳಗಾಗಿ ಅಭಿವೃದ್ಧಿ ಪಡೆದವಳಾದ್ದರಿಂದ ಸರಕಾರದವರು ಅವಳಿಗೆ ಭರತಖಂಡದಲ್ಲಿ ಉಪಾಧ್ಯಾಯೆಯ ಉದ್ಯೋಗ ಕೊಡಿಸುತ್ತೇವೆಂದು ವಾಗ್ದತ್ತ ಮಾಡಿದ್ದರು. ಹೀಗಿರುವಾಗ ಅಮೇರಿಕಕ್ಕೆ ಬರಬೇಕೆಂದು ಅವಳಿಗೆ ಆಮಂತ್ರಣವಾದ್ದರಿಂದ ಅವಳು ೧೮೭೮ನೇ ಫೆಬ್ರವರಿಯಲ್ಲಿ ಐದು ವರ್ಷದ ಮಗಳನ್ನು ಕರಕೊಂಡು ಹಡಗವೇರಿ ಅಮೇರಿಕಕ್ಕೆ ಪಯಣವಾದಳು. ಆನಂದಾಬಾಯಿ ಎಂಬುವ ಒಬ್ಬ ಸ್ತ್ರೀಯು ವೈದ್ಯಶಾಸ್ತ್ರವನ್ನು ಕಲಿಯಬೇಕೆಂದು ಮುಂಬಾಯಿಯಿಂದ ಅಮೇರಿಕಕ್ಕೆ ಹೋಗಿದ್ದಳು. ಅವಳು ಪರೀಕ್ಷೆ ಕೊಟ್ಟು ಬಿರುದುಪತ್ರವನ್ನು ಹೊಂದ ತಕ್ಕ ಸಂದರ್ಭದಲ್ಲಿ ರಮಾಬಾಯಿ ಅಲ್ಲಿಗೆ ಹೋದಳು. ಅಮೇರಿಕದ ವಿದ್ಯಾವಂತ ಸ್ತ್ರೀಯರು ಈಕೆಯನ್ನು ಸತ್ಕರಿಸಿ ಉಪಚಾರ ಮಾಡಿದರು. ಆನಂದಾಬಾಯಿಗೆ ಬಿರುದು ಸಿಕ್ಕುವ ದಿವಸ ರಮಾಬಾಯಿ ಮುಕ್ಕಾಲು ತಾಸು ವರೆಗೆ ತನ್ನ ವೃತ್ತಾಂತವನ್ನು ಈ ದೇಶದ ಸ್ತ್ರೀಯರ ವಿದ್ಯಮಾನವನ್ನೂ ಇಂಗ್ಲಿಷ ಭಾಷೆಯಲ್ಲಿ ನೆರೆದಿದ್ದ ಸಭೆಯವರ ಮುಂದೆ ಹೇಳುವವಳಾದಾಗ ಸರ್ವರೂ ಆಕೆಯ ಸಾಮರ್ಥ್ಯಕ್ಕೆ ಮೆಚ್ಚಿದರು. ಆ ರಾಜ್ಯದಲ್ಲಿ ಅವಳು ಪಾಠಶಾಲೆಗಳ ಸ್ಥಿತಿಯನ್ನೂ ಹೆಣ್ಣುಮಕ್ಕಳ ವಿದ್ಯಾಭ್ಯಾಸದ ವರ್ಧನೆಯನ್ನೂ ಅರೈದು ಅನುಭವ ಮಾಡಿಕೊಳ್ಳುತ್ತಾ ಇರುವವಳಾದಳು. ಚಿಕ್ಕ ಚಿಕ್ಕ ಮಕ್ಕಳಿಗೆ ಆಟಪಾಟಗಳಿಂದಲೂ ವಿಷಯ ಪಾಠಗಳಿಂದಲೂ ಬೋಧೆ ಮಾಡುವ ಶಾಲೆಗಳಲ್ಲಿ ಅವಳಿಗೆ ಬಹಳ ಸ್ವಾರಸ್ಯ ತೋರಿದ್ದರಿಂದ ಆ ತರದ ಶಾಲೆಗಳನ್ನು ಭರತಖಂಡದಲ್ಲಿಯೂ ಪ್ರವರ್ತನೆ ಮಾಡುವ ಬಗ್ಗೆ ಮಹಾರಾಷ್ಟ್ರ ಭಾಷೆಯಲ್ಲಿ ಹೆಣ್ಣು ಹುಡುಗಿಯರಿಗೆ ಬೇಕಾಗಿ ಕೆಲ ಪುಸ್ತಕಗಳನ್ನು ಬರೆದಳು.

ಆದರೆ ಮುಖ್ಯವಾಗಿ ಈ ದೇಶದ ಉತ್ತಮ ಕುಲದ ಬಾಲವಿಧವೆಗಳಿಗೆ ವಿದ್ಯೆಯನ್ನೂ ಆಯಾ ಕೈಕೆಲಸವನ್ನೂ ಕಲಿಸುವದಕ್ಕೆ ಧರ್ಮಶಾಲೆಯನ್ನು ಕಟ್ಟಿಸಬೇಕೆಂದು ಅವಳಲ್ಲಿ ಅಪೇಕ್ಷೆ ಇತ್ತು. ಅದಕ್ಕಾಗಿ ಅವಳು ನಿರೂಪಣಗಳನ್ನು ಮಾಡುತ್ತಾ ಅನೇಕ ಸಂಭಾವಿತ ಗೃಹಸ್ಥರಿಂದಲೂ ವಿದ್ವಾಂಸರಿಂದಲೂ ದ್ರವ್ಯಸಹಾಯವನ್ನು ಬೇಡಿ ಪಡೆದು ಈ ದೇಶಕ್ಕೆ ಪುನಹಾ ಬಂದು ಮುಂಬಾಯಿಯಲ್ಲಿ ಅಂಥಾ ಧರ್ಮಶಾಲೆಯನ್ನು ಸ್ಥಾಪಿಸಿದ್ದಾಳೆ. ಕರುಣಾಳು ದೇವರು ಈ ಉತ್ತಮ ಸ್ತ್ರೀಯ ಪ್ರಯತ್ನಗಳೆಲ್ಲಾ ಕೈಸಾರುವಂತೆಯೂ ಭರತಖಂಡದ ಸ್ತ್ರೀಕುಲಕ್ಕೆ ಅರುಣೋದಯವಾದ ಶ್ರೇಯಸ್ಸು ಕ್ರಮೇಣ ಅಭಿವೃದ್ಧಿಯಾಗ್ಗುಂತೆಯೂ ದಯೆ ಮಾಡುವವನಾಗಲಿ!

ಸ

ಠ ಸೇ ತೀ ವೆ ೯.

(೧೮೭೯ನೇ ಇಸವಿ Iನೇ ಆಕ್ಟಿನಲ್ಲಿರುವ ಪಟ್ಟಿಯಿಂದ ಎತ್ತಿ ತೆಗದು ಸಂಕ್ಷೇಪಿಸಿದ್ದು.)

ದಸ್ತಾವೇಜಿನ ವಿವರಣೆ:	ಸ್ಟ್ಯಾಂಪ್ ಹಾಸಲು:

11. (Bill of Exchange or Promissory Note) ಬಿಲ್ ಒಫ್ ಎಕ್ಸ್‌ಚೇಂಜ್ ಯಾ ಪ್ರೊಮಿಸರಿ ನೋಟು (ಅಂದರೆ ವಜಾಯಿಸ ತಕ್ಕ ಪತ್ರ, ಇದರಲ್ಲಿ ಚೆಕ್ಕ್, ದಸ್ತಾವೇಜು, ಬೇಂಕನೋಟು, ಇಲ್ಲವೆ ಕರೆನ್ಸಿನೋಟು ಸೇರುವದಿಲ್ಲ):—

a) ಕೇಳಿದಾಗಲೇ ಪಾವತಿ ಆಗ ತಕ್ಕದ್ದಾಗಿ, ಅದರ ಮೌಲ್ಯ ೨೦ ರೂಪಾಯಿಗೆ ಮೀರಿದರೆ . . . . . ೧ ಆಣೆ

ಒಂದಕ್ಕೆ:	ದುಬಾರೆಪ್ರತಿಗೆ:	ತಿಬಾರೆಪ್ರತಿಗೆ:

b) ಕೇಳಿದಾಗಲೇ ಅಲ್ಲದೆ ಅನ್ಯಥಾ ಪಾವತಿಯಾಗ ತಕ್ಕ ದ್ದಾಗಿ, ಬರದ ಯಾ ಕಂಡ ತಾರೀಕಿನಿಂದ ಒಂದು ಸಂವತ್ಸರಕ್ಕೆ ಮೀರದ ವಾಯಿದೆ ಇದ್ದರೆ:

	ರೂ.	ಆ.	ರೂ.	ಆ.	ರೂ.	ಆ.
ನಮೂದಿಸಿದ ರೂಪಾಯಿ ೨೦೦ಕ್ಕೆ ಮೀರದಿದ್ದರೆ	೦	೩	೦	೧	೦	೧
ರೂಪಾಯಿ ೨೦೦ಕ್ಕೆ ಮೀರಿ ೪೦೦ "	೦	೪	೦	೨	೦	೨
" ೪೦೦ " ೬೦೦ "	೦	೬	೦	೩	೦	೩
" ೬೦೦ " ೧೦೦೦ "	೦	೧೦	೦	೫	೦	೪
" ೧೦೦೦ " ೧೩೦೦ "	೦	೧೩	೦	೬	೦	೪
" ೧೩೦೦ " ೧೬೦೦ "	೧	೦	೦	೮	೦	೬
" ೧೬೦೦ " ೨೫೦೦ "	೧	೯	೦	೧೩	೦	೯
೨೫೦೦ ರೂಪಾಯಿ ಮೇಲೆ ೧೦೦೦೦ ರೂ. ವರೆಗೆ ಪ್ರತಿ ರೂ. ೨೫೦೦ಕ್ಕೆ ಯಾ ಅದರ ಅಂತಕ್ಕೆ.	೧	೯	೦	೧೩	೦	೯
೧೦೦೦೦ ರೂಪಾಯಿ ಮೇಲೆ ೫೦೦೦೦ ರೂಪಾಯಿ ವರೆಗೆ ಪ್ರತಿ ರೂಪಾಯಿ ೫೦೦೦ಕ್ಕೆ ಯಾ ಅದರ ಅಂತಕ್ಕೆ. . .	೫	೦	೧	೯	೧	೦
೫೦೦೦೦ ರೂಪಾಯಿ ಮೇಲೆ ಪ್ರತಿ ರೂಪಾಯಿ ೧೦೦೦೦ಕ್ಕೆ ಯಾ ಅದರ ಅಂತಕ್ಕೆ	೫	೦	೫	೦	೨	೦

c) ಬರದ ತಾರೀಕಿನಿಂದ ಇಲ್ಲವೆ ಕಂಡ ತಾರೀಕಿನಿಂದ ಒಂದು ಸಂವತ್ಸರದ ಮೇಲೆ ಪಾವತಿ ಆಗ ತಕ್ಕದ್ದಾದರೆ— ೧೭ನೇ ಅಂಕೆಯಲ್ಲಿ ಹೇಳಿರುವಷ್ಟೇ ಠಸೆ

12. (Bill of Lading) ಬಿಲ್ ಒಫ್ ಲೇಡಿಂಗ್ ಎಂಬ ಸಾಮಾನು (ಜಹಜಿನ ಮೇಲೆ) ಭರಾವಣಿಚೀಟು . . . . . ೪ ಆಣೆ

13. ದಸ್ತಾವೇಜು (ಈ ಆಕ್ಟಿನಿಂದ ಅಥವಾ ೧೮೭೦ನೇ ಇಸ್ವಿ ಕೋರ್ಟ್‌ಫೀಸ್ ಆಕ್ಟಿನಿಂದ ಅನ್ಯಥಾ ನಿಬಂಧಿಸಲ್ಪಡದೆ ಇರುವಂಥಾದ್ದು):—

ಇದರ ಮೊಬಲಗು ಅಥವಾ ಮೌಲ್ಯ ೧೦ ರೂಪಾಯಿಗೆ ಮೀರದಿದ್ದರೆ ೨ ಆಣೆ
೧೦ ರೂಪಾಯಿಗೆ ಮೀರಿ ೫೦ ರೂಪಾಯಿಗೆ ಮೀರದಿದ್ದರೆ. . ೪ ಆಣೆ
೫೦ " " ೧೦೦ " " . ೮ ಆಣೆ
೧೦೦ ರೂ. ಮೇಲೆ ೧೦೦೦ ರೂ. ವರೆಗೆ ಪ್ರತಿ ರೂ. ೧೦೦ಕ್ಕೆ ಯಾ ಅದರ ಅಂತಕ್ಕೆ ೮ ಆಣೆ
೧೦೦೦ " " ಪ್ರತಿ " ೫೦೦ಕ್ಕೆ ಯಾ ಅದರ ಅಂತಕ್ಕೆ . . ೨ ರೂಪಾಯಿ ೮ ಆಣೆ

14. (Bond or Mortgage-Deed) ದಸ್ತಾವೇಜು ಅಥವಾ ಅಡವು ದಸ್ತಾವೇಜು (ಒಂದು ಉದ್ಯೋಗ ಕೆಲಸವನ್ನು ಸರಿಯಾಗಿ ನೆರವೇರಿಸ ತಕ್ಕ ಬಗ್ಗೆ ಅಥವಾ ತಪ್ಪಿದರಾ ಬಂದ ಹಣವನ್ನು ಕುರಿತು ಸಮಾಧಾನ ಪಡಿಸ ತಕ್ಕ ಬಗ್ಗೆ ಜವಾಬುದಾರಿಯಾಗಿ ಬರಕೊಡುವಂಥಾದು):—

a) ಇದರ ಮೊಬಲಗು ೧೦೦೦ ರೂಪಾಯಿಗೆ ಏರಾದಿದ್ದರೆ—13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

b) ಇತರ ಸಂಗತಿಯಲ್ಲಿ . . . . . * ರೂಪಾಯಿ

16. ಏಲಂ ಮಾಡಿದ ಆಸ್ತಿ ಬಗ್ಗೆ ಕೊಡ ತಕ್ಕ ದರಖಾಸ್ತಪಟ್ಟಿ—21ನೇ ಅಂಕೆಯಲ್ಲಿ ಹೇಳಿರುವಷ್ಟ ಠಸೆ

19. ಇಪ್ಪತ್ತು ರೂಪಾಯಿಗೆ ಏರಿದ ಹಣಕ್ಕೆ (Cheque) ಚೆಕ್ಕ್ ಯಾನೆ ಹುಂಡಿ (ಇದು ಹಣ ಕೇಳಿದಾಗಲೇ ಕೊಡ ತಕ್ಕದ್ದಾಗಿದ್ದರೆ). . ೧ ಆಣೆ

21. 36. (Conveyance) ಕೊನ್ವೆಯನ್ಸ್ ಯಾನೆ ಕ್ರಯಸಾಧನ, ದಾನಸಾಧನ; ಇದರಲ್ಲಿ ಕಾಣಿಸಿದ ಪ್ರತಿಫಲದ ಮೊಬಲಗು

ರೂ. *ಕ್ಕೆ ಏರಾದಿದ್ದರೆ . . . . . ೪ ಆಣೆ

" *ಂ ಏರಿ ರೂ. ೧೦೦ಕ್ಕೆ ಏರಾದಿದ್ದರೆ . . . . ೧ ರೂಪಾಯಿ

" ೧೦೦ " " ೧೦೦೦ವರೆಗೆ ಪ್ರತಿ ರೂ. ೧೦೦ಕ್ಕೆ ಯಾ ಅದರ ಅಂಶಕ್ಕೆ ೧ ರೂಪಾಯಿ

" ೧೦೦೦ " " ಪ್ರತಿ *ಂ೦ ರೂಪಾಯಿಗೆ ಯಾ ಅದರ ಅಂತಕ್ಕೆ * ರೂಪಾಯಿ

